# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಶುಕ್ರವಾರ, ಜನವರಿ 31, 2025

ಸಂಪುಟ : 51  ಸಂಚಿಕೆ : 259  ☎ 08192-254736  91642 99999  RNI No: 27369  ಪುಟ : 6  ರೂ : 5.00  www.janathavani.com  janathavani@mac.com






**ಮಹಾತ್ಮರಿಗೆ ನಮನ ...**

ನವದೆಹಲಿಯ ಗಾಂಧಿ ಸ್ಮೃತಿಯಲ್ಲಿ ರಾಷ್ಟ್ರಪಿತ ಅವರ ಪುಣ್ಯತಿಥಿಯ ಅಂಗವಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹುತಾತ್ಮರ ದಿನದಂದು ಮಹಾತ್ಮ ಗಾಂಧಿ ಅವರಿಗೆ ಗೌರವ ನಮನ ಸಲ್ಲಿಸಿದರು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಹ ಇದ್ದಾರೆ. ರಾಜ್‌ಘಾಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಹಾತ್ಮ ಗಾಂಧಿ ಅವರಿಗೆ ಗೌರವ ಸಲ್ಲಿಸಿದರು. (ಬಲಚಿತ್ರ)

## ಗಾಂಧಿ ಮಾರ್ಗ ಬಿಟ್ಟರೆ ನಮಗೆ ಬೇರೆ ದಾರಿಯಿಲ್ಲ

### 'ದೇಶಕ್ಕಾಗಿ ತ್ಯಾಗ ಮಾಡಿದ ಹುತಾತ್ಮರ ನೆನಪಿನ ದಿನಾಚರಣೆ'ಯಲ್ಲಿ ಸಿಎಂ ಸಲಹೆಗಾರ ಪಾಟೀಲ್



ದಾವಣಗೆರೆ, ಜ. 30- ಕೋಮುವಾದ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಗಾಂಧೀಜಿ ಸಿದ್ಧಾಂತದಂತೆ ದಾರಿ ಕಂಡುಕೊಳ್ಳಬೇಕಿದೆ. ಗಾಂಧೀ ಮಾರ್ಗ ಬಿಟ್ಟರೆ ನಮಗೆ ಬೇರೆ ದಾರಿ ಇಲ್ಲ ಎಂದು ಮುಖ್ಯಮಂತ್ರಿಗಳ ಸಲಹೆಗಾರ, ಆಳಂದ ಶಾಸಕ ಬಿ.ಆರ್. ಪಾಟೀಲ್ ಹೇಳಿದರು.

ರಾಜ್ಯ ರೈತ ಸಂಘಗಳ ಒಕ್ಕೂಟ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ 'ದೇಶಕ್ಕಾಗಿ ತ್ಯಾಗ ಮಾಡಿದ ಹುತಾತ್ಮರ ನೆನಪಿನ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದುಡಿಯುವ ಕೈಗಳೇ ದೇಶದ ಸಂಪತ್ತು ಎಂದು ಗಾಂಧೀಜಿ ಹೇಳಿದ್ದರು. ಆದರೆ ಆ ಕೈಗಳಿಗೆ ಇಂದು ಕೆಲಸ ಇಲ್ಲವಾಗಿದೆ. ರಾಮರಾಜ್ಯ, ಗ್ರಾಮ ಸ್ವರಾಜ್ಯದ ಕಲ್ಪನೆ ನನಸಾಗುತ್ತಿಲ್ಲ. ಗಾಂಧೀಜಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಚಿಂತಿಸಿದ್ದರು. ಆದರೆ ಇಂದು ಮತ್ತೆ ಅಧಿಕಾರ ಕೇಂದ್ರೀಕರಣದತ್ತ ಸಾಗುತ್ತಿದೆ. ಏಕ ವ್ಯಕ್ತಿ ಉಪಾಸನೆ ಹೆಚ್ಚುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ತಂದು ಕೊಟ್ಟವರನ್ನು ಮರೆಯುತ್ತಿರುವುದಷ್ಟೇ ಅಲ್ಲ, ಅವರನ್ನು ಅವಹೇಳನ ಮಾಡಲಾಗುತ್ತಿದೆ. ಗಾಂಧೀಜಿಯನ್ನು ಖಳನಾಯಕನನ್ನಾಗಿ ಬಿಂಬಿಸಿದರೆ, ಗಾಂಧೀಜಿ ಕೊಂದ ಗೂಡ್ಸೆ ಹೆಸರಲ್ಲಿ ದೇವಸ್ಥಾನಗಳು ನಿರ್ಮಾಣವಾಗುತ್ತಿವೆ. ರಾಮನ ಭಕ್ತರಾಗಿದ್ದ ಗಾಂಧಿಯನ್ನು ರಾಮ ಭಕ್ತರೇ ಅವಹೇಳನ ಮಾಡುತ್ತಿರುವುದು ವಿಷಾದನೀಯ. ಇದೇ ಪರಿಸ್ಥಿತಿ ಮುಂದುವರೆದರೆ ದೇಶದಲ್ಲಿ ಶಾಂತಿ ಸ್ಥಾಪನೆ ಅಸಾಧ್ಯ ಎಂದು ಎಚ್ಚರಿಸಿದರು.

ಸಂವಿಧಾನವನ್ನೂ ಬದಲಿಸುವ ಗಂಭೀರ ಚಿಂತನೆಗಳು ನಡೆಯುತ್ತಿವೆ. ಬಂಡವಾಳ ಶಾಹಿ ವ್ಯವಸ್ಥೆ ಮತ್ತೆ ಬಲಿಷ್ಠವಾಗುತ್ತಿದೆ. ಕೃಷಿ ರೈತರ ಕೈ ತಪ್ಪಿ ಮತ್ತೆ ಕಾರ್ಪೊರೇಟ್ ಕಡೆ ಹೋಗುತ್ತಿದೆ. ರೈತರು ಹಾಗೂ ಕೃಷಿ ಭೂಮಿಯೊಂದಿಗೆ ಇದ್ದ ಭಾವನಾತ್ಮಕ ಸಂಬಂಧ ಮರೆಯಾಗುತ್ತಿದೆ ಎಂದರು.

ಗಾಂಧೀಜಿ ಭಾರತ ನಿರ್ಮಾಣ ಇಂದಿನ ಅನಿವಾರ್ಯತೆಯಾಗಿದೆ. ಈ ಹಿನ್ನೆಲೆಯಲ್ಲಿಯೇ ಸರ್ಕಾರ ಇಡೀ ವರ್ಷ ಗಾಂಧೀ ಭಾರತ ಆಚರಿಸುತ್ತಿದೆ ಎಂದು ಹೇಳಿದರು.

ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಹುತಾತ್ಮರೆಲ್ಲರೂ ರೈತ ಕುಟುಂಬದಿಂದ ಬಂದವರೇ. ಹುತಾತ್ಮರಾದಾಗ ಸರ್ಕಾರದಿಂದ ಶವ ಸಂಸ್ಕಾರದ ವೇಳೆ ಗೌರವ ಸಲ್ಲಿಸುವುದು ಬಿಟ್ಟರೆ, ಯಾವೊಬ್ಬ ರಾಜಕಾರಣಿಯು ಅವರ ಮನೆಗಳಿಗೆ ಭೇಟಿ ನೀಡುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಹಕ್ಕೊತ್ತಾಯ ಮಂಡಿಸುವ ಮೂಲಕ ಸರ್ಕಾರಕ್ಕೆ, ರಾಜಕಾರಣಿಗಳಿಗೆ ಎಚ್ಚರಿಸುವ ಕೆಲಸ ಮಾಡಲಾಗುತ್ತಿದೆ. ಜೊತೆಗೆ ಮುಂದಿನ ಪೀಳಿಗೆಗೆ ಹುತಾತ್ಮರ ಇತಿಹಾಸ ತಿಳಿಸಬೇಕಿದೆ ಎಂದರು.

ಕರ್ನಾಟಕ ರಾಜ್ಯ ರೈತ ಸಂಘಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಲ್ಲಿ ಹೆಚ್ಚು ವರ್ಷ ಮೀಸಲಾತಿ ಇರಬಾರದು ಎಂದು ಹೇಳಲಾಗಿದೆ. ಆದರೆ ಮೂವತ್ತು ವರ್ಷಗಳಾದರೂ ಮೀಸಲಾತಿ ಮುಂದುವರೆದಿದೆ. ಅದೇ ವರ್ಗದ ತಳ ವರ್ಗದ, ಸಾಮಾಜಿಕವಾಗಿ ಹಿಂದುಳಿದವರು ಮೀಸಲಾತಿ ವಂಚಿತರಾಗುತ್ತಿದ್ದಾರೆ ಎಂದರು.

ಕೇಂದ್ರ ಸರ್ಕಾರಿ ನೌಕರರ ವೇತನ ಹೆಚ್ಚಿಸುವ ಸರ್ಕಾರ, ರೈತರ ಹಿತ ಕಾಯುವಲ್ಲಿ ವಿಫಲವಾಗಿದೆ. ಸ್ವಾಮಿನಾಥನ್ ವರದಿ ಜಾರಿ, ರೈತರ ಬೆಳೆಗೆ ವೈಜ್ಞಾನಿಕ ಬೆಲೆ (2ನೇ ಪುಟಕ್ಕೆ)

**ಮೈಕ್ರೋ ಫೈನಾನ್ಸ್ ಕಂಪನಿಗಳ ಮೇಲೆ ಸರ್ಕಾರದ ಲಗಾಮು**

## ಸುಗ್ರೀವಾಜ್ಞೆಗೆ ಸಂಪುಟ ಅಸ್ತು



ಬೆಂಗಳೂರು,ಜ.30- ಮೈಕ್ರೋ ಫೈನಾನ್ಸ್ ಕಂಪನಿಗಳ ಮೇಲೆ ಲಗಾಮು ಹಾಕುವ ಸುಗ್ರೀವಾಜ್ಞೆಗೆ ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಅನುಮೋದನೆ ನೀಡಿದೆ.

ಸುಗ್ರೀವಾಜ್ಞೆಯನ್ನು ಯಾವ ರೀತಿ ಜಾರಿಗೊ ಳಿಸಬೇಕೆಂಬ ಅಧಿಕಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಲಾಗಿದೆ.

ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್, ಸುಗ್ರೀವಾಜ್ಞೆಯಲ್ಲಿ ಸಾಲಗಾರರ ಹಿತ ಕಾಪಾಡುವ ಅಂಶಗಳನ್ನು ಅಳವಡಿಸಲಾಗಿದೆ.

**ಲೋಪದೋಷ ಸರಿಪಡಿಸಿ ಜಾರಿಗೊಳಿಸುವ ಅಧಿಕಾರ ಸಿದ್ದರಾಮಯ್ಯ ಹೆಗಲಿಗೆ**

ಆದರೆ, ಇದರಲ್ಲಿ ಸಣ್ಣ-ಪುಟ್ಟ ಲೋಪ ದೋಷಗಳಿವೆ ಎಂದು ಕಾನೂನು ಮತ್ತು ಆರ್ಥಿಕ ಇಲಾಖೆ ಸಲಹೆ ಹಿನ್ನೆಲೆಯಲ್ಲಿ ಸಂಪುಟ ಸುಗ್ರೀವಾಜ್ಞೆಗೆ ಅನುಮೋದನೆ ನೀಡಿ ಇರುವ ಸಣ್ಣ-ಪುಟ್ಟ ಲೋಪದೋಷಗಳನ್ನು ಬಗೆಹರಿಸಿ ಜಾರಿಗೆ ತರುವ ಅಧಿಕಾರವನ್ನು ಮುಖ್ಯಮಂತ್ರಿ ಅವರಿಗೆ ನೀಡಿದೆ.

ಅವರು, ಹಣಕಾಸು, ಕಾನೂನು, ಕಂದಾಯ, ಗೃಹ (2ನೇ ಪುಟಕ್ಕೆ)

## ಹೆದರಿಸಿ, ನಿಂದಿಸಿ ಸಾಲ ವಸೂಲಿ ಸಲ್ಲ

### ಮೈಕ್ರೋ ಫೈನಾನ್ಸ್ ಮುಖ್ಯಸ್ಥರಿಗೆ ಡಿಸಿ ಗಂಗಾಧರ ಸ್ವಾಮಿ ಎಚ್ಚರಿಕೆ



ದಾವಣಗೆರೆ, ಜ.30-ಗೂಂಡಾಗಳಿಂದ ಜನರನ್ನು ಹೆದರಿಸಿ, ನಿಂದಿಸಿ ಸಾಲ ವಸೂಲಾತಿಗೆ ಮುಂದಾದರೆ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಮೈಕ್ರೋ ಫೈನಾನ್ಸ್ ಮುಖ್ಯಸ್ಥರಿಗೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ಗುರುವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಕಿರು ಹಣಕಾಸು ಸಂಸ್ಥೆಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು, ಸಾಲ ವಿತರಣೆ ಮತ್ತು ಮರುಪಾವತಿ ಪ್ರಕ್ರಿಯೆಗಳಲ್ಲಿ ಕೈಗೊಳ್ಳುವ ಕ್ರಮಗಳ ಕುರಿತು ಸಲಹೆ ಮತ್ತು ಸೂಚನೆಗಳ ಕುರಿತು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತಾನಾಡಿದರು.

ಗುರುವಾರ ಜಿಲ್ಲಾ (2ನೇ ಪುಟಕ್ಕೆ)

- 2 ಲಕ್ಷ ರೂ. ವರೆಗೆ ಮಾತ್ರ ಸಾಲ ನೀಡಲು ಅವಕಾಶ
- ಗರಿಷ್ಠ ಶೇ.18ಕ್ಕಿಂತ ಹೆಚ್ಚು ಬಡ್ಡಿ ವಸೂಲಿ ಮಾಡುವಂತಿಲ್ಲ
- ನೀಡಿದ ಸಾಲ ಬಾಕಿ ವಸೂಲಿ ವೇಳೆ ಕೆವೈಸಿ ಕೇಳುವಂತಿಲ್ಲ
- ಬೆ.9 ರಿಂದ ಸಂಜೆ 6ರ ವರೆಗೆ ಮಾತ್ರ ಸಾಲ ವಸೂಲಿ
- ರೌಡಿಗಳನ್ನು ಬಿಟ್ಟು ದಬ್ಬಾಳಿಕೆ ಮಾಡುವಂತಿಲ್ಲ

## ಆಂಧ್ರದಲ್ಲಿ ವಾಟ್ಸಾಪ್ ಆಡಳಿತಕ್ಕೆ ಚಾಲನೆ

ಅಮರಾವತಿ, ಜ. 30- ಆಂಧ್ರಪ್ರದೇಶದ ಐ.ಟಿ. ಸಚಿವ ನಾರಾ ಲೋಕೇಶ್ ಅವರು ವಾಟ್ಸಾಪ್ ಆಡಳಿತಕ್ಕೆ ಚಾಲನೆ ನೀಡಿದ್ದಾರೆ. ವಾಟ್ಸಾಪ್ ಮೂಲಕ ಸಾರ್ವಜನಿಕರಿಗೆ 161 ಸೇವೆಗಳನ್ನು ಒದಗಿಸಲಾಗುವುದು.

ಮನ ಮಿತ್ರ ಎಂಬ ಹೆಸರಿನ ಈ ಯೋಜನೆಯ ಮೂಲಕ ಜನರು ದಾಖಲೆಗಳಿಗಾಗಿ ಕಚೇರಿಗಳಿಗೆ ಅಲೆದಾಡುವುದು ತಪ್ಪಿಸಲಾಗು ವುದು ಎಂದು ಸರ್ಕಾರ ತಿಳಿಸಿದೆ.

ಮೊದಲ ಹಂತದಲ್ಲಿ ಕಂದಾಯ, ಇಂಧನ, ದತ್ತಿ ಹಾಗೂ ಪೌರಾಡಳಿತ ಸೇರಿದಂತೆ ಹಲವು ಇಲಾಖೆಗಳ ಸೇವೆಗಳನ್ನು ಒದಗಿಸಲಾಗು (2ನೇ ಪುಟಕ್ಕೆ)

## ಮುಡಾ ಅಕ್ರಮದಲ್ಲಿ ಸಿಎಂ, ಪತ್ನಿ ಪಾತ್ರ

### ಹೈಕೋರ್ಟ್‌ಗೆ ನೀಡಿರುವ ತನಿಖಾ ವರದಿಯಲ್ಲಿ ಇ.ಡಿ ಉಲ್ಲೇಖ

ಬೆಂಗಳೂರು,ಜ.30- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 14 ಬಿಡಿ ನಿವೇಶನಗಳನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಅಕ್ರಮ ಹಣ ವರ್ಗಾವಣೆ ಯತ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ಅವರ ಪಾತ್ರ ಇದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ಹೈಕೋರ್ಟ್‌ಗೆ ನೀಡಿರುವ ತನಿಖಾ ವರದಿಯಲ್ಲಿ ಉಲ್ಲೇಖಿಸಿದೆ.

**ಮುಡಾದಲ್ಲಿ ಬಿಡಿ ನಿವೇಶನಗಳ ಹಂಚಿಕೆಯಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ದಾಖಲೆ ಪಡೆದು ಕೊಳ್ಳುವಾಗ 37 ಸಾಕ್ಷ್ಯಗಳನ್ನು ದಾಖಲಿಸಲಾಗಿದೆ ಎಂದು ಇಡಿ ಹೇಳಿದೆ.**

ಮುಡಾದ ಮಾಜಿ ಆಯುಕ್ತ ಡಿ.ಬಿ.ನಟೇಶ್ ಕುಮಾರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ. ಅಂದಿನ ಆಯುಕ್ತ ನಟೇಶ್ ಅವರು ಇದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದಿದೆ. ನಟೇಶ್ ನಮ್ಮ ತನಿಖೆಗೆ ಪ್ರಮುಖ ವ್ಯಕ್ತಿಯಾಗಿದ್ದು, ಅವರನ್ನು ವಿಚಾರಣೆಗೆ ಒಳಪಡಿಸಿದಾಗ, ಫೋರ್ಜರಿ ಮತ್ತು ನಕಲಿ ಸಹಿ ವಿಚಾರವನ್ನೂ ತಿಳಿಸಿದ್ದಾರೆ, ಹೀಗಾಗಿ ನಮಗೆ ಅವರ ವಿಚಾರಣೆಯ ಅಗತ್ಯವಿದೆ ಎಂದಿದೆ. ಮುಖ್ಯಮಂತ್ರಿ ಅವರ ಪತ್ನಿ ಪಾರ್ವತಿ ಅವರಿಗೆ 14 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ, ಮುಡಾ ಅಧಿಕಾರಿಗಳ ಮೇಲೆ ತಮ್ಮ ಪ್ರಭಾವ ಬಳಸಿ ಈ ನಿವೇಶನಗಳನ್ನು ಪಡೆದು ಕೊಂಡಿದ್ದಾರೆ.

ಇ.ಡಿ. ತನಿಖೆ ಆರಂಭವಾದ ನಂತರ ಪಾರ್ವತಿ ಅವರು 14 ನಿವೇಶನಗಳನ್ನು ಹಿಂತಿರುಗಿಸಿದ್ದಾರೆ. ಆದರೆ, ನಿವೇಶನ ಪಡೆಯುವ ಸಂದರ್ಭದಲ್ಲಿ ದಾಖಲೆಗಳನ್ನು ತಿದ್ದಲಾಗಿದೆ, ಸಹಿಯನ್ನು ನಕಲು ಮಾಡ ಲಾಗಿದೆ, ಸಾಕ್ಷ್ಯಗಳನ್ನು ನಾಶ ಮಾಡಿರು ವುದು ತನಿಖೆಯಿಂದ ಪತ್ತೆಯಾಗಿದೆ. (2ನೇ ಪುಟಕ್ಕೆ)

## ಜನ್ಮಸಿದ್ಧ ಪೌರತ್ವ ನಿರ್ಬಂಧಿಸಲು ಅಮೆರಿಕದಲ್ಲಿ ಮಸೂದೆ

ವಾಷಿಂಗ್ಟನ್, ಜ. 30- ಅಮೆರಿಕದಲ್ಲಿ ಜನ್ಮಸಿದ್ಧವಾಗಿ ನೀಡಲಾಗುವ ಪೌರತ್ವವನ್ನು ನಿರ್ಬಂಧಿಸಲು ರಿಪಬ್ಲಿಕನ್ ಸೆನೆಟರ್‌ಗಳು ಕಾಂಗ್ರೆಸ್‌ನಲ್ಲಿ ಮಸೂದೆಯೊಂದನ್ನು ಮಂಡಿಸಿದ್ದಾರೆ. ಅಕ್ರಮ ವಲಸಿಗರು ಹಾಗೂ ತಾತ್ಕಾಲಿಕ ವೀಸಾ ಮೇಲೆ ಬಂದಿರುವವರಿಗೆ ಜನಿಸಿದ ಮಕ್ಕಳಿಗೆ ಪೌರತ್ವ ನೀಡದಿರಲು ಮಸೂದೆ ಮಂಡಿಸಲಾಗಿದೆ.

ಜನ್ಮಸಿದ್ಧವಾದ ಪೌರತ್ವವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಕಾರಣ ಅಕ್ರಮ ವಲಸೆ ಹೆಚ್ಚಾಗಿದೆ ಹಾಗೂ ರಾಷ್ಟ್ರದ ಸುರಕ್ಷತೆಗೆ ಧಕ್ಕೆಯಾಗಿದೆ. ಕೇವಲ 33 ದೇಶಗಳು ಮಾತ್ರ (2ನೇ ಪುಟಕ್ಕೆ)

## ಹೈಕೋರ್ಟ್‌ಗಳಿಗೆ ಹಂಗಾಮಿ ಜಡ್ಜ್‌ಗಳ ನೇಮಕಕ್ಕೆ ಅನುಮತಿ

ನವದೆಹಲಿ, ಜ. 30 - 18 ಲಕ್ಷ ಕ್ರಿಮಿನಲ್ ಪ್ರಕರಣಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಹೈಕೋರ್ಟ್‌ಗಳು ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಿಸಿಕೊಳ್ಳಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸೂರ್ಯಕಾಂತ್ ಅವರನ್ನು ಒಳಗೊಂಡ ಪೀಠ ಇದಕ್ಕೆ ಅನುಮತಿ ನೀಡಿದೆ. ಹೈಕೋರ್ಟ್ ಪೂರ್ಣ ಸಂಖ್ಯಾಬಲದ ಶೇಕಡಾ ಹತ್ತರಷ್ಟು ನ್ಯಾಯಮೂರ್ತಿಗಳನ್ನು ಹಂಗಾಮಿಯಾಗಿ ಸೇರಿಸಿ ನೇಮಿಸಲು ಅವಕಾಶ ಕಲ್ಪಿಸಲಾಗಿದೆ.



**ಭಕ್ತಸಾಗರ...**

ಪ್ರಯಾಗರಾಜ್ ಬಳಿಯ ತ್ರಿವೇಣಿ ಸಂಗಮದ ತಟದಲ್ಲಿನ ಮಹಾಕುಂಭಮೇಳದಲ್ಲಿ ಭಕ್ತಸಾಗರ.


**ಜೈನ ಸಮಾಜದ ಧೃವತಾರೆ ಧರ್ಮೇಶ್ ಸೆಹಲೋತ್ ನಿಧನ**



ಜನನ : 24.03.1984

ಮರಣ : 30.01.2025

ದಾವಣಗೆರೆಯ ಜೈನ ಸಮಾಜದ ಧಾರ್ಮಿಕ ಮತ್ತು ಅಧ್ಯಾತ್ಮಿಕ ಕಾರ್ಯಕರ್ತರೂ,
ಚೌಕಿಪೇಟೆಯ ಲಾಂಚೀ ಬಟ್ಟೆ ಅಂಗಡಿ ಮಾಲೀಕರೂ ಆಗಿದ್ದ

**ಶ್ರೀಯುತ ಧರ್ಮೇಶ್ ಜೈನ್**

ಇವರು ಇಂದು ತಮ್ಮ ನಶ್ವರವಾದ ದೇಹ ತ್ಯಾಗಮಾಡಿ ಜಿನೈಕ್ಯರಾದರು.
ಇವರ ಅಂತಿಮ ಯಾತ್ರೆಯನ್ನು ಇಂದು ಪಿ.ಜೆ. ಬಡಾವಣೆಯ ಸ್ವಗೃಹದಿಂದ ಕಾಯಿಪೇಟೆ
ಮತ್ತು ಚೌಕಿಪೇಟೆಯ ಜೈನ್ ದೇವಸ್ಥಾನಗಳ ಮಾರ್ಗವಾಗಿ ಪಿ.ಬಿ.ರಸ್ತೆಯ ದಾದಾವಾಡಿಗೆ ತೆರಳಿ
ಅಲ್ಲಿ ಸಮಸ್ತ ಜೈನ್ ಸಮಾಜದ ಸಮ್ಮುಖದಲ್ಲಿ ಅಗ್ನಿ ಸ್ಪರ್ಶದ ಮೂಲಕ
ಪಾರ್ಥಿವ ಶರೀರವನ್ನು ಪಂಚಭೂತಗಳಲ್ಲಿ ಲೀನಗೊಳಿಸಲಾಯಿತು.
ಈ ದುಃಖದ ಸಮಯದಲ್ಲಿ ನಮ್ಮ ಕುಟುಂಬದವರಿಗೆ ಹೆಗಲಾಗಿ ನಿಂತು ಸಂಪೂರ್ಣವಾಗಿ
ಸಹಾಯ ಮತ್ತು ಸಹಕಾರ ನೀಡಿದ ಶ್ರೀ ಸುಪಾರ್ಶ್ವನಾಥ ಜೈನ ಶ್ವೇತಾಂಬರ ಮೂರ್ತಿ
ಪೂಜಕ ಸಂಘದ ಪದಾಧಿಕಾರಿಗಳಿಗೂ, ನಗರದ ಸಮಸ್ತ ಜೈನ ಬಾಂಧವರಿಗೂ, ವಿಶೇಷವಾಗಿ ಧರ್ಮೇಶ್
ರವರ ಅಂತಿಮ ಸಮಯದಲ್ಲಿ ಅತ್ಯುತ್ತಮ ಆರೈಕೆ ನೀಡಿ ಸಹಕರಿಸಿದ ಶ್ರೀ ಭಗವಾನ್ ಮಹಾವೀರ ಜೈನ್
ಆಸ್ಪತ್ರೆಗೂ ನಮ್ಮ ಕುಟುಂಬದವರೆಲ್ಲರ ಪರವಾಗಿ ಅನಂತಾನಂತ ಧನ್ಯವಾದಗಳು.

ದುಃಖತಪ್ತ ಕುಟುಂಬ ವರ್ಗ :

♦ ವರ್ಧಮಾನ್ ಕ್ರಿಯೇಷನ್ಸ್,
ಹುಕ್ಮಿಚಂದ್, ಲಲಿತ್, ಉತ್ತಮ್, ಕಮಲ್, ದಿನೇಶ್, ನರೇಶ್,
ಮಹಾವೀರ್ ಮತ್ತು ಸಂಪೂರ್ಣ ಸೆಹಲೋತ್ ಪರಿವಾರ

# ಜಗಳೂರು ಕಾನಿಪ ಸಂಘಕ್ಕೆ ಅತ್ಯುತ್ತಮ ಪತ್ರಕರ್ತರ ಸಂಘದ ಪ್ರಶಸ್ತಿ ಪ್ರದಾನ

ಜಗಳೂರು, ಜ. 30- ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಕೊಡಮಾಡುವ ಅತ್ಯುತ್ತಮ ತಾಲ್ಲೂಕು ಸಂಘದ ಪ್ರಶಸ್ತಿಗೆ ಜಗಳೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಆಯ್ಕೆಯಾಗಿದ್ದು, ತುಮಕೂರು ನಗರದಲ್ಲಿ ನಡೆದ 39 ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಸೇರಿದಂತೆ, ಗಣ್ಯರಿಂದ ಪ್ರಶಸ್ತಿ ನೀಡಿ ಗೌರವಿಸಲಾಯಿತು .

ಪ್ರಶಸ್ತಿ ಸ್ವೀಕರಿಸಿ ತಾಲ್ಲೂಕು ಅಧ್ಯಕ್ಷ ಜಿ.ಎಸ್. ಚಿದಾನಂದ್ ಮಾತನಾಡಿ, ಜಗಳೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಸಾಂಘಿಕ ಮತ್ತು ಕ್ರಿಯಾಶೀಲ ಚಟುವಟಿಕೆಗಳನ್ನು ನಡೆಸಿರುವುದಕ್ಕೆ, ಅತ್ಯುತ್ತಮ ಪತ್ರಕರ್ತರ ಸಂಘ ಪ್ರಶಸ್ತಿ ನೀಡಿರುವುದಕ್ಕೆ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಸೇರಿದಂತೆ ಪದಾಧಿಕಾರಿಗಳಿಗೆ ತಾಲ್ಲೂಕು ಘಟಕದ ವತಿಯಿಂದ ಹೃದಯಪೂರ್ವಕ ಕೃತಜ್ಞತೆ ಸಲ್ಲಿಸಿದರು.



ಸಂಘದ ಪ್ರತಿಯೊಬ್ಬ ಸದಸ್ಯರ ಸಹಕಾರ ಮತ್ತು ಶ್ರಮದ ಫಲವಾಗಿ ಅತ್ಯುತ್ತಮ ತಾಲ್ಲೂಕು ಸಂಘ ಎಂಬ ಹೆಗ್ಗಳಿಕೆಗೆ ನಾವು ಪಾತ್ರರಾಗಿದ್ದೇವೆ..

ಮಾಜಿ ಶಾಸಕ ಎಸ್.ವಿ.ರಾಮಚಂದ್ರಪ್ಪ ಅವರು ನೀಡಿರುವ 10 ಲಕ್ಷ ಅನುದಾನದಿಂದ ಭವನ ನಿರ್ಮಾಣ ಹಂತದಲ್ಲಿದ್ದು, ಹಾಲಿ ಶಾಸಕ ಬಿ. ದೇವೇಂದ್ರಪ್ಪ, ಸಂಸದರು, ಸಚಿವರೊಂದಿಗೆ ರಾಜ್ಯ ಪದಾಧಿಕಾರಿಗಳ ಸಲಹೆಯೊಂದಿಗೆ ತಾಲ್ಲೂಕು ಪತ್ರಕರ್ತರಿಗೆ ನಿವೇಶನ ಸೌಲಭ್ಯ ಕಲ್ಪಿಸಲು ಹಾಗೂ ಭವನ ಪೂರ್ಣಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದು ತಿಳಿಸಿದರು.

### 39ನೇ ರಾಜ್ಯಮಟ್ಟದ ಸಮ್ಮೇಳನದಲ್ಲಿ ವಿತರಣೆ

ಈ ಸಂದರ್ಭದಲ್ಲಿ ಚಿಕ್ಕನಾಯಕನಹಳ್ಳಿ ಜೆಡಿಎಸ್ ಶಾಸಕ ಸುರೇಶ್ ಬಾಬು, ತುಮಕೂರು ಗ್ರಾಮಾಂತರ ಶಾಸಕ ಸುರೇಶ್ ಗೌಡ, ಜಿಲ್ಲಾಧಿಕಾರಿ ಶುಭಾ ಕಲ್ಯಾಣಿ, ಪ್ರಜಾಪ್ರಗತಿ ಪತ್ರಿಕೆ ಸಂಪಾದಕ ನಾಗಣ್ಣ, ತುಮಕೂರು ಕಾನಿಪ ಜಿಲ್ಲಾಧ್ಯಕ್ಷ ಚಿ.ನೀ. ಪುರುಷೋತ್ತಮ, ರಾಷ್ಟ್ರೀಯ ಮಂಡಳಿ ಸದಸ್ಯ ಎಸ್.ಕೆ. ಒಡೆಯರ್, ಬದ್ರಿನಾಥ್, ಫಕ್ರುದ್ದೀನ್, ವೀರೇಶ, ಟಿವಿ ನಿರೂಪಕಿ ಸುಕನ್ಯಾ, ನನ್ನ ಮಿತ್ರ ಪತ್ರಿಕೆ ಸಂಪಾದಕ ಅಣಬೂರು ಮಠದ ಕೊಟ್ರೇಶ್, ಜಗಳೂರು ತಾಲ್ಲೂಕು ಕಾನಿಪ ಸಂಘದ ಉಪಾಧ್ಯಕ್ಷ ವಾಸೀಂ, ಖಜಾಂಚಿ ಜಗದೀಶ್, ಕಾರ್ಯಕಾರಿಣಿ ಸದಸ್ಯ ಧನ್ಯಕುಮಾರ್, ಶಿವಲಿಂಗಪ್ಪ, ವೇದಮೂರ್ತಿ, ಮಾದಿಹಳ್ಳಿ ಮಂಜಪ್ಪ, ಸಿದ್ದಮ್ಮನಹಳ್ಳಿ ಬಸವರಾಜ್, ಎ.ಎಂ. ಮಂಜಯ್ಯ, ಮಹಾಂತೇಶ್ ಬ್ರಹ್ಮ, ಬಿ. ಸತೀಶ್, ಸೋಮನಗೌಡ, ಜಗಜೀವನ್ ರಾಮ್, ವಿತರಕ ರವಿಕುಮಾರ್ ಸೇರಿದಂತೆ ಇತರರು ಇದ್ದರು.

> ಜಗಳೂರು ತಾಲ್ಲೂಕು ಕಾನಿಪ ಸಂಘಕ್ಕೆ ಅತ್ಯುತ್ತಮ ಪತ್ರಕರ್ತರ ಸಂಘ ಪ್ರಶಸ್ತಿ ಲಭಿಸಿರುವುದು ಅಭಿನಂದನಾರ್ಹ. ರಾಜ್ಯ ಸಮಿತಿ ಹಾಗೂ ಜಿಲ್ಲಾ ಸಮಿತಿ ವತಿಯಿಂದ ಪತ್ರಕರ್ತರಿಗೆ ಸಿಗುವ ಸೌಲಭ್ಯಗಳನ್ನು ಒದಗಿಸಲು ಬದ್ಧ
>
> - ಇ.ಎಂ. ಮಂಜುನಾಥ, ಜಿಲ್ಲಾಧ್ಯಕ್ಷರು, ಕಾನಿಪ ದಾವಣಗೆರೆ

# ಗಾಂಧಿ ಮಾರ್ಗ ಬಿಟ್ಟರೆ ನಮಗೆ ಬೇರೆ ದಾರಿಯಿಲ್ಲ



**(1ನೇ ಪುಟದಿಂದ)** ನಿಗದಿಪಡಿಸುವುದು ಸೇರಿದಂತೆ ಅನೇಕ ಬೇಡಿಕೆಗಳ ಹೋರಾಟಕ್ಕೆ ಸರ್ಕಾರಗಳು ಸ್ಪಂದಿಸುತ್ತಿಲ್ಲ ಎಂದರು.

ಪ್ರತಿ ವರ್ಷ ಜ.30ರಂದು ಹುತಾತ್ಮರ ದಿನ ಆಚರಿಸಬೇಕು ಹುತಾತ್ಮರ ಕುಟುಂಬದವರ ಬೇಡಿಕೆ ಈಡೇರಿಸಬೇಕು. ತಲಾ 2 ಎಕರೆ ಜಮೀನು ಹಂಚಬೇಕು. ಬರುವ ಡಿಸೆಂಬರ್‌ವೊಳಗೆ ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸಲು ಇದೇ ಸಂದರ್ಭದಲ್ಲಿ ಹಕ್ಕೊತ್ತಾಯ ಮಂಡಿಸಲಾಯಿತು.

ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರೈತ ಸಂಘದ ಜಿಲ್ಲಾಧ್ಯಕ್ಷ ರಾಂಪುರದ ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡಿದಾಳ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್, ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಕೆ.ಜಿ. ಯಲ್ಲಪ್ಪ, ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ತೇಜಸ್ವಿ ಪಟೇಲ್, ಹಸಿರು ಸೇನೆ ರಾಜ್ಯಾಧ್ಯಕ್ಷ ಎಂ.ಪಿ. ಕರಿಬಸಪ್ಪ ಗೌಡ್ರು, ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಪೂಜಾರ್ ಅಂಜಿನಪ್ಪ ಇತರರು ಈ ಸಂದರ್ಭದಲ್ಲಿದ್ದರು.

> **ಗಾಂಧೀಜಿಯವರು ಹುತಾತ್ಮರಾದ ದಿನದಂದು ದೇಶದ ಸ್ವಾತಂತ್ರ್ಯಕ್ಕಾಗಿ, ದೇಶ ರಕ್ಷಣೆಗಾಗಿ, ಆಹಾರ ಭದ್ರತೆಗಾಗಿ ದುಡಿದು ಹುತಾತ್ಮರಾದ ಮೂರು ವರ್ಗಗಳನ್ನೂ ಸೇರಿಸಿ ಪ್ರತಿ ವರ್ಷ ಜ.30ರಂದು ಹುತಾತ್ಮರ ದಿನವನ್ನಾಗಿ ಸರ್ಕಾರ ಆಚರಿಸಬೇಕು.**
>
> **- ಬಲ್ಲೂರು ರವಿಕುಮಾರ್, ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ**

## ಸಂಪುಟ ಅಸ್ತು

**(1ನೇ ಪುಟದಿಂದ)** ಇಲಾಖೆ ಸಚಿವರು ಮತ್ತು ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ಕಾಯ್ದೆಗೆ ಒಂದು ರೂಪ ನೀಡಲಿದ್ದಾರೆ ಎಂದರು. ಸತತ ಬರಗಾಲಕ್ಕೆ ತುತ್ತಾಗುವ ಕರ್ನಾಟಕವನ್ನು ಪಾರು ಮಾಡಲು ಜಲ ಭದ್ರತೆಗಾಗಿ 5,000 ಕೋಟಿ ರೂ.ಗಳ ಬೃಹತ್ ಯೋಜನೆಗೆ ಸಂಪುಟ ಹಸಿರು ನಿಶಾನೆ ತೋರಿದೆ.

ವಿಶ್ವಬ್ಯಾಂಕ್‌ನಿಂದ 3,500 ಕೋಟಿ ರೂ. ಸಾಲ ಪಡೆದು ಅದಕ್ಕೆ ಸರಿಸಮನಾಗಿ ರಾಜ್ಯ ಸರ್ಕಾರ 1,500 ಕೋಟಿ ರೂ. ಒದಗಿಸಿ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧರಿಸಿದೆ.

ಮಳೆಗಾಲದಲ್ಲಿ ಹೆಚ್ಚುವರಿ ಯಾಗಿ ಸಮುದ್ರಕ್ಕೆ ಹರಿದುಹೋ ಗುವ ನೀರನ್ನು ತಡೆದು ಅಣೆಕಟ್ಟೆ, ಚೆಕ್‌ಡ್ಯಾಂ ನಿರ್ಮಾಣ ಮತ್ತು ಕೆರೆ ತುಂಬಿಸುವುದು ಇದರ ಉದ್ದೇಶವಾಗಿದೆ.

ಬೆಂಗಳೂರು ಅರಮನೆ ಮೈದಾನ ಜಾಗ ಬಳಕೆ ಮತ್ತು ನಿಯಂತ್ರಣಕ್ಕೆ ಕಳೆದ ಸಂಪುಟ ಸಭೆಯಲ್ಲಿ ಹೊರಡಿಸಿದ ಸುಗ್ರೀವಾಜ್ಞೆ ಅನುಷ್ಠಾನಕ್ಕೆ ಸಂಪುಟ ಸಮ್ಮತಿಸಿದೆ.

ರಾಜಧಾನಿ ಹೊರವಲಯದ ಹೆಸರಘಟ್ಟದ 5,678 ಎಕರೆ ಪ್ರದೇಶವನ್ನು ವನ್ಯಜೀವಿ ಸಂರಕ್ಷಣಾ ನಿಯಮದಡಿ ಮೀಸಲು ಪ್ರದೇಶ ಎಂದು ಘೋಷಣೆ ಮಾಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 19 ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜು ಕಟ್ಟಡಗಳನ್ನು 304 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ.

ಸರ್ಕಾರದಿಂದ ನೇರವಾಗಿ ಮತ್ತು ಪರೋಕ್ಷವಾಗಿ ನೇಮಕಗೊಂಡಿರುವ ವಿವಿಧ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತಾ ವ್ಯವಸ್ಥೆ ಜಾರಿಗೆ ತರಲು ತೀರ್ಮಾನಿಸಿದೆ ಎಂದು ಪಾಟೀಲರು ತಿಳಿಸಿದರು.

## ಹೆದರಿಸಿ, ನಿಂದಿಸಿ ಸಾಲ ವಸೂಲಿ ಸಲ್ಲ

### ಜನರಿಗೆ ಕಿರುಕುಳ ನೀಡಿದಲ್ಲಿ ಎಫ್‌ಐಆರ್ ದಾಖಲಿಸಲು ಸೂಚನೆ

**(1ನೇ ಪುಟದಿಂದ)** ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಕಿರು ಹಣಕಾಸು ಸಂಸ್ಥೆಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು, ಸಾಲ ವಿತರಣೆ ಮತ್ತು ಮರುಪಾವತಿ ಪ್ರಕ್ರಿಯೆಗಳಲ್ಲಿ ಕೈಗೊಳ್ಳುವ ಕ್ರಮಗಳ ಕುರಿತು ಸಲಹೆ ಮತ್ತು ಸೂಚನೆಗಳ ಕುರಿತು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತಾನಾಡಿದರು.

ಮೈಕ್ರೋ ಫೈನಾನ್ಸ್ ಕಂಪನಿಗಳು ನ್ಯಾಯಬದ್ಧವಾಗಿ ವ್ಯವಹರಿಸಬೇಕು. ಒಂದು ವೇಳೆ ಜನರಿಗೆ ಕಿರುಕುಳ ನೀಡಿದ ದೂರು ಬಂದರೆ ಪೊಲೀಸರು ಕೂಡಲೇ ಎಫ್‌ಐಆರ್ ದಾಖಲಿಸುವಂತೆ ಪೊಲೀಸರಿಗೆ ಸೂಚಿಸಿದರು. ಸಾಲವನ್ನು ನೀಡುವಾಗ ಸಾಲ ಪಡೆಯುವ ವ್ಯಕ್ತಿಯ ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯವನ್ನು ಪರಿ ಗಣಿಸಬೇಕು. ಮಾಸಿಕ ಒಟ್ಟು ಆದಾ ಯದ ಶೇ.50 ರಷ್ಟು ಮೊತ್ತವನ್ನು ಮಾತ್ರ ಸಾಲ ಮರುಪಾವತಿ ಸಾಮರ್ಥ್ಯ ಎಂದು ಪರಿಗಣಿಸಬೇಕು ಎಂದರು.

ಜನರಿಗೆ ಅವರ ಅಗತ್ಯಕ್ಕಿಂತ ಹೆಚ್ಚಾಗಿ ಸಾಲವನ್ನು ನೀಡಿ, ಸಾಲ ಮರುಪಾವತಿಲು ನಿಮ್ಮ ಚೌಕಟ್ಟನ್ನು ಮೀರಿ ಅವರಿಗೆ ತೊಂದರೆ ನೀಡುತ್ತಿದ್ದೀರಿ. ಇದರ ಬಗ್ಗೆ ಪ್ರಕರಣ ದಾಖಲು ಮಾಡಲಾಗುವುದು. ಗ್ರಾಮೀಣ ಭಾಗದ ಜನರಿಗೆ ಸಾಲದ ಅವಶ್ಯಕತೆ ತುಂಬಾ ಇರುವುದರಿಂದ ಆರ್.ಬಿ.ಐ ನಿಯಮಾನುಸಾರ ಸಾಲ ನೀಡಿ, ಅವರ ಅಗತ್ಯಕ್ಕೆ ತಕ್ಕಂತೆ ಸಾಲ ನೀಡಬೇಕು ಎಂದರು.

ಸಾರ್ವಜನಿಕರಿಗೆ ನಿಮ್ಮ ಫೈನಾನ್ಸ್ ಕಂಪನಿಯ ಬಡ್ಡಿ ಎಷ್ಟು ಅಂತ ತಿಳಿಸಿ, ಮೈಕ್ರೋ ಫೈನಾನ್ಸ್ 2 ಲಕ್ಷ ರೂ. ವರೆಗೆ ಮಾತ್ರ ಸಾಲ ನೀಡಲು ಅವಕಾಶವಿದೆ. ಸಾಲ ನೀಡುವ ಸಂಧರ್ಭದಲ್ಲಿ ಅರ್ಜಿ ಹಾಗೂ ಷರತ್ತುಗಳು ಕನ್ನಡದಲ್ಲಿರಬೇಕು ಎಂದರು.

ಸಾಲ ಮತ್ತು ಬಾಕಿ ವಸೂಲಾತಿ ಸಂದರ್ಭದಲ್ಲಿ ಸಾಲ ಪಡೆದ ವ್ಯಕ್ತಿಯ ಕುಟುಂಬದ ಯಾವ ವ್ಯಕ್ತಿಗಳನ್ನು ಕೆವ್ಯೆಸಿ ಕೇಳುವಂತಿಲ್ಲ. ಬಾಕಿ ಪಾವತಿ ಮಾಡಿ ಎಂದು ಒತ್ತಾಯಿಸುವಂತಿಲ್ಲ. ಅತ್ಯಂತ ಕಡಿಮೆ ಮೊತ್ತದ ಸಾಲವಾದರೂ ವಿಮೆ ಮಾಡಿಸಬೇಕು. ಸಾಲ ಪಡೆದ ವ್ಯಕ್ತಿಯು ಮೃತಪಟ್ಟಲ್ಲಿ ವಿಮೆಯ ಮೂಲಕ ಸಾಲದ ಮೊತ್ತವನ್ನು ಪಡೆಯಬೇಕು. ಬಡ್ಡಿ ದರ ಗರಿಷ್ಠ ಶೇ. 18 ರಷ್ಟು ಮಾತ್ರ. ಇದಕ್ಕಿಂತ ಹೆಚ್ಚಿನ ಬಡ್ಡಿದರ ವಸೂಲಿ ಮಾಡುವಂತಿಲ್ಲ ಎಂದರು.

ವಸೂಲಿ ಸಿಬ್ಬಂದಿ ಬೆದರಿಕೆ ಹಾಕಬಾರದು, ಬೈಗುಳ-ಅವಾಚ್ಯ ಶಬ್ದಗಳ ಬಳಕೆ ಮಾಡಬಾರದು. ಸಾಲ ಪಡೆದವರಿಗೆ ಪದೇ ಪದೇ ಕರೆ ಮಾಡಬಾರದು. ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯ ಒಳಗೆ ಮಾತ್ರ ಕರೆ ಮಾಡಬೇಕು. ಸಾಲ ಪಡೆದ ವ್ಯಕ್ತಿಯ ಕುಟುಂಬದವರು, ಸಂಬಂಧಿಕರು, ಸ್ನೇಹಿತರು ಮತ್ತು ಸಹದ್ಯೋಗಿಗಳಿಗೆ ಕರೆ ಮಾಡುವಂತಿಲ್ಲ.

ಸಾಲ ಪಡೆದವರ ಹೆಸರು ಮತ್ತು ವಿವರಗಳನ್ನು ಯಾವುದೇ ಕಾರಣಕ್ಕೂ ಸಾರ್ವಜನಿಕವಾಗಿ ಪ್ರದರ್ಶಿಸುವಂತಿಲ್ಲ. ಸಾಲ ಪಡೆದ ಕುಟುಂಬದವರ ಮೇಲೆ ಹಲ್ಲೆ ನಡೆಸುವಂತಿಲ್ಲ. ಯಾವುದೇ ರೀತಿಯ ಕಿರುಕುಳ ನೀಡುವಂತಿಲ್ಲ. ತಡವಾಗಿ ಕಂತು ಪಾವತಿಸಿದ್ದಾರೆ ಎಂಬ ಕಾರಣಕ್ಕೆ ಅವರಿಗೆ ಬಡ್ಡಿ ಹಾಕುವಂತಿಲ್ಲ. ಸಾಲ ವಸೂಲಿಗೆ ರೌಡಿಗಳನ್ನು ಬಿಟ್ಟು ದಬ್ಬಾಳಿಕೆ ಮಾಡುವಂತಿಲ್ಲ. ಆರ್.ಬಿ.ಐ ನಿಯಾಮಾನುಸಾರ ಕ್ರಮ ಕೈಗೊಳ್ಳಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾಪ್ರಶಾಂತ್ ಮಾತನಾಡಿ, ಕಿರು ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಸಾಲ ವಿತರಣೆ ಮತ್ತು ಮರಪಾವತಿಯಲ್ಲಿ ಗ್ರಾಹಕರನ್ನು ಹಾಗೂ ಸಿಬ್ಬಂದಿಗಳನ್ನು ಗೌರವದಿಂದ ನೋಡಿಕೊಳ್ಳಬೇಕು ಎಂದರು.

ಕಂತು ಕಟ್ಟಲು ತಪ್ಪಿದ ಗ್ರಾಹಕರೊಂದಿಗೆ ವ್ಯವಹರಿಸಲು ಆರ್.ಬಿ.ಐ ನಿರ್ದೇಶಗಳನ್ನು ಪಾಲಿಸಬೇಕು. ಸಾಲಗಾರರ ಮನೆಯಲ್ಲಿ ಮೃತ್ಯು ಸಂಭವಿಸಿದಾಗ, ಅನಾರೋಗ್ಯದ ಸಂದರ್ಭದಲ್ಲಿ ಸಾಲ ಮಸೂಲಾತಿ ಮಾಡಬಾರದು ಎಂದರು.

ಲೀಡ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಸಿದ್ದಾರ್ಥ ಆಚಾರ್ಯ, ಡಿವೈಎಸ್‌ಪಿ ಬಸವರಾಜ, ಚನ್ನಗಿರಿ ಉಪವಿಭಾಗದ ಎಎಸ್ಪಿ ಶ್ಯಾಮ ಉಪಸ್ಥಿತರಿದ್ದರು.

> **ಆರ್‌ಬಿಐ ನಿಯಮದ ಪ್ರಕಾರ ಸಾಲ ನೀಡುವಾಗ ಆಧಾರ್ ಪಡೆಯುವಂತಿಲ್ಲ. ಅನಧಿಕೃತವಾಗಿ ಆಧಾರ್ ಪಡೆದಿರುವ ಬಗ್ಗೆ ದೂರು ಬಂದರೆ ಒಂದು ಕೋಟಿ ರೂ. ದಂಡ ವಿಧಿಸುವ ಅವಕಾಶ ಕಾನೂನಿನಲ್ಲಿದೆ.**
>
> **- ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾಧಿಕಾರಿ**

## ಅಕ್ರಮದಲ್ಲಿ ಸಿಎಂ, ಪತ್ನಿ ಪಾತ್ರ

**(1ನೇ ಪುಟದಿಂದ)** ಮುಖ್ಯಮಂತ್ರಿ ಅವರ ಕುಟುಂಬಕ್ಕೆ 14 ನಿವೇಶನಗಳ ಹಂಚಿಕೆಯಾದಾಗ ಅವರ ಪುತ್ರ ಡಾ.ಯತೀಂದ್ರ ವರುಣಾ ಕ್ಷೇತ್ರದ ಶಾಸಕರಾಗಿದ್ದರು, ಜೊತೆಗೆ ಮುಡಾ ಸದಸ್ಯರೂ ಆಗಿದ್ದರು.

ಅಕ್ರಮ ನಿವೇಶನ ಹಂಚಿಕೆಯಾದಾಗ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕ ರಾಗಿದ್ದರು, ಎಚ್.ಜಿ.ದಿನೇಶ್ ಕುಮಾರ್ ಅಲಿಯಾಸ್ ಸಿ.ಟಿ. ಕುಮಾರ್ ಆಪ್ತ ಸಹಾಯಕ ರಾಗಿದ್ದರು. ಕುಮಾರ್, ಮುಡಾ ಅಧಿಕಾರಿಗಳ ಮೇಲೆ ಅನುಚಿತ ಪ್ರಭಾವ ಬೀರಿದ್ದರು, ಸಹಿಯನ್ನೇ ನಕಲು ಮಾಡಿ ನಿವೇಶನಗಳು ಹಂಚಿಕೆ ಆಗುವಂತೆ ನೋಡಿಕೊಂಡಿದ್ದರು.

ಮುಡಾ ಜಮೀನನ್ನು 3,24,700 ರೂ. ಮೊತ್ತಕ್ಕೆ ಸ್ವಾಧೀನ ಪಡಿಸಿಕೊಂಡಿತ್ತು, ಈ ಜಮೀನನ್ನು ತಪ್ಪು ಮಾಹಿತಿ ಮತ್ತು ಪ್ರಭಾವ ಆಧರಿಸಿ, ಕಾನೂನು ಬಾಹಿರವಾಗಿ ಡಿ-ನೋಟಿ ಫಿಕೇಷನ್ ಮಾಡಲಾಗಿದೆ.

ಬಿ.ಎಂ.ಮಲ್ಲಿಕಾರ್ಜುನಸ್ವಾಮಿ ಇದನ್ನು ಕೃಷಿ ಜಮೀನು ಎಂದು ಖರೀದಿಸಿದ್ದಾರೆ, ಅಷ್ಟರಲ್ಲಾಗಲೇ ಮುಡಾ ಇಲ್ಲಿ ಬಡಾವಣೆ ಅಭಿವೃದ್ಧಿಪಡಿಸಿ ನಿವೇಶನ ಹಂಚಿಕೆ ಮಾಡಿತ್ತು.

ಇದಕ್ಕೆಅಧಿಕಾರಿಗಳುಯಾವುದೇ ತಕರಾರು ಎತ್ತಲಿಲ್ಲ, ತಪ್ಪು ಸ್ಥಳ ಪರಿಶೀಲನೆ ವರದಿ ಆಧರಿಸಿ ಭೂಮಿ ಪರಿವರ್ತನೆ ಮಾಡಲಾಗಿದೆ, ಆಗಲೂ ಮುಡಾ ಆಕ್ಷೇಪ ವ್ಯಕ್ತಪಡಿಸಿಲ್ಲ.

ರಾಜಕೀಯ ಪ್ರಭಾವ ಬಳಸಿ 56 ಕೋಟಿ ರೂ. ಮೌಲ್ಯದ ನಿವೇಶನಗಳನ್ನು ಪರಿಹಾರವಾಗಿ ಪಡೆದು ಕೊಳ್ಳಲಾಗಿದೆ.

ಕಾನೂನು ಬಾಹಿರವಾಗಿ ಪಡೆದ ನಿವೇಶನ ಗಳನ್ನು ಮುಡಾದಿಂದ ಪಡೆದ ಪರಿಹಾರವೆಂದು ಬಿಂಬಿಸಲಾಗಿದೆ. ಅಂದು ಆಯುಕ್ತರಾಗಿದ್ದ ಡಿ.ಬಿ.ನಟೇಶ್ ಶಾಮೀಲಾಗಿ ಈ ಕಾನೂನು ಬಾಹಿರ ಪ್ರಕ್ರಿಯೆ ನಡೆಸಲಾಗಿದೆ.

ಇ.ಡಿ. ತನಿಖೆ ಆರಂಭ ನಂತರ ಪಾರ್ವತಿ ಅವರು ಅಕ್ಟೋಬರ್ 1ರಂದು 14 ನಿವೇಶನಗಳನ್ನು ಹಿಂತಿರುಗಿಸಿದ್ದಾರೆ.

ನಿವೇಶನ ಹಿಂತಿರುಗಿಸಿದ್ದರೂ ಇದರಲ್ಲಿ ಅಕ್ರಮ ಹಣ ವರ್ಗಾವಣೆ ಯತ್ನ ನಡೆದಿರುವುದು ಪತ್ತೆಯಾಗಿದೆ.

ಸಿದ್ದರಾಮಯ್ಯ, ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ, ಜೆ. ದೇವರಾಜು, ಮುಡಾ ಅಧಿಕಾರಿಗಳು, ರಿಯಲ್ ಎಸ್ಟೇಟ್ ವ್ಯವಹಾರಸ್ಥರು, ಪ್ರಭಾವಿ ವ್ಯಕ್ತಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಜಾರಿ ನಿರ್ದೇಶನಾಲಯ ತನ್ನ ತಾತ್ಕಾಲಿಕ ಜಪ್ತಿ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಅಕ್ರಮ ಹಣ ವರ್ಗಾವಣೆ ಕೇವಲ ಬಿ.ಎಂ.ಪಾರ್ವತಿ ಅವರ ಪ್ರಕರಣದಲ್ಲಿ ಮಾತ್ರವಲ್ಲ, ಸುಮಾರು 1095 ಮುಡಾ ಬಿಡಿ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದೆ.

## ನಗರದಲ್ಲಿ ಇಂದು ಸಾರ್ವಜನಿಕರ ಅಹವಾಲು ಸ್ವೀಕಾರ ಸಭೆ

ಸ್ಲಂ ಜನಾಂದೋಲನ ಕರ್ನಾಟಕ ಹಾಗೂ ಸಾವಿತ್ರಿ ಬಾಯಿ ಪುಲೆ ಮಹಿಳಾ ಸಂಘಟನೆ ವತಿಯಿಂದ ಬೆಳಿಗ್ಗೆ 11 ಗಂಟೆಗೆ ಮಂಡಕ್ಕಿ ಭಟ್ಟಿ ಲೇಔಟ್‌ನ ಯೂನಿಯನ್ ಆಫೀಸ್‌ನಲ್ಲಿ ಮೂಲಭೂತ ಸೌಕರ್ಯ ಕುರಿತು ಸಾರ್ವಜನಿಕರ ಕುಂದು-ಕೊರತೆಗಳ ಅಹವಾಲು ಸ್ವೀಕಾರ ಸಭೆ ನಡೆಯಲಿದೆ. ಜಿ.ಎಂ. ಗಂಗಾಧರ ಸ್ವಾಮಿ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಂಚಾಲಕ ಎಸ್.ಎಲ್. ಆನಂದಪ್ಪ ವಹಿಸಲಿದ್ದಾರೆ. ಮುಖ್ಯ ಅತಿಥಿಗಳು : ಕೆ. ಚಮನ್ ಸಾಬ್, ಶ್ರೀಮತಿ ರೇಣುಕಾ, ಎಲ್.ಹೆಚ್. ಅರುಣ್ ಕುಮಾರ್, ಟಿ.ಎಂ. ನಾಗರಾಜ್, ನಿಶಾಂತ್, ಎ.ಬಿ. ರಹೀಂ ಸಾಬ್, ಎಂ. ಶಬ್ಬೀರ್ ಸಾಬ್, ಶ್ರೀಮತಿ ಮಂಜುಳ, ಮಹ್ಮದ್ ಹರ್ಷದ್ (ಮುನ್ನ), ಹೆಗ್ಗೆರೆ ರಂಗಪ್ಪ.

## ನಾಳೆ ಮಾಚಿದೇವ ಜಯಂತಿ

ದಾವಣಗೆರೆ, ಜ. 30 - ಫೆ. 1 ರಂದು ಬೆಳಿಗ್ಗೆ 11ಕ್ಕೆ ಜಿಲ್ಲಾಡಳಿತ ಭವನದಲ್ಲಿ ಮಡಿವಾಳ ಮಾಚಿದೇವ ಜಯಂತಿ ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ಅಮೆರಿಕದಲ್ಲಿ ಮಸೂದೆ

**(1ನೇ ಪುಟದಿಂದ)** ಅನಿರ್ಬಂಧಿತವಾಗಿ ಜನ್ಮಸಿದ್ಧ ಪೌರತ್ವ ನೀಡುತ್ತಿವೆ ಎಂದು ರಿಪಬ್ಲಿಕನ್ ಸೆನೆಟರ್‌ಗಳು ಹೇಳಿದ್ದಾರೆ. ಜನ್ಮಸಿದ್ಧ ಪೌರತ್ವ ಅಧಿಕಾರವನ್ನು ತಡೆಯುವ ಸಲುವಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಾರ್ಯಕಾರಿ ಆದೇಶ ಹೊರಡಿಸಿದ್ದರು. ಆದರೆ ಈ ವಿಷಯ ನ್ಯಾಯಾಂಗದ ಮೆಟ್ಟಿಲೇರಿದೆ.

## ಅರೇಮಲ್ಲಾಪುರದಲ್ಲಿ ಇಂದು ದೇವಸ್ಥಾನಗಳ ಉದ್ಘಾಟನೆ

ರಾಣೇಬೆನ್ನೂರು ತಾಲ್ಲೂಕಿನ ಅರೇಮಲ್ಲಾಪುರ ಗ್ರಾಮದಲ್ಲಿಂದು ತುಳಜಾ ಭವಾನಿ, ಚೌಡೇಶ್ವರಿದೇವಿ ದೇವಸ್ಥಾನಗಳ ಉದ್ಘಾಟನೆ, ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ಸಂಗೊಳ್ಳಿ ರಾಯಣ್ಣ ಮೂರ್ತಿ ಅನಾವರಣ ಕಾರ್ಯಕ್ರಮಗಳು ನಡೆಯಲಿವೆ.

ಬೆಂಗಳೂರಿನ ಮಂಜುನಾಥ ಭಾರತಿ ಸ್ವಾಮೀಜಿ, ಐರಣಿ ಹೊಳೆಮಠದ ಬಸವರಾಜ ಸ್ವಾಮೀಜಿ, ನೆಗಳೂರು ಹಿರೇಮಠದ ಗುರುಶಾಂತೇಶ್ವರ ಸ್ವಾಮೀಜಿ, ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಶಿವಲಿಂಗ ಸ್ವಾಮೀಜಿ, ಬಂಕಾಪೂರ ಕೆಂಡದಮಠದ ಶ್ರೀ ರೇವಣಸಿದ್ದ ಸ್ವಾಮೀಜಿ, ದಾವಣಗೆರೆ ಸಾಯಿಬಾಬಾ ಮಠದ ಗುರುದೇವ ಸ್ವಾಮೀಜಿ, ದುಗ್ಗಾವತಿ ವೀರಭದ್ರೇಶ್ವರ ಸ್ವಾಮೀಜಿ ಹಾಗೂ ಗ್ರಾಮದ ಶರಣಬಸವೇಶ್ವರ ಮಠದ ಪ್ರಣವಾನಂದರಾಮ ಸ್ವಾಮೀಜಿಗಳು ಸಾನ್ನಿಧ್ಯ ವಹಿಸುವರು.

ಉಪಸಭಾಪತಿ ರುದ್ರಪ್ಪ ಲಮಾಣಿ, ಸಚಿವ ಶಿವಾನಂದ ಪಾಟೀಲ, ಸಚಿವ ಸಂತೋಷ ಲಾಡ್, ಸಂಸದ ಬಿ.ವೈ. ರಾಘವೇಂದ್ರ, ಶಾಸಕರಾದ ಪ್ರಕಾಶ ಕೋಳಿವಾಡ, ಬಸವರಾಜ ಶಿವಣ್ಣನವರ, ಶ್ರೀ ನಿವಾಸ ಮಾನೆ, ಮಾಜಿ ಸಭಾಪತಿ ಕೆ.ಬಿ.ಕೋಳಿವಾಡ, ಮಾಜಿ ಸಚಿವ ಪಿಜಿಆರ್ ಸಿಂಧ್ಯಾ, ಆರ್. ಶಂಕರ್, ಮಾಜಿ ಶಾಸಕ ಅರುಣ ಪೂಜಾರ, ಜಿಪಂ ಮಾಜಿ ಅಧ್ಯಕ್ಷ ಎಸ್. ಎಸ್. ರಾಮಲಿಂಗಣ್ಣನವರ, ಸದಸ್ಯ ಸಂತೋಷ ಪಾಟೀಲ, ನಗರಸಭೆ ಮಾಜಿ ಸದಸ್ಯ ರವಿ ಮಾಂಡ್ರೆ, ಕಿರಣ ಮಾಂಡ್ರೆ ಮತ್ತಿತರರು ಭಾಗವಹಿಸುವರು. ಅಧ್ಯಕ್ಷತೆಯನ್ನು ರಾಜು ಸುರ್ವೆ ವಹಿಸುವರು.

## ಇಸ್ಪೀಟ್ ಜೂಜಿನ ಮೇಲೆ ಪೊಲೀಸ್ ದಾಳಿ ; ಅಪಾಧಿತರ ಬಂಧನ : 2.5 ಲಕ್ಷ ನಗದು ವಶ

ದಾವಣಗೆರೆ, ಜ.30- ತಾಲ್ಲೂಕಿನ ಹಿಂಡಸಕಟ್ಟೆಯಿಂದ ಕ್ಯಾತನಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ನಡೆಯುತ್ತಿದ್ದ ಅಕ್ರಮ ಇಸ್ಪೀಟ್ ಜೂಜಾಟದ ಮೇಲೆ ಪೊಲೀಸರು ಬುಧವಾರ ಸಂಜೆ ದಾಳಿ ನಡೆಸಿದ್ದಾರೆ. ಇಸ್ಪೀಟ್ ಜೂಜಾಟದಲ್ಲಿ ತೊಡಗಿದ್ದ 13 ಆಪಾದಿತರನ್ನು ಬಂಧಿಸಿದ್ದು, ಇವರಿಂದ 2.05 ಲಕ್ಷ ರೂ. ನಗದು ಹಾಗೂ ಇಸ್ಪೀಟ್ ಕಾರ್ಡ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಪಿಎಸ್‌ಐ ಸುನೀಲ್ ಬಿ. ತೇಲಿ ಹಾಗೂ ಸಿಬ್ಬಂದಿಗಳಾದ ಪ್ರಕಾಶ್, ಸುರೇಶ್, ಗೋವಿಂದರಾಜು, ಮುತ್ತುರಾಜು, ಬುಡೇನ್ ವಲಿ, ಲೋಹಿತ್, ಮಲ್ಲಿಕಾರ್ಜುನ, ಶಿವಕುಮಾರ ಮತ್ತು ಅಂಜಿನಪ್ಪ ಅವರನ್ನೊಳಗೊಂಡ ತಂಡ ಯಶಸ್ವಿಯಾಗಿ ದಾಳಿ ನಡೆಸಿದ್ದು, ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹರಿಹರ ಬೆಸ್ಕಾಂ ಅಂದಾಜಿಸಿದ 4 ಕೋಟಿ ನಷ್ಟ, ತನಿಖೆಗೆ ಒಳಪಡಿಸಲು ಗುತ್ತಿಗೆದಾರರ ಆಗ್ರಹ

ಹರಿಹರ, ಜ.30- 2024ರ ಮಳೆಗಾಲದಲ್ಲಿ ಮಳೆ, ಗಾಳಿಗೆ ತಾಲ್ಲೂಕಿನಲ್ಲಿ ವಿದ್ಯುತ್ ಮಾರ್ಗಗಳಿಗೆ 4 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ನಷ್ಟ ಉಂಟಾಗಿದೆ ಎಂದು ಬೆಸ್ಕಾಂ ಹರಿಹರ ಉಪ ವಿಭಾಗದವರು ತಯಾರಿಸಿರುವ ಅಂದಾಜು ಪಟ್ಟಿಯ ಕುರಿತು ಉನ್ನತ ಮಟ್ಟದ ತನಿಖೆಗೊಳಪಡಿಸಬೇಕೆಂದು ಇಲ್ಲಿನ ಹಿರಿಯ ವಿದ್ಯುತ್ ಗುತ್ತಿಗೆದಾರ ಕೆ.ಬಿ. ಉಮೇಶ್ ಆಗ್ರಹಿಸಿದರು.





ಬುಧವಾರ ನಡೆದ ಪತ್ರಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಉಪ ವಿಭಾಗದ ಅಧಿಕಾರಿಗಳು ಸಿದ್ಧ ಪಡಿಸಿದ ಹಾನಿಗೆ ಒಳಗಾದ ವಿದ್ಯುತ್ ಮಾರ್ಗಗಳ ಅಂದಾಜು ಪಟ್ಟಿಗಳಿಗೆ ಬೆಸ್ಕಾಂ ವಿಭಾಗೀಯ ಕಚೇರಿಯ ಕಾರ್ಯ ನಿರ್ವಾಹಕ ಇಂಜಿನಿಯರ್ ಕಾರ್ಯಾದೇಶವನ್ನು ಮಾಡಿ ತಮಗೆ ಬೇಕಾದ ವ್ಯಕ್ತಿಗಳಿಗೆ ಕಾಮಗಾರಿ ನಿರ್ವಹಣೆಗೆ ಅವಾರ್ಡ್ ನೀಡಿದ್ದಾರೆ ಎಂದರು.

ಈ ಹಿಂದೆ ಬೇರೆ ವರ್ಷಗಳಲ್ಲಿ ಮಳೆ, ಗಾಳಿಯಿಂದ ವಿದ್ಯುತ್ ಮಾರ್ಗಗಳಿಗೆ ಆಗಿರುವ ಹಾನಿಯ ಫೋಟೋಗಳನ್ನು ಈಗ ಒದಗಿಸಿ ಕಾರ್ಯಾದೇಶ ಮತ್ತು ಅವಾರ್ಡ್ ಪಡೆದುಕೊಂಡು ಬೆಸ್ಕಾಂ ಅಧಿಕಾರಿಗಳಿಗೆ ಬೇಕಾದ ವ್ಯಕ್ತಿಗಳು ಈಗಾಗಲೇ ಕೆಲವು ಬಿಲ್ಲುಗಳನ್ನೂ ಸಲ್ಲಿಸಿರುತ್ತಾರೆ.

ನೆಪ ಮಾತ್ರಕ್ಕೆ ಅಲ್ಲೊಂದು, ಇಲ್ಲೊಂದು ಕಾಮಗಾರಿ ನಡೆಸಲಾಗಿದೆ, ಉಳಿದ ಸಾಮಗ್ರಿಗಳಾದ ಅಂದರೆ ವಿದ್ಯುತ್ ಕಂಬ ಮತ್ತು ಇತರೆ ಸಾಮಗ್ರಿಗಳನ್ನು ಬೇರೆಯವರಿಗೆ ಮಾರಾಟ ಮಾಡಿರುವ ಶಂಕೆಯೂ ಇದೆ. ಈ ಕುರಿತು ಇಲ್ಲಿನ ಬೆಸ್ಕಾಂ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಮೌಖಿಕವಾಗಿ ಹಲವು ಬಾರಿ ಗಮನ ಸೆಳೆದರೂ ಕೂಡ ಯಾವುದೇ ಉಪಯೋಗವಾಗಿಲ್ಲ ಎಂದರು.

ಬೆಸ್ಕಾಂ ಅಧಿಕಾರಿಗಳೇ ಶಾಮೀಲಾಗಿ ಬೆಸ್ಕಾಂಗೆ ನಷ್ಟ ಉಂಟು ಮಾಡುತ್ತಿರುವ ಈ ಪ್ರಕರಣದ ಕುರಿತು ಬೆಸ್ಕಾಂನ ಟೆಕ್ನಿಕಲ್ ಆಡಿಟ್ ಅಂಡ್ ಕ್ವಾಲಿಟಿ ಕಂಟ್ರೋಲ್ (ಟಿಎಕ್ಯುಸಿ) ಶಾಖೆ ಮತ್ತು ಬೆಸ್ಕಾಂನ ವಿಚಕ್ಷಣಾ ದಳದಿಂದ ಸಮಗ್ರ ತನಿಖೆ ನಡೆಸಬೇಕೆಂದು ಇಂಧನ ಸಚಿವರು ಹಾಗೂ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಮಾಧ್ಯಮದ ಮೂಲಕ ಆಗ್ರಹಿಸಿದರು.

ಬೆಸ್ಕಾಂ ಹಣವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಪ್ರಶ್ನಿಸುತ್ತಿರುವ ನನಗೆ ಬೆದರಿಸಲೆಂದು ಈಗಾಗಲೇ ಒಬ್ಬ ವ್ಯಕ್ತಿಯಿಂದ ದೂರವಾಣಿ ಕರೆ ಮಾಡಿಸಿ ಬೆದರಿಸಲಾಗಿದೆ. ನನ್ನ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇದ್ದು, ನನಗೆ ರಕ್ಷಣೆ ನೀಡಬೇಕು ಎಂದು ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಮಾಡಿದರು.

ಹಿರಿಯ ಗುತ್ತಿಗೆದಾರ ಭಾನುವಳ್ಳಿ ಎಸ್.ಜಿ. ಮಂಜುನಾಥ್ ಮಾತನಾಡಿ, ನಗರದ ಖಾಸಗಿ ಲೇಔಟ್‌ನಲ್ಲಿ ಅಳವಡಿಸಿದ್ದ 5 ಟಿಸಿಗಳ ಪೈಕಿ 3 ಟಿಸಿಗಳು ಕಾಣೆಯಾಗಿವೆ. ಈ ಕುರಿತು ಟಿಎಕ್ಯುಸಿಗೆ ದೂರು ಸಲ್ಲಿಸಲಾಗಿದೆ. ಮಳೆ, ಗಾಳಿಯ ನಷ್ಟ 4 ಕೋಟಿಗೂ ಹೆಚ್ಚಾಗಿ ಅಂದಾಜಿಸಿರುವುದು ಅನುಮಾನಕ್ಕೆ ಎಡೆ ಮಾಡಿದೆ. ಇಂತಹ ಸೋರಿಕೆಗಳಿಂದಾಗಿಯೇ ಬೆಸ್ಕಾಂ 9018 ಕೋಟಿ ರೂ.ಗಳ ನಷ್ಟದಲ್ಲಿದೆ ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್, ಹರಿಹರ ಬೆಸ್ಕಾಂ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ವೈ.ಆರ್. ಪುಟ್ಟಪ್ಪ, ಸಾಮಾಜಿಕ ಕಾರ್ಯಕರ್ತ ಐರಣಿ ಹನುಮಂತಪ್ಪ ಮಾತನಾಡಿ, ಸೋರಿಕೆ ಉಂಟು ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ವಿದ್ಯುತ್ ಗುತ್ತಿಗೆದಾರರಾದ ಎಂ.ಬಿ. ಫಾಜಿಲ್, ಡಿ.ಬಿ. ಕೆರೆ ರವಿಕುಮಾರ್, ಎನ್.ಎಂ. ಕೊಟ್ರೇಶ್, ಕೆ.ಎನ್.ಬಸವರಾಜ್, ಜಯರಾಮ್ ರೋಖಡೆ, ನಗರಸಭೆ ಗುತ್ತಿಗೆದಾರ ಮೊಹ್ಮದ್ ಮಜಹರ್ ಇದ್ದರು.


॥ ಶ್ರೀ ಕೊಳದ ಮಲ್ಲೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**





ಶ್ರೀಮದ್ ವೃಷಭಪುರಿ ಸೂರ್ಯ ಸಿಂಹಾಸನಾಧೀಶ್ವರ 1108 ಜಗದ್ಗುರು ಶ್ರೀ ಶ್ರೀ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಬೃಹನ್ಮಠ - ನಂದಿಗುಡಿ ಇವರ ದಿವ್ಯ ಸಾನ್ನಿಧ್ಯದಲ್ಲಿ

ಹರಿಹರ ತಾಲ್ಲೂಕು ಗೋವಿನಹಾಳ್ ಗ್ರಾಮದ ವಾಸಿ

**ಶ್ರೀಮತಿ ಸುಶೀಲಮ್ಮ ಶ್ರೀ ಜಿ. ಮಲ್ಲನಗೌಡ್ರು ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 27.01.2025ನೇ ಸೋಮವಾರ ಸಂಜೆ 4-30 ಕ್ಕೆ ನಮ್ಮ ಮಗನಾದ

**ಶ್ರೀ ಜಿ.ಎಂ. ಬಸವನಗೌಡ**

ಇವರು ಲಿಂಗೈಕ್ಯರಾದ ಪ್ರಯುಕ್ತ ಅವರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 31.01.2025ನೇ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಗೋವಿನಹಾಳ್ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ✦ ಮೃತರ ಧರ್ಮಪತ್ನಿ ಶ್ರೀಮತಿ ಸುನಿತ (ಚಿತ್ರಾ) ಕೋಂ. ಜಿ.ಎಂ. ಬಸವನಗೌಡ್ರ ಮತ್ತು ಮಕ್ಕಳು
✦ ಶ್ರೀಮತಿ ಸುಶೀಲಮ್ಮ ಕೋಂ. ಜಿ. ಮಲ್ಲನಗೌಡ್ರು ✦ ಶ್ರೀಮತಿ ಗಾಯಿತ್ರ ಕೋಂ. ಜಿ.ಎಂ. ಶಾಂತರಾಜ್
✦ ಶ್ರೀಮತಿ ಸುನೀತ ಕೋಂ. ಜಿ.ಎಂ. ನಾಗನಗೌಡ ✦ ಶ್ರೀಮತಿ ಲಲಿತ ಕೋಂ. ಶ್ರೀ ನಾಗರಾಜ್ ಎಸ್.ವಿ.
✦ ಶ್ರೀ ಕುಮಾರಿ ಶೈಲಾ ಜಿ. ಮಲ್ಲನಗೌಡ್ರು ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಕಪ್ಲಿಗೌಡ್ರು ವಂಶಸ್ಥರು, ಬಂಧು-ಮಿತ್ರರು. ಗೋವಿನಹಾಳು. ಮೊಬೈಲ್ : 98453 11012.

ವಿಶೇಷ ಸೂಚನೆ : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


## ಆಂಧ್ರದಲ್ಲಿ ವಾಟ್ಸಾಪ್ ಆಡಳಿತಕ್ಕೆ ಚಾಲನೆ

**(1ನೇ ಪುಟದಿಂದ)** ವುದು. ಎರಡನೇ ಹಂತದಲ್ಲಿ ಇನ್ನಷ್ಟು ಸೇವೆಗಳನ್ನು ವಾಟ್ಸ್‌ಆಪ್ ಮೂಲಕ ಒದಗಿಸಲಾಗು ವುದು ಎಂದು ಸಚಿವ ಲೋಕೇಶ್ ಹೇಳಿದ್ದಾರೆ. ಮೊದಲ ಹಂತದಲ್ಲಿ 161 ಸೇವೆಗಳನ್ನು ಒದಗಿಸಲಾಗುವುದು. ಎರಡನೇ ಹಂತದಲ್ಲಿ 360 ಹಾಗೂ ಅಂತಿಮವಾಗಿ 520 ಸೇವೆಗಳನ್ನು ಒದಗಿಸಲಾಗುವುದು ಎಂದು ಲೋಕೇಶ್ ಹೇಳಿದ್ದಾರೆ.

ವಾಟ್ಸ್‌ಅಪ್ ಮೂಲಕ ಸರ್ಕಾರದ ಸೇವೆಗಳನ್ನು ಒದಗಿಸಲು ಮೆಟಾ ಕಂಪನಿಯ ಜೊತೆ 2024ರ ಅಕ್ಟೋಬರ್ 22 ರಂದು ರಾಜ್ಯ ಸರ್ಕಾರ ಒಪ್ಪಂದ ಒಂದಕ್ಕೆ ಸಹಿ ಹಾಕಿತ್ತು.

# ಪಾಡನ್ನು ಹಾಡನ್ನಾಗಿಸಿ ನಗಿ ಧರಿಸಿ ಬದುಕಿದ ಬೇಂದ್ರೆ ಮಾಸ್ತರ


**'ಜನಪದ ಛಂದವೆಂದರೆ ಬೇಂದ್ರೆ; ಬೇಂದ್ರೆ ಎಂದರೆ ಜನಪದ ಛಂದ' ಎನ್ನುವಷ್ಟರ ಮಟ್ಟಿಗೆ ಈ ನಂಟು ಬೆಳೆದು ಬಂದಿದೆ. 'ನನಗೂ ನಿನಗೂ ಅಂಟಿನ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿ' ಎಂಬಲ್ಲಿ ಮೌಲ್ಯದರ್ಶನದ (Value Perception) ಅತೀಂದ್ರಿಯ ಶಕ್ತಿಯನ್ನು ಮನೋವೈಜ್ಞಾನಿಕ ವಿಶ್ಲೇಷಣೆಯಿಂದ ತನ್ನ ಆತ್ಮ ತತ್ವದಲ್ಲಿ (Self Theory)ಆತ್ಮ ವಿಕಾಸ ಶಕ್ತಿಯನ್ನು (Growth Force) ನಿರ್ಬಂಧಗಳಿಂದ ಮುಕ್ತಗೊಳಿಸಿಕೊಂಡು ಸ್ವತಂತ್ರ ವಿಕಾಸಕ್ಕೆ ಅನುವು ಮಾಡಿಕೊಂಡು 'ಹದಾ ಒಳಗಾs ಇಲ್ದ ತಮ್ಮಾ, ಪದಾ ಹೊರಗಾs ಬರೂದಿಲ್ಲಾ' ಎನ್ನುತ್ತಾರೆ ಬೇಂದ್ರೆ.**

ಕನ್ನಡ ನವೋದಯ ಸಂದರ್ಭವು ಏಕಕಾಲಕ್ಕೆ ಅನೇಕ ಪ್ರತಿಭಾನಾ ಕ್ರಿಯಾಶೀಲವಾಗಿದ್ದಂತ ಕಾಲ. ಕನ್ನಡ-ಕರ್ನಾಟಕ-ಕನ್ನಡಿಗರ ಏಕೀಕರಣವಾಗಬೇಕೆಂಬ ಆಶಯವು ವ್ರತದಂತೆ ಸ್ವೀಕೃತವಾಗಿ ಕಾರ್ಯಮಗ್ನರಾದ ಗುರು-ಶಿಷ್ಯ-ಸ್ನೇಹಿತ ಪರಂಪರೆಯೊಂದು ಈ ಮಣ್ಣಿನಲ್ಲಿ ರೂಪಗೊಂಡಿತು. ವೈಯಕ್ತಿಕ ಸ್ಪರ್ಧೆ, ಪ್ರಚಾರ, ಪ್ರತಿಷ್ಠೆಗಳನ್ನು ಬದಿಗೊತ್ತಿ, ತಮ್ಮ ಜೀವನದ ಪರಮಧ್ಯೇಯವೆಂಬಂತೆ ಅನೇಕ ಮಹನೀಯರು ಕನ್ನಡಕ್ಕಾಗಿ ತಮ್ಮನ್ನು ತೆತ್ತುಕೊಂಡರು. ಇಂತಹ ಮಹನೀಯರಲ್ಲಿ ಯಾರ ಸಾಧನೆ ಹೆಚ್ಚು, ಯಾರ ಸಾಧನೆ ಕಡಿಮೆ ಎನ್ನುವುದನ್ನು ಹೊರತುಪಡಿಸಿ ತಮ್ಮ ಸಮಕಾಲೀನ, ಹಿರಿಯ ಸಮಕಾಲೀನರ ಸಾಧನೆಯನ್ನು ತೆರೆದ ಮನಸ್ಸಿನಿಂದ ಪ್ರಕಾಶಗೊಳಿಸಿದ ಸ್ನೇಹ ಸಾಹಿತ್ಯದಿಂದೊಡಗೂಡಿ, ಅನೇಕ ಗಿರಿ-ಶಿಖರಗಳಿಂದ ಕೂಡಿ ಭವ್ಯ ಮನೋಹರವಾಗಿ ಕಂಗೊಳಿಸಿದ ಹಿಮಾಲಯ ಪರ್ವತ ಶ್ರೇಣಿಯನ್ನು ಕನ್ನಡ ನವೋದಯ ಸಾಹಿತಿಗಳ ಸಂದೋಹ ನೆನಪಿಗೆ ತರುತ್ತದೆ. ಈ ಸಮಯದಲ್ಲಿ ಶಿಖರ ಸಾದೃಶ್ಯ ವ್ಯಕ್ತಿತ್ವ ಸಾಧನೆಯುಳ್ಳ ಬೇಂದ್ರೆ ಮಾಸ್ತರ ಚಿರನೂತನರು, ಚಿರಚೇತನರು, ವಿಶಿಷ್ಟರು. ಕನ್ನಡದ ಕೆಲಸಕ್ಕೆ ವಿಧಿಪೂರ್ವಕವಾಗಿ ಚಾಲನೆಕೊಟ್ಟು ಕನ್ನಡ ತೇರನ್ನು ಎಳೆದವರು.

ಬೇಂದ್ರೆಯವರು ಬರವಣಿಗೆಗೆ ತೊಡಗಿದ ಸಂದರ್ಭ ಅತ್ಯಂತ ಸಂಕೀರ್ಣವಾದುದು. ಅನೇಕ ಸವಾಲುಗಳನ್ನು ಉಳ್ಳದ್ದು ಇಂಗ್ಲೀಷ್ ಭಾಷಾ ಶಿಕ್ಷಣದ ಮೂಲಕ ಏಕಕಾಲಕ್ಕೆ ಜಾಗತಿಕ ಸಾಹಿತ್ಯ, ಜ್ಞಾನ ಶಿಸ್ತುಗಳ ಪರಿಚಯ ಭಾರತೀಯ ಕೆಲವೇ ಸುಶಿಕ್ಷಿತ ವರ್ಗಕ್ಕೆ ಮೀಸಲಾಯಿತು. ಸ್ವತಂತ್ರ ಹೋರಾಟದ ಪ್ರೇರಣೆಯಿಂದ ಹೊಸ ಸೃಷ್ಟಿಯೊಂದು ರೂಪಗೊಂಡಿತು. ಅತ್ಯಂತ ಕಡಿಮೆ ಸಮಯದಲ್ಲಿ ಪಡೆದ ವಿವಿಧ ಕಾಲ ದೇಶಗಳ ಜ್ಞಾನವನ್ನು ತನ್ನ ಸ್ವಂತ ಪರಂಪರೆ, ಸಂಸ್ಕೃತಿಯ ಅರಿವಿನ ಬೆಳಕಿನಲ್ಲಿ ಆಗುಮಾಡಿಕೊಂಡು ಬರವಣಿಗೆಯ ದೊಡ್ಡ ಜವಾಬ್ದಾರಿಯನ್ನು ಹೊತ್ತುಕೊಂಡು ಜ್ಞಾನ ಸ್ಫೋಟಗಳ ನೇತ್ಯಾತ್ಮಕ ಪರಿಣಾಮವು ಜನಸಾಮಾನ್ಯರು ಅಸ್ತವ್ಯಸ್ತಗೊಂಡು, ಗೊಂದಲದ ಗೂಡಾಗದಂತೆ ಜ್ಞಾನ ಕ್ಷೇತ್ರದ ಜವಾಬ್ದಾರಿಯನ್ನು ಸೂಕ್ಷ್ಮತೆಯೊಂದಿಗೆ ಜನಪದ ಭಾಷಾ ಕಾವ್ಯ ಸಾಂಸ್ಕೃತಿಕ ನೆಲೆಯನ್ನು ವಿಶಿಷ್ಟವಾದ ರೂಪ ನಿರೂಪಣೆಯನ್ನು ಸಾಕ್ಷಾತ್ಕರಿಸಿಕೊಂಡು ಒದಗಿಸಿದ ವರಲ್ಲಿ ಪ್ರಮುಥಿಗರು ದ.ರಾ. ಬೇಂದ್ರೆಯವರು.

ಒಂದು ಕಾವ್ಯ ಪರಂಪರೆ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದ್ದು, ಅನೇಕ ದಿಕ್ಕಿನಲ್ಲಿ ದುಡಿದಿದ್ದು, ರೋಮ್ಯಾಂಟಿಕ್ ಪರಂಪರೆಯನ್ನು ಗಟ್ಟಿಗೊಳಿಸಿದ್ದು, ಭೂಮಿ-ಗಗನ, ಮಾನವ-ದೇವ, ಸಂಸ್ಕೃತಿ-ನಾಗರೀಕತೆ, ಆತ್ಮ-ಅಧ್ಯಾತ್ಮ, ಸಾಫಲ್ಯ-ವೈಫಲ್ಯ ಹಲವು ತರಹದ ದ್ವಂದ್ವ ಹಾಗೂ ಹೋರಾಟಗಳೆಲ್ಲವೂ ಕಾವ್ಯದ ಪ್ರತಿಮೆಯುಳ್ಳ (Poetic Imagery) ವಿಚಾರಗಳ ಸಹಭಾವ (Thoughts of Association)ದಲ್ಲಿಯೇ ಆವಿಷ್ಕಾರವಾಯಿತು.

ಮಣ್ಣಿನ ಸತ್ವವನ್ನು ನಿಜವಾದ ಅರ್ಥದಲ್ಲಿ ರೂಢಿಸಿಕೊಂಡ



**31ರಂದು ಬೇಂದ್ರೆ ಅವರ 130ನೇ ಜನ್ಮ ದಿನಾಚರಣೆ**

ಪ್ರಥಮ ಸ್ಥಾನ ಬೇಂದ್ರೆಯವರಿಗೆ ಸಲ್ಲುವುದು. ಇವರ ಕಾವ್ಯ ಅಂಥ ಮಣ್ಣಿನಿಂದ ಅರಳಿರುವುದಷ್ಟೇ ಅಲ್ಲ, ಜನ ಅನುಭವಿಸುವ ಸುಖಃ-ದುಃಖದ ಸಂವೇದನೆಯನ್ನೊಳಗೊಂಡು ಹೃನ್ಮನಗಳನ್ನು ತಟ್ಟುವ ಗುಣ ಪಡೆದುಕೊಂಡಿರುವುದು, ನಿಸರ್ಗ ಹಾಗೂ ಬಾಳಿನ ಆಳದಲ್ಲಿ ಧುಮು-ಧುಮುಕಿಸುವ ಹಲವು ನಾದಗಳನ್ನು ಸೆರೆ ಹಿಡಿದು, ವಿಕ್ಷಿಪ್ತತತೆ (Contradiction) ಯನ್ನು ಮೀರಿ, ದೌರ್ಜನ್ಯ (Tyranny) ಮತ್ತು ದಮನಗಳ ವಿರುದ್ಧ ಬಂಡೆದ್ದು, ಸಿಡಿದೆದ್ದ ಚೈತನ್ಯ(Rebellious Spirit) ದಿಂದ ಕಾವ್ಯದ ಅಪದ್ರಕ್ಷಕ (Savioar) ರಾಗಿ ಪಟ್ಟ ಪಾಡೆಲ್ಲಾ ಹುಟ್ಟು ಹಾಡಾಗುತ್ತಾ, ನವನವೋನ್ಮೇಷ ಶಾಲಿಯಾದ ಪ್ರತಿಭಾ ಕಲ್ಪನೆಯ ನವೀನ ದಿಗಂತಗಳನ್ನು ತೆರೆದು ತೋರುತ್ತಾ, ಬೆರಗುಗೊಳಿಸುತ್ತಾ, ಬದುಕಿನ ಅನುಭವ ಶಿಖರಗಳನ್ನು ಅಭಿಜಾತ ಪ್ರಜ್ಞೆಯಿಂದ ದರ್ಶನಂಗೈದಿದ್ದಾರೆ.

ಈ ಬದುಕಿನ ಮೂಲ ಮನೋಧರ್ಮದ ಸಹಸ್ರ ಮುಖಗಳ ಕವಿಯ ಹೃದಯಾನುಭವದಲ್ಲಿ ಹಾದು ಬಂದಾಗ ಅವುಗಳ ಸಂಘರ್ಷದಿಂದ ಉಂಟಾಗುವ ಅಶಾಂತಿಗೆ ಕಾರಣವಾದ ಏಕವ್ಯಕ್ತಿಪರ (Individualism) ವಾದ, ಪ್ರತ್ಯೇಕ (Separatism) ವಾದ, ವೈಯಕ್ತಿಕ (Personalism) ವಾದ, ಸ್ವಾರ್ಥನಿಷ್ಠ (Selfishness), ಭೋಗಾಸಕ್ತ (Sensualism) ವಾದ, ಪರಹಿತವಿಮುಖವಾದ, ಸ್ವೇಂದ್ರಿಯ ತರ್ಪಣಾಬುದ್ದಿ, ಜೀವನಕ್ಕೆ ನಲಿವನ್ನೋಡುವ ಸಖಿಗೀತವಾಗಿ ಹೊರಹೊಮ್ಮಿ ರಸಿಕರ ಹೃದಯವನ್ನು ತಣಿಸಿ, ಅಪ್ಪಟವಾದ ಹಾಲಿನ ಕೆನೆಯಂತೆ ಹವ್ಯಾಜವಾದ ವಾತ್ಸಲ್ಯ ಉಕ್ಕಿ, ಕರುಳಿನ ವಚನಗಳಾಗಿ ರೂಪತಾಳಿ ನಮ್ಮ ಮನಸ್ಸನ್ನು ಸೆರೆಹಿಡಿದು, ಒಳಗಿನ ಕೊರಗನ್ನು ಕವಿ ಹೊರೆಗೆ ತೋಡಿಕೊಂಡಾಗ ಅದು ಸವಿಯಸೊಲ್ಲಾಗಬಹುದೆಂಬ ಶೆಲ್ಲಿಯ ಆ ಸಿದ್ಧಾಂತದ (Our swetest songs those that tell of saddest thought) ಈ ಮಾತನ್ನು ಬೇಂದ್ರೆಯವರು 'ಅಳು ನುಂಗಿ ನಗು ಒಮ್ಮೆ ನಾನೂನು ನಕ್ಕೇನs' ಎಂಬ ತತ್ವ ಸುಧೆಯನ್ನು ಸವಿದ ಮಹಾನುಭಾವರು. ತಮ್ಮ ದುಃಖವೆಷ್ಟೇ ಇರಲಿ ಅದು ಅವರ ರಸಾನುಭವದ ಸ್ಪರ್ಷದಿಂದ ರಸಿಕರಿಗೆ ರಸಾಯನವಾಗಿ ಪರಿಣಮಿಸಿದ ಹಲವಾರು ನಿದರ್ಶನಗಳಿವೆ. ಅಂತಹ ಅಪೂರ್ವ ಸೃಷ್ಟಿಯ ಕಾವ್ಯಗೊಂಚಲು ಅಣು-ಮಹತ್(Epsilon and infinity) ನಿಂದ ಕೂಡಿದ ಮಹಾ ಕವಿತೆ (Epopee) ಗಳು ಬೇಂದ್ರೆಯವರದು.

ಪ್ರಕೃತಿ ಸೃಷ್ಟಿಯ ಕುರಿತು ಈ ನಿತ್ಯ ಆಶ್ಚರ್ಯ ಆನಂದದ ದೃಷ್ಟಿ ವಿಶ್ವದೇವತಾ ತತ್ವ (Pantheism), ವಿಗ್ರಹ ಆರಾಧನೆ (Pagan), ಬೇಂದ್ರೆಯವರ ಅತ್ಯುನ್ನತ ಅಧ್ಯಾತ್ಮಕ ಬುದ್ದಿ ವಿಲಾಸದಲ್ಲಿಯೂ ಕಣ್ಣಿಗೂ ಕಣ್ಣಾಗಿ ಮಾತಿನಲ್ಲಿ ಇರುವಂತ ಮೌನದ ಧ್ವನಿಯಂತೆ ಪರಿಸ್ಪಂದಿಸುತ್ತಿರುತ್ತದೆ. ನಭಕ್ಕೆ ಏನಿದೆ ನೆಲದೋಳ್ ಆಸೆ ; ನೆಲಕ್ಕೆ ಮಾತ್ರ ಅದರ ಶುಷ್ಕ ಪಿಪಾಸೆ! ನಭ ಪುರುಷ; ನೆಲ ಪ್ರಕೃತಿ. ಇದು ಸನಾತನ ಧರ್ಮ ದ್ವಂದ್ವ. ಮಳೆ ಮೋಡವೆಂದರೇನು, ನಾನು (ಮಳೆ ಮೋಡ) ಭೂಮಿ ಮತ್ತು ನೀರಿನ ಮಗಳು (I am the doughter of earth and water) ಎಂದಿದೆ ಶೆಲ್ಲಿ ಕವಿಯ ಮೋಡ. ಆದರೆ ಬೇಂದ್ರೆಯವರ ಉತ್ಪ್ರೇಕ್ಷೆ ಇನ್ನೂ ಸೂಕ್ಷ್ಮ. ನೆಲವೆಣ್ಣೆ ತನ್ನಬಾನೊಡೆಯ ಚಿರವಿರಹದ ವ್ಯಥೆಯಲ್ಲಿ ಕಾದುಕಾದು ಅವಳ ಕಣ್ಣೀರು ಕಡಲಾಗಿ, ಉಗಿಯಾಗಿ, ಉಕ್ಕಿ ಮೋಡವಾಗಿ ಮೇಲೆ ಹೋಗಿ 'ದೇಹಿ' ಎಂಬ ಬಾನೊಡೆಯನ ಕಾಲಿಗಡಸಿ ತಿರುಗಿ ಉದುರಿದಾಗ ಅವಳ ಎದೆ ಹಚ್ಚಗೆ ನವಿರುತ್ತದೆ. ಎಂಥ ಭಾವ ನವಿರೇಳಿಸುವ ಊಹೆಯ ಈಹೆ. ಇದು ಬರೀ ಮಾತುಗಳ ಪವಣಿಕೆ ಅಲ್ಲ. ಇಲ್ಲಿ ಪದಪದವೂ ಪದಕದ ಪದವಿಯನ್ನು ಪಡೆದಿದೆ. ಇವೆಲ್ಲಾ ಸೇರಿ ಎದೆಯಲ್ಲಿ ಗುಡುಗುತ್ತಿರುವ ಮೇಘವಿದೆ. ಸತ್ಯವನ್ನೇ ಸೌಂದರ್ಯವನ್ನಾಗಿ ಅರಳಿಸುವ ಮಾತುಗಾರಿಕೆ ಇದು. ಇವುಗಳೆಲ್ಲವನ್ನೂ ಅಕ್ಷಯ ನಿಧಿಯಾಗಿ ಕೊರಳಲ್ಲಿ ಕಟ್ಟಿಟ್ಟುಕೊಂಡು ಬಾಳಬಂದಿದ್ದಾರೆ ಬೇಂದ್ರೆ.

ಇಷ್ಟೊಂದು ವಿಧವಾಗಿ ಇಷ್ಟೊಂದು ಪ್ರಮಾಣದಲ್ಲಿ ಜಾನಪದ ಲಯಗಳನ್ನು ಬಳಸಿದ ಆಧುನಿಕ ಕವಿ ಇನ್ನೊಬ್ಬರಿಲ್ಲವೆಂದೇ ಹೇಳಬಹುದು.

ಸಾಮಾನ್ಯವಾಗಿ ಅವರ ಕವಿತೆಗಳು ಕಾವ್ಯ ಗುಣದಲ್ಲಿ ಒಂದು ಉನ್ನತ ಮಟ್ಟವನ್ನು ಬಿಟ್ಟು ಕೆಳಗಿಳಿಯುವುದಿಲ್ಲ. ಅನುಭವ ಆಳದಿಂದ ಮೂರ್ತಗೊಂಡು ವಾಚಕನ ಹೃದಯದ ತಳಮುಟ್ಟಿ ಬರುತ್ತದೆ. ಯಾವ ಸದ್ದುಗದ್ದಲವಿಲ್ಲದೇ ಪ್ರಶಾಂತವಾದ ಚಂದ್ರೋದಯದ ಬೆಳ್ದಿಂತಿ ಪಸರಿಸುವಂತೆ ಸುಖ-ದುಃಖ, ಸಂತೋಷ, ಸೌಂದರ್ಯ, ವಾತ್ಸಲ್ಯ, ಪ್ರೇಮ, ಅಮೃತಾನುಭವ ಯಾವುದರ ಒಂದು ಭಾವವನ್ನು ಅನುಸರಿಸಿದರೂ ಅದು ಜೀವನದ ವಿಶಾಲ ಪರಿಧಿಯನ್ನು ನಮ್ಮ ಕಣ್ಣೆದುರು ತೆರೆಯುತ್ತದೆ. ಆ ರಸಪಾಕದಲ್ಲಿ ಎಲ್ಲವೂ ಹಾಲುಗಡಲಿನ ಸೀಮೆಯಾಗಿ ಕಂಗೊಳಿಸುತ್ತದೆ. ಸೃಷ್ಟಿಯಲ್ಲಿ ಬಿಡಿಬಿಡಿಯಾಗಿ ಕಾಣುವ ಸೌಂದರ್ಯವನ್ನು ಹಿಡಿ-ಹಿಡಿಯಾಗಿ ಅನುಭವಿಸಿ ಆನಂದಿಸುವ ಹಿರಿಯ ಪ್ರಕೃತಿ, ಪ್ರವೃತ್ತಿ ಪ್ರಸಾದಕರು ಬೇಂದ್ರೆಯವರು. ಬದುಕಿನಲ್ಲಿ ಪಾಡು-ಪಾಡಾಗಿಯೇ ಉಳಿದರೆ ಹಾಡಾಗುವುದು ಹೇಗೆ? ಎಂಬುದನ್ನು ಕವಿ ಕವಿತೆಯಲ್ಲಿಯೇ ಉತ್ತರ ನೀಡಿದ್ದಾರೆ-ನೀಡಿರುವ ಕವಿಯ (31 ಜನವರಿ 1896 : 26 ಅಕ್ಟೋಬರ್ 1981) 130ನೇ ಜನ್ಮದಿನಕ್ಕೊಂದು ಶಿರಸಾಷ್ಟಾಂಗ ಪ್ರಣಾಮಗಳು.

- **ಪ್ರೊ॥ ಬಾತಿ ಬಸವರಾಜ್**, ಶೈಕ್ಷಣಿಕ ಸಲಹೆಗಾರರು, ದವನ ಕಾಲೇಜು, ದಾವಣಗೆರೆ. 88845 27130

# ಜ್ಞಾನಪ್ರಭೆ, ಭಕ್ತಿ ನಿಷ್ಠೆಯ ವಚನಕಾರ : ಶರಣ ಮಡಿವಾಳ ಮಾಚಯ್ಯ

ಹನ್ನೆರಡನೆಯ ಶತಮಾನದಲ್ಲಿ ಶರಣರು ಸರ್ವರಿಗೂ ಸಮಪಾಲು-ಸಮಬಾಳು ಒದಗಿಸಲು ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಶರಣರ ಅಗ್ರಗಣ್ಯ ಬಳಗದಲ್ಲಿ ಮಡಿವಾಳ ಮಾಚಿದೇವ ಅತ್ಯಂತ ಪ್ರಕಾಶಮಾನವಾಗಿ ಇಡೀ ಶರಣ ಸಮುದಾಯದ ಪ್ರಶಂಸೆಗೆ ಒಳಗಾದವರು. ಮಾಚಯ್ಯನದು ಬಹುಮುಖ ವ್ಯಕ್ತಿತ್ವ. ವೀರಶ್ರೀ, ಜ್ಞಾನಪ್ರಭೆ, ಸತ್ಯನಿಷ್ಠೆ, ನ್ಯಾಯನಿಷ್ಠೂರತೆ, ನಿರಹಂಕಾರ, ನಿರ್ವಂಚಕತ್ವ ಇತ್ಯಾದಿ ಸತ್ವಗಳ ಸಂಕಲನವೇ ಮಾಚಿದೇವರ ವ್ಯಕ್ತಿತ್ವ. ಕಲ್ಯಾಣದ ಕ್ರಾಂತಿಯಲ್ಲಿ ಇವರ ಪಾತ್ರ ಮಹತ್ವದ್ದು. ಶರಣರಿಗೆ ಗಂಡಾಂತರ ಬಂದಾಗ ಅವರ ಬೆನ್ನುಹಿಂದೆ ಭೀಮರಕ್ಷೆಯಾಗಿ, ವೀರನಂತೆ ನಿಲ್ಲುತ್ತಾನೆ. ಬೆನ್ನಟ್ಟಿಬಂದ ಬಿಜ್ಜಳನ ಸೇನೆಯನ್ನು ಕಾಲರುದ್ರನಂತೆ ಖಂಡಿಸುತ್ತಾ ಹೋರಾಡಿದ ಗಂಡುಗಲಿ ಮಾಚಯ್ಯ. ಶರಣರ ಬೆಂಬತ್ತಿದ್ದ ವಿಪತ್ತು ಪರಿಹಾರವಾಗುತ್ತದೆ. ಉಳುವಿಯಲ್ಲಿ ಮತ್ತೆ ತತ್ವ ಮಂಟಪ ಸ್ಥಾಪನೆಗೆ ಮಾಚಯ್ಯನೇ ಕಾರಣೀಪುರುಷ. ಅನುಭವ ಮಂಟಪ ಕಟ್ಟುವಲ್ಲಿ ಮಾಚಯ್ಯನ ಪಾತ್ರ ಹಿರಿದು. ದೇಶದ ನಾನಾ ಭಾಗಗಳಿಂದ ಬರುವವರಿಗೆ ಮಾಚಯ್ಯ ಪರೀಕ್ಷಿಸಿ, ಆಪ್ತಸಮಾಲೋಚಿಸಿ, 'ಮಡಿ' ಹಾಸಿ ಸ್ವಾಗತಿಸುವ ಕಾರ್ಯ ಇವರದು. ಪರೀಕ್ಷೆಗೆ ಒಳಪಡದೇ ಯಾರಿಗೂ ಕಲ್ಯಾಣದ ಪ್ರವೇಶವಿರಲಿಲ್ಲ.

**ಮಡಿವಾಳ ಮಾಚಿದೇವರ ಹಿನ್ನೆಲೆ**

ಮಡಿವಾಳ ಮಾಚಿದೇವ ಅಥವಾ ಮಾಚಯ್ಯ ಹುಟ್ಟಿದ್ದು ವಿಜಾಪುರ ಜಿಲ್ಲೆಯ ಹಿಪ್ಪರಿಗಿಯಲ್ಲಿ ಕ್ರಿ.ಶ. 1120-1130ರ ನಡುವೆ. ತಂದೆ ಪರುವತಯ್ಯ, ತಾಯಿ ಸುಜ್ಞಾನವ್ವ, ವೃತ್ತಿ ಮಡಿವಾಳನ (ಅಗಸ) ಕೆಲಸ. ದೀಕ್ಷಾ ಗುರು ಮಲ್ಲಿಕಾರ್ಜುನ, ಇಷ್ಟದೈವ ಕಲ್ಲಿನಾಥ, ಕಲಿದೇವರದೇವ ಎಂಬ ಅಂಕಿತದಲ್ಲಿ 354 ವಚನಗಳನ್ನು ಬರೆದಿದ್ದಾರೆ. ಒಂದು ರೀತಿಯ ವೀರ ವ್ಯಕ್ತಿತ್ವ ಇವರದು. ಶರಣರ ವಸ್ತ್ರಗಳನ್ನಲ್ಲದೆ ಕಾಯಕ ಮಾಡದ, ಸೋಮಾರಿಗಳ, ಬಡವರನ್ನು ಶೋಷಿಸುವ ಜನರ, ದುರ್ಗುಣವುಳ್ಳ ವರ ಬಟ್ಟೆಗಳನ್ನೆಂದು ಆತ ಮುಟ್ಟುತ್ತಿರಲಿಲ್ಲ. ಬೇರೆಯವರ ವಸ್ತ್ರಗಳನ್ನು ಶುಚಿ ಮಾಡುವುದಿಲ್ಲ ಎಂಬ ಪ್ರತಿಜ್ಞೆ ಮಾಡಿ ಅದರಂತೆ ನಡೆದುಕೊಂಡರು. 'ಅರಸುತನ ಮೇಲಲ್ಲ – ಅಗಸತನ ಕೀಳಲ್ಲ' ಎಂಬುದನ್ನು ಜನಕ್ಕೆ ಸಾರಿದ ಮಾಚಯ್ಯ ಅನುಭವ ಮಂಟಪದಲ್ಲಿ ಮತ್ತು ಶರಣರ ಆಂದೋಲನದಲ್ಲಿ ಕ್ರಿಯಾಶೀಲವಾಗಿ ಭಾಗವಹಿ ಸಿದ್ದ. ಕಲ್ಯಾಣ ಕ್ರಾಂತಿಯ ನಂತರ ವಚನ ಸಾಹಿತ್ಯ ರಕ್ಷಣೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. 'ಹಿಪ್ಪರಗಿ' ಗ್ರಾಮ ದೇವರ ಹಿಪ್ಪರಗಿ ಆಗಿದ್ದು ಮಾಚಯ್ಯನಿಂದ ಬಸವ ತತ್ವಕ್ಕೆ ಪ್ರಭಾವಿತನಾಗಿ ಕಲ್ಯಾಣದಕಡೆ ಬಂದು ಬಸವಾದಿ ಶರಣರ ಕೂಟದಲ್ಲಿ ಸೇರುತ್ತಾನೆ.

**ಮನುಷ್ಯ ಕಾಗೆ-ಕೋಳಿಗಿಂತ ಕನಿಷ್ಠ**

ಮಧುರದ ಗುಣವ ಇರುವೆ ಬಲ್ಲುದು, ವಾಯುವಿನ ಗುಣವ-ಸರ್ಪಬಲ್ಲುದು. ಗೋತ್ರದ ಗುಣವ ಕಾಗೆ ಬಲ್ಲುದು, ವೇಳೆಯ ಗುಣವ ಕೋಳಿ ಬಲ್ಲದು. ಇದು ಕಾರಣ ಮನುಷ್ಯ ಜನ್ಮದಲ್ಲಿ ಬಂದು, ಶಿವಜ್ಞಾನಾನುಭವನರಿಯದಿರ್ದಡೆ, ಆ ಕಾಗೆ-ಕೋಳಿಗಳಿಗಿಂತ ಕರಕಷ್ಟ ಕಾಣಾ, ಕಲಿದೇವರ ದೇವ ಎಂಬ ವಚನದಲ್ಲಿ ಸಿಹಿಯ ಗುಣ, ಇರುವೆಗೆ ಗೊತ್ತು, ವಾಯುವಿನ ಗುಣ ಸರ್ಪಕ್ಕೆ ಗೊತ್ತು, ಅದು ಬಾಯಲ್ಲೇ ಉಸಿರಾಡುತ್ತದೆ, ಗೋತ್ರದ ಗುಣ ಕಾಗೆಗೆ ಗೊತ್ತು. ಅಗುಳ ಕಂಡರೆ ತನ್ನ ಬಳಗವನ್ನು ಕೂಗಿ ಕರೆಯುತ್ತದೆ. ವೇಳೆಯ ಗುಣ ಕೋಳಿಗೆ ಗೊತ್ತು. ಅಲಾರಂ ಇಟ್ಟಂತೆ ಬೆಳಿಗ್ಗೆ ನಿಯಮಿತವಾಗಿ ಕೂಗಿ ಎಲ್ಲರನ್ನು ಎಚ್ಚರಗೊಳಿಸುತ್ತದೆ. ಅದರಂತೆ ಮನುಷ್ಯನಾಗಿ ಹುಟ್ಟಿದ ಮೇಲೆ ಶಿವಜ್ಞಾನದ ಅನುಭವವನ್ನು ಅರಿತುಕೊಳ್ಳ ಬೇಕು. ಆಗಲೇ ಅವನ ಜನ್ಮ ಸಾರ್ಥಕ, ಇಲ್ಲವಾದ್ರೆ ಮನುಷ್ಯ ಕಾಗೆ-ಕೋಳಿಗಿಂತಲೂ ನಿಕೃಷ್ಟ ಎಂದು ಮಾಚಯ್ಯ ತಿಳಿಸಿದ್ದಾನೆ.

**ಬಸವಣ್ಣನಿಗೆ ಬುದ್ಧಿ ಹೇಳಿದ ಮಾಚಯ್ಯ**

'ಬೇಡುವ ಭಕ್ತರಿಲ್ಲದೆ ನಾನು ಬಡವನಾದೆ' ಎಂಬ ಉದ್ಗಾರ ಬಸವಣ್ಣ ತಾಳಿದ್ದು, ಮಾಚಯ್ಯನ ಕೋಪಕ್ಕೆ ಗುರಿಯಾಗಿ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ನಿಮಗೆ ಇಂತಹ ಬಿಮ್ಮು ಬರಬೇಕೇ? ನೀವೆಂತಹ ಭಕ್ತಿ ಜ್ಞಾನಿ! ಉಳಿದ ಭಕ್ತರೆಲ್ಲ ಬೇಡುವುದಕ್ಕೆ ಹುಟ್ಟಿದ ಬಡ ಬಿಕನಾಸಿಗಳು; ಎಂದು ಕೊಂಡಿದ್ದೀರಾ? ನೀವು ಕೊಡಲಿಕ್ಕಾಗಿಯೇ ಹುಟ್ಟಿದ ಮಹೈಶ್ವರ್ಯದ ಮಹಾದಾನಿಗಳಲ್ಲವೇ? ಎಂದು ಚುಚ್ಚಿ ಆಡಿದ ಮಾತುಗಳಿಂದ ಬಸವಣ್ಣ ಇವರ ಮಾತಿಗೆ ಕುಸಿದು ಬಿಡುತ್ತಾರೆ. ಮಾಚಯ್ಯನಿಗೆರಗಿ ಕ್ಷಮೆ ಬೇಡುತ್ತಾರೆ. 'ನಾನು ಮರವೆಯ ಮರುಳು, ನೀವು ಅರಿವಿನತಿರುಳು; ನಾನು ರಂಜಕ, ನೀವು ನಿರಂಜನರು'. ನಾನು ಮರುವೆಯಿಂದ ತಪ್ಪಿದ್ದನ್ನು ನೀವು ಅರಿವಿನಿಂದ ತಿದ್ದಬೇಕು ಎಂದು ಬೇಡಿಕೊಳ್ಳುತ್ತಾರೆ. ವಿನಯ,



ಶಾಂತಿ, ಇಂದ್ರಿಯ ನಿಗ್ರಹ, ನಿರ್ವಂಚನೆ, ಸತ್ಯ, ಸ್ಥಿರಬುದ್ಧಿ, ನಿಷ್ಕಪಟತ್ವ, ನಿರಂಕಾರ, ಕೈಂಕರ್ಯ, ಭೀತಿ, ಅನುಸರಣೆಗಳೇ ಭಕ್ತಿಯ ಕುರುಹುಗಳು ಎಂದು ಮಾಚಯ್ಯ ಭಕ್ತಿಯ ರಹಸ್ಯವನ್ನು ಬಸವಣ್ಣನಿಗೆ ತಿಳಿಸುತ್ತಾರೆ.

**ಭಕ್ತಿಯ ಕುರಿತು ಮಾಚಯ್ಯನ ವ್ಯಾಖ್ಯಾನ**

ಭಕ್ತನಾದವನು ಬಾಹ್ಯಾಚರಣೆ ಮೀರಿ ಅಂತರಂಗದ ಭಕ್ತನಾಗಬೇಕು. ಭಕ್ತಿಯೆಂಬುದು ಕೇವಲ ಆಚರಣೆಯಲ್ಲ. ಅದು ಅಂತರಂಗ-ಬಹಿರಂಗ ಶುದ್ಧಿಯ ಸರ್ವಸಮರ್ಪಣೆಯ ಕ್ರಿಯೆ. ಭಕ್ತಿ ಸಾಧನೆ ಸಫಲವಾದರೆ ಸಂಕೇತದ ಲಿಂಗದ ಅಗತ್ಯವಿಲ್ಲ. ಭಕ್ತಿ ಕೇವಲ ಡೊಂಬರಾಟವೆಂದು ಟೀಕಿಸುತ್ತಾನೆ. ಕೆಲವರು ದೀಕ್ಷೆ ಪಡೆದು ಇಷ್ಟಲಿಂಗ ಧರಿಸಿ, ದೇವಾಲಯ ಗಳಲ್ಲಿಯ ಪ್ರತಿಮೆಗಳನ್ನು ಪೂಜಿಸುವುದನ್ನು ಮಾಚಯ್ಯ ತಮ್ಮ ವಚನದಲ್ಲಿ ಖಂಡಿಸಿದ್ದಾನೆ. 'ಉಡಿಯ ಲಿಂಗವಬಿಟ್ಟು ಗುಡಿಯ

**ಇಂದು ಮಡಿವಾಳ ಮಾಚಿದೇವ ಜನ್ಮದಿನ**

ಲಿಂಗಕ್ಕೆ ಶರಣೆಂಬ ಮತಿ ಭ್ರಷ್ಟರನೇನೆಂಬೆನಯ್ಯ ಕಲಿದೇವರದೇವ' ಎಂಬ ವಚನದಲ್ಲಿ ಇಷ್ಟಲಿಂಗ ಕಲ್ಪನೆ ಬಂದದ್ದೇ ದೇವಾಲಯ ಸಂಸ್ಕೃತಿಯ ವಿರೋಧವಾಗಿ, ಸರ್ವರ ಪ್ರವೇಶಕ್ಕೆ ಅವಕಾಶವಿಲ್ಲದ ದೇವಾಲಯಗಳನ್ನು ಮಾಚಯ್ಯ ತಿರಸ್ಕರಿಸುತ್ತಾನೆ, ಖಂಡಿಸುತ್ತಾನೆ.

**ಬದುಕು-ಬರಹದಲ್ಲಿ ಭಿನ್ನತೆಬೇಡ**

'ವಚನದ ರಚನೆಯ ನುಡಿವ ಬಯಲು ರಂಜಕರೆಲ್ಲ ಭಕ್ತರಪ್ಪರೇ ಅಯ್ಯಾ? ವಚನ ತನ್ನಂತಿರದು, ತಾನು ವಚನದಂತಿರ' ಎಂಬ ವಚನದಲ್ಲಿ ಮಾತು ಮತ್ತು ಕೃತಿ, ನಡೆ-ನುಡಿ ಹೊಂದಾಣಿಕೆ ಇಲ್ಲದೆ ವಚನದಲ್ಲಿ ಹೇಳುವುದೇ ಒಂದು, ನಡೆದುಕೊಳ್ಳುವುದೇ ಒಂದು, ಹೀಗಾಗಬಾರದು ಅವರೆಲ್ಲ ಕೇವಲ 'ವಚನರಂಜಕರು' ಅಂದರೆ ರಂಜನೀಯವಾಗಿ ಶಬ್ದ ಜೋಡಣೆ ಮಾಡಿ ವಚನ ರಚಿಸುವರು. ಅಂಥವರು ಖಂಡಿತ ಭಕ್ತರೆನಿಸಿಕೊಳ್ಳುವುದಿಲ್ಲ. ಅಂಥವರ ವಚನ ಅವರ ಹೃದಯದ ಮಾತಾಗಿರುವುದಿಲ್ಲ. ತಾನು ಹೇಳಿದ ವಚನದಂತೆ ನಡೆದುಕೊಳ್ಳುವುದಿಲ್ಲ. ಅಂತವರದು ಸೋಗಿನ ಬದುಕು, ಅವರ ಸ್ಥಿತಿ ಒಡೆಯನನ್ನು ಕಂಡು ನಾಯಿ ಬಾಲವಾಡಿಸಿದಂತೆ ಹೀಗಾಗಿ ಬದುಕು-ಬರಹದಲ್ಲಿ ಭಿನ್ನತೆ ಬೇಡ. ಅವೆರಡು ಒಂದಾಗಿರಬೇಕೆಂಬ ಮಾಚಯ್ಯನ ಮಾತು ಇವತ್ತಿನ ಲೇಖಕರಿಗೆ, ಕವಿ, ಸಾಹಿತಿಗಳಿಗೂ ಅನ್ವಯಿಸುವಂತದ್ದು.

**ಮಾಚಯ್ಯನಿಗೆ ಕ್ಷಮೆ ಕೋರಿದ ಬಿಜ್ಜಳರಾಜ**

ಕುಹಕರು ಎಲ್ಲೆಡೆಯಲ್ಲಿಯು ಇರುತ್ತಾರೆ. ಕಲ್ಯಾಣದಲ್ಲಿಯೂ ಇದ್ದರು. ಅವರಲ್ಲೊಬ್ಬ ಒಮ್ಮೆ ಮಾಚಯ್ಯನನ್ನು ಹಾದಿಯಲ್ಲಿ ಕೆಣಕುತ್ತಾನೆ. ಕೆಣಕಿ ಸಾವಿನ ಉಡಿಯಲ್ಲಿ ಬೀಳುತ್ತಾನೆ. ಬಿಜ್ಜಳ ಭೂಪಾಲನಿಗೆ ದೂರುಹೋಗುತ್ತದೆ. 'ಅಗಸನಿಗೆ ಇಷ್ಟು ಅಹಂಕಾರವೇ ಎಂದು ಬಿಜ್ಜಳ ಗರ್ಜಿಸುತ್ತಾನೆ' ಮಾಚಯ್ಯನನ್ನು ಸಾಯಿಸಲು ಜಟ್ಟಿಗಳನ್ನು ಪಟ್ಟದಾನೆಯನ್ನು ಕಳಿಸುತ್ತಾನೆ, ಮಾಚಯ್ಯ ಅವರನ್ನು ಎದುರಿಸಿ ಆನೆಯನ್ನು, ಜಟ್ಟಿಗಳನ್ನು ಸಾಯಿಸುತ್ತಾನೆ. ಬಿಜ್ಜಳನಿಗೆ ಅರಿವು ತಲೆದೋರಿ ಮಾಚಯ್ಯನಿಗೆ ಕ್ಷಮೆ ಕೋರುತ್ತಾನೆ. ಇಂತಹ ಅನೇಕ ಸಂಗತಿಗಳ ಕುರಿತು ಜಾನಪದ ಕಥೆಗಳು, ಪವಾಡಗಳು ಮಾಚಯ್ಯನ ಜೀವನ ಚರಿತ್ರೆಯಲ್ಲಿ ದಾಖಲಾಗಿವೆ. ಈ ಕುರಿತು ಸಂಶೋಧನಾತ್ಮಕವಾಗಿ ಅಧ್ಯಯನದ ಅವಶ್ಯಕತೆಯಿದೆ.

**ಮಾಚಯ್ಯನ 'ಮಡಿವಾಳ' ಕಾಯಕನಿಷ್ಠೆ**

ಮಡಿವಾಳಿಕೆ ವೃತ್ತಿಯಲ್ಲಿದ್ದ ಮಾಚಯ್ಯನಿಗೆ ಅಂತರಂಗದಲ್ಲಿ ಆವುದೋ ಅತೃಪ್ತಿ. ಗ್ರಾಮ ಹಿಪ್ಪರಿಗೆಯಲ್ಲಿಯೇ ಹುಟ್ಟಿ ಅಲ್ಲಿಯೇ ಬಾಳಿ ಹೋಗದೇ ಅವರು ಅರಸುತ್ತಿದ್ದುದು ಮಹತ್ತು, ಬೃಹತ್ತು ಆಗಿತ್ತು. ಬಸವತತ್ವಕ್ಕೆ ಪ್ರಭಾವಿತನಾಗಿ ಕಲ್ಯಾಣಕ್ಕೆ ಬಂದು ತನ್ನ ಕಾಯಕ ಮುಂದುವರಿಸುತ್ತಾನೆ. ಸುರ್ಯೋದಯಕ್ಕೆ ಮುನ್ನವೇ ಶರಣರುಟ್ಟ ಬಟ್ಟೆಗಳನ್ನು 'ಮಡಿವಾಳಗುಂಡ'ಕ್ಕೆ ಕೊಂಡೊಯ್ಯುವುದು. ಬಟ್ಟೆಗಳನ್ನು ಮಡಿಗೊಳಿಸಿ ಒಣಗಿಸಿ ಗಂಟುಕಟ್ಟಿ 'ವೀರಗಂಟೆ' ನುಡಿಸುತ್ತಾ ಶರಣರ ಮನೆಗೆ ತಲುಪಿಸುವುದು. ಭಕ್ತರಲ್ಲದವರು ತಮ್ಮನ್ನು ಮುಟ್ಟಬಾರದೆಂಬ ನಿಯಮ ವಿಧಿಸಿಕೊಂಡಿದ್ದನು. ಅತ್ಯಂತ ಭಕ್ತಿ-ಭಾವದಿಂದ ಮಡಿವಾಳನ ಕಾಯಕನಿಷ್ಠೆ ಮಾಚಯ್ಯನದು.

ಮಡಿವಾಳ ಮಾಚಿದೇವನ ಜೀವನ ಚರಿತ್ರೆ ಇಡೀ ಶರಣ ಸಮುದಾಯದಲ್ಲಿಯೇ ವೈಶಿಷ್ಟ್ಯತೆ ಪಡೆದುಕೊಂಡಿದೆ. ಶರಣರನ್ನು, ಸಮಾಜದ ಜನರನ್ನು ತಿದ್ದುವ ಇವರ ಕಾರ್ಯ ಶ್ಲಾಘನೀಯ. ಅವರ ವಿಚಾರಶೀಲತೆ, ಭಕ್ತಿ, ಜ್ಞಾನ, ಅನುಭವ, ಪರಸ್ಪರ ಗೌರವ, ವೃತ್ತಿಗೌರವ, ಸಮಾನತೆ ಮುಂತಾದ ತತ್ವಗಳಿಗೆ ಅವರ ವಚನಗಳು ಮಹತ್ವ ನೀಡಿವೆ. ಅಗಸ ಮುನಿಯುವುದು ಮಲಿನಕ್ಕೆ, ವಸ್ತ್ರಕ್ಕಲ್ಲ. ಶರಣ ಮುನಿಯುವುದು ಅವಗುಣಕ್ಕೆ ಶಿವಭಕ್ತಗಲ್ಲ, ನಾನೆಂಬು ದನ್ನು (ಅಹಂಭಾವ) ಮರೆತುಬಿಡಿ, ಆಗ ಪುಟವಿಟ್ಟ ಚಿನ್ನದಂತೆ ನಿಮ್ಮ ಭಕ್ತಿ ಇನ್ನಷ್ಟು ಥಳಥಳಿಸುತ್ತದೆ ಎಂಬ ಮಾತುಗಳಿಂದ ಇಡೀ ಶರಣರ ಬಳಗವೇ ಮಾಚಯ್ಯನ ವ್ಯಕ್ತಿತ್ವಕ್ಕೆ, ಅನುಭಾವಕ್ಕೆ ಶರಣು-ಶರಣೆಂದಿದೆ. ಫೆಬ್ರವರಿ ಒಂದು ಮಾಚಯ್ಯ ಜನ್ಮದಿನದ ಪ್ರಯುಕ್ತ ಓದುಗರಿಗಾಗಿ ಒಂದಿಷ್ಟು ಮಾಹಿತಿ ನೀಡಿದ ಸಂತಸ ನನ್ನದಾಗಿದೆ.

- **ಡಾ. ಗಂಗಾಧರಯ್ಯ ಹಿರೇಮಠ**, ವಿಶ್ರಾಂತ ಪ್ರಾಧ್ಯಾಪಕರು ಮೊ: 9880093613

# ಇನ್ಫೋಸಿಸ್ ಸಹ ಸ್ಥಾಪಕನ ವಿರುದ್ಧದ ಜಾತಿ ನಿಂದನೆ ಪ್ರಕರಣದ ತನಿಖೆಗೆ ಹೈಕೋರ್ಟ್ ತಡೆ

ಬೆಂಗಳೂರು, ಜ. 30 - ಇನ್ಫೋಸಿಸ್ ಸಹಸ್ಥಾಪಕ ಕೆ.ಗೋಪಾಲಕೃಷ್ಣನ್ ಹಾಗೂ ಇತರೆ 17 ಜನರ ವಿರುದ್ಧ ದಾಖಲಾಗಿದ್ದ ಜಾತಿನಿಂದನೆ ಪ್ರಕರಣದ ತನಿಖೆ ಹಾಗೂ ಪ್ರಕ್ರಿಯೆಗಳಿಗೆ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ತಮ್ಮ ವಿರುದ್ಧ ದಾಖಲಿಸಿದ್ದ ಜಾತಿನಿಂದನೆ ಪ್ರಕರಣವನ್ನು ಪ್ರಶ್ನಿಸಿ ಗೋಪಾಲಕೃಷ್ಣನ್ ಅವರು ಹೈಕೋರ್ಟ್ ಮೊರೆ ಹೋಗಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ತನಿಖೆಗೆ ತಡೆಯಾಜ್ಞೆ ಹೊರಡಿಸಿದ್ದಾರೆ.

ಪ್ರಸಕ್ತ ಐ.ಐ.ಎಸ್.ಸಿ. (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್) ಅಧ್ಯಕ್ಷರಾಗಿರುವ ಗೋಪಾಲಕೃಷ್ಣನ್ ಸೇರಿದಂತೆ 17 ಬೋಧಕ ಸಿಬ್ಬಂದಿ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಲಾಗಿತ್ತು. ಸಣ್ಣ ದುರ್ಗಪ್ಪ ಅವರು ಜಾತಿ ನಿಂದನೆ ಪ್ರಕರಣ ದಾಖಲಿಸಿದ್ದರು.

ಐಐಎಸ್‌ಸಿಯಲ್ಲಿ 2010 ರಿಂದ 2020 ರ ವರೆಗೆ ಕಾರ್ಯ ನಿರ್ವಹಿಸುವಾಗ ತಮ್ಮನ್ನು ನಕಲಿ ಹನಿ ಟ್ರ್ಯಾಪ್ ಪ್ರಕರಣದಲ್ಲಿ ಸಿಲುಕಿಸಲಾಗಿತ್ತು. ನಾನು ಭೋವಿ ಸಮುದಾಯಕ್ಕೆ ಸೇರಿದವನಾಗಿರುವ ಕಾರಣ ಜಾತಿನಿಂದನೆ ಮಾಡಲಾಗಿತ್ತು ಎಂದು ದುರ್ಗಪ್ಪ ದೂರು ದಾಖಲಿಸಿದ್ದರು.

ಈ ಹಿನ್ನೆಲೆಯಲ್ಲಿ ಇನ್ಫೋಸಿಸ್ ಸಹ ಸ್ಥಾಪಕ ಹಾಗೂ ಇತರೆ 17 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಮೊರೆ ಹೋಗಿದ್ದ ಗೋಪಾಲಕೃಷ್ಣನ್, ನಾನು ಐಐಎಸ್‌ಸಿ ಅಧ್ಯಕ್ಷನಾಗಿ 2022 ರಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಈಗ ನಡೆದಿದೆ ಎನ್ನಲಾದ ಘಟನೆಗಳು 2014ಕ್ಕೂ ಹಿಂದಿನವುಗಳಾಗಿವೆ ಎಂದು ಹೇಳಿದ್ದರು.

# ಕುಂಭಮೇಳದಲ್ಲಿ ಕಾಲ್ತುಳಿತದ ದುರಂತ ; ದುಃಖದ ಸಂಗತಿ

**ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್**

ದಾವಣಗೆರೆ, ಜ. 30- ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದ ಮೌನಿ ಅಮಾವಾಸ್ಯೆ ಹಿನ್ನೆಲೆಯಲ್ಲಿ ಅಮೃತ ಸ್ನಾನ ಮಾಡುವ ಸಂದರ್ಭದಲ್ಲಿ ಕಾಲ್ತುಳಿತ ಉಂಟಾಗಿ ಸುಮಾರು 30 ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದು, ಅನೇಕರು ಗಾಯಗೊಂಡ ಘಟನೆ ದುಃಖಕರ ಸಂಗತಿಯಾಗಿದೆ ಎಂದು ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದ್ದಾರೆ. ಘಟನೆಯಲ್ಲಿ ಮೃತರಾದವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುವೆ ಹಾಗೂ ಘಟನೆಯಲ್ಲಿ ಗಾಯಗೊಂಡವರು ಶೀಘ್ರವಾಗಿ ಗುಣಮುಖರಾಗಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ.

ಕುಂಭಮೇಳದಲ್ಲಿ ಕನ್ನಡಿಗರ ರಕ್ಷಣೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿದ್ದು. ಬೆಳಗಾವಿಯ ನಾಲ್ವರು ಮೃತಪಟ್ಟಿರುವ ಮಾಹಿತಿ ಲಭ್ಯವಾಗಿದೆ. ಹಾಗೂ ಗಾಯಗೊಂಡವರನ್ನು ಕರೆತರಲು ಏರ್ ಆಂಬ್ಯುಲೆನ್ಸ್ ವ್ಯವಸ್ಥೆಗೊಳಿಸಲಾಗಿದೆ ಎಂದಿದ್ದಾರೆ.

## ಬೆಳಗು ಬೆಳಕು

ಮೂಡಲ ಮನೆಯ ಮುತ್ತಿನ ನೀರು
ಚಿಮುಕಿಸಿ ಎಳೆದಿಹರು ಕನ್ನಡದಾ ತೇರು
ಸಾಧನಕೇರಿಯ ಸರಳ ಸಜ್ಜನ
ಜವಾರಿ ಭಾಷೆಯಲ್ಲೇ ಕಾವ್ಯ ಮಜ್ಜನ

ಧಾರವಾಡದ ದೇಸಿ ಸೊಬಗ ಚಿತ್ತಾರ
ಮಾಸ್ತರರ ಸಾಹಿತ್ಯ ಬಹುಮುಖ ವಿಸ್ತಾರ
ಪ್ರತಿ ಕಾವ್ಯದಲೂ ಬೆಳ್ಳಂಬೆಳಗ ಬಣ್ಣನೆ
ಅತ್ಯಾಕರ್ಷಕ ಬೆಳಕ ಭಾರೀ ವರ್ಣನೆ.

ಸಪ್ತ ಸ್ವರಗಳ ಮೀರಿದ ಭಾವಲಹರಿ
ಸಾಹಿತ್ಯ ಹರಿದಿದೆ ಆಗಿ ತಣ್ಣನೆಯ ಝರಿ
ಅಂಬಿಕೆಯ ತನಯನೆಂಬ ಹೆಮ್ಮೆಯಲಿ
ಸಾಹಿತ್ಯಕ್ಕೆ ಸಿರಿಯ ಮೆರುಗು ನೀಡುತಲಿ

ತುಂಬಿಹರು ಪದಗಳಿಗೆ ಚೈತನ್ಯ
ವರಕವಿಯ ಪಡೆದ ನಾವೇ ಧನ್ಯ
ನಾಕುತಂತಿಯಲಿಹುದು ಬದುಕಿನ ನಾಕ
ಬೆಂದು ನಿರ್ಮಿಸಿದರು ಭಾವಲೋಕ

ಸತಿಯನು ಸಖಿ ಎಂದ ಮಹನೀಯ
ಕವನಗಳ ಓದುತ್ತಿರೇ ಮನ ಆನಂದಮಯ
ಬಾಳ ತುಂತುಂಬಿ ಕುಡಿ ಎನ್ನುತಾ
ತುಂತುಂ ತುಂಬಿಗೆ ಕರೆ ನೀಡುತಾ

ಮರಳಿ ಅರಳೆಂದು ಮನಗಳ ಬೆನ್ನ ತಟ್ಟಿ
ಬೆಳಗು ಬೆಳಕ ಉಂಡೆಯ ಕಟ್ಟಿ ಕಟ್ಟಿ
ನಕ್ಕು ನಕ್ಷತ್ರವಾಗಿರೆಂದು ಹಾರೈಸಿ
ಸಾವನ್ನ ಮಾತಲ್ಲೇ ನಯವಾಗಿ ಎದುರಿಸಿ

ಎದೆಯ ಕಡಲಿಗೆ ಅಪ್ಪಳಿಸುವ ಅಲೆಗಳ
ಸಪ್ಪಳವಿಲ್ಲದೆ ಸರಿಸಿ ನಡೆಸಿದ್ದರು ಬಾಳ
ನೋವುಂಡು ನಗೆ ಚೆಲ್ಲಿದ ಧೀಮಂತ
ನಿಮ್ಮ ಬರಹ ಎಂದೂ ಅನಂತ.

- **ಉಷಾ ಈ.**, ಕನ್ನಡ ಉಪನ್ಯಾಸಕರು, ಎಜಿಬಿ ಪದವಿಪೂರ್ವ ಕಾಲೇಜು, ದಾವಣಗೆರೆ.

# ಸತತ ಎಂಟನೇ ಬಜೆಟ್ ಮೂಲಕ ನಿರ್ಮಲ ಸೀತಾರಾಮನ್ ದಾಖಲೆ

ನವದೆಹಲಿ, ಜ. 30 - ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ಫೆಬ್ರವರಿ 1ರಂದು ಸತತ ಎಂಟನೇ ಬಜೆಟ್ ಮಂಡಿಸುವ ಮೂಲಕ ದಾಖಲೆ ನಿರ್ಮಿಸಲಿದ್ದಾರೆ.

ದುರ್ಬಲವಾಗಿರುವ ಆರ್ಥಿಕತೆಗೆ ಉತ್ತೇಜನ ನೀಡುವ ಹಾಗೂ ಮಧ್ಯಮ ವರ್ಗದ ಮೇಲಿನ ಹೊರೆ ಇಳಿಸುವ ಜೊತೆಗೆ ಏರುತ್ತಿರುವ ಬೆಲೆಗಳಿಗೆ ಕಡಿವಾಣ ಹಾಕುವುದು ಅವರ ಎದುರಿನ ಪ್ರಮುಖ ಸವಾಲಾಗಿದೆ.

ಮಾಜಿ ಪ್ರಧಾನ ಮಂತ್ರಿ ಮೊರಾರ್ಜಿ ದೇಸಾಯಿ ಅವರು ಬೇರೆ ಬೇರೆ ಅವಧಿಗಳಲ್ಲಿ ಒಟ್ಟು 10 ಬಜೆಟ್ ಮಂಡಿಸಿದ್ದರು. ಸೀತಾರಾಮನ್ ಅವರು ಆ ದಾಖಲೆಯ ಸಮೀಪಕ್ಕೆ ಬರಲಿದ್ದಾರೆ.

ಮಾಜಿ ಹಣಕಾಸು ಸಚಿವರಾದ ಪಿ. ಚಿದಂಬರಂ ಹಾಗೂ ಪ್ರಣಬ್ ಮುಖರ್ಜಿ ಅವರು ಕ್ರಮವಾಗಿ ಬೇರೆ ಬೇರೆ ಪ್ರಧಾನಮಂತ್ರಿಗಳ ಅವಧಿಯಲ್ಲಿ 9 ಹಾಗೂ 8 ಬಜೆಟ್ ಗಳನ್ನು ಮಂಡಿಸಿದ್ದರು. ಆದರೆ ಸೀತಾರಾಮನ್ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅವಧಿಯಲ್ಲಿ ಸತತವಾಗಿ 8 ಬಜೆಟ್ ಮಂಡಿಸುವ ದಾಖಲೆ ಹೊಂದಿದ್ದಾರೆ.

2019 ರಲ್ಲಿ ಅವರು ದೇಶದ ಮೊದಲ ಪೂರ್ಣ ಕಾಲಿಕ ಹಣಕಾಸು ಸಚಿವೆಯಾಗಿದ್ದರು. ಮೋದಿ ಸರ್ಕಾರ ಎರಡನೇ ಅವಧಿಗೆ ಪುನರಾಯ್ಕೆಯಾದ ನಂತರ ಅವರು ಹಣಕಾಸು ಸಚಿವೆಯಾಗಿ ಮುಂದುವರೆದಿದ್ದರು. 2024ರಲ್ಲಿ ಮೂರನೇ ಅವಧಿಗೆ ಮೋದಿ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದ ನಂತರವೂ ಅವರು ಹಣಕಾಸು ಖಾತೆಯಲ್ಲೇ ಮುಂದುವರೆದಿದ್ದಾರೆ. ಫೆಬ್ರವರಿ 2024ರ ಹಂಗಾಮಿ ಬಜೆಟ್ ಸೇರಿದಂತೆ, ಅವರು ಸತತ ಏಳು ಬಜೆಟ್ ಮಂಡಿಸಿದ್ದಾರೆ.

ಮೊರಾರ್ಜಿ ದೇಸಾಯಿ ಅವರು ಅತಿ ಹೆಚ್ಚಿನ 10 ಬಜೆಟ್ ಮಂಡಿಸಿದ ದಾಖಲೆ ಹೊಂದಿದ್ದಾರೆ. ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವಧಿಗಳಲ್ಲಿ ಅವರು ಈ ಬಜೆಟ್‌ಗಳನ್ನು ಮಂಡಿಸಿದ್ದರು.

ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಅವರು 9 ಬಜೆಟ್‌ಗಳನ್ನು ಮಂಡಿಸಿದ ದಾಖಲೆ ಹೊಂದಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವಧಿಯಲ್ಲಿ ಅವರು ತಮ್ಮ ಮೊದಲ ಬಜೆಟ್ ಮಂಡಿಸಿದ್ದರು. ನಂತರ ಯುಪಿಎ ಸರ್ಕಾರದ ಅವಧಿಯಲ್ಲಿ 2004 ರಿಂದ 2008ರ ವರೆಗೆ ಅವರು ಸತತ ಐದು



ಬಜೆಟ್ ಮಂಡಿಸಿದ್ದರು. 2013ರಲ್ಲಿ ಮತ್ತೆ ಅವರು ಹಣಕಾಸು ಖಾತೆಗೆ ಮರಳಿ ಬಜೆಟ್ ಮಂಡಿಸಿದ್ದರು.

ಪ್ರಣಬ್ ಮುಖರ್ಜಿ ಅವರು 8 ಬಜೆಟ್ ಮಂಡಿಸಿದ ದಾಖಲೆ ಹೊಂದಿದ್ದಾರೆ. 1982 ರಲ್ಲಿ ಅವರು ಮೊದಲ ಬಜೆಟ್ ಮಂಡಿಸಿದ್ದರು. 2009 ರಿಂದ 2012ರ ನಡುವೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಅವರು ಬಜೆಟ್‌ಗಳನ್ನು ಮಂಡಿಸಿದ್ದರು.

ಸೀತಾರಾಮನ್ ಅವರು ಅತಿ ದೀರ್ಘ ಬಜೆಟ್ ಮಂಡಿಸಿದ ದಾಖಲೆಯನ್ನೂ ಹೊಂದಿದ್ದಾರೆ. ಫೆಬ್ರವರಿ 1, 2020ರಲ್ಲಿ ಅವರು ಎರಡು ಗಂಟೆ 40 ನಿಮಿಷಗಳ ಕಾಲ ಬಜೆಟ್ ಮಂಡಿಸಿದ್ದರು. ಇಷ್ಟಾದರೂ ಅವರು ಎರಡು ಪುಟಗಳನ್ನು ಓದದೇ ತಮ್ಮ ಬಜೆಟ್ ಭಾಷಣ ಮುಗಿಸಿದ್ದರು.

1977ರಲ್ಲಿ ಹೀರುಭಾಯಿ ಮುಲ್ಜಿಬಾಯಿ ಪಟೇಲ್ ಅವರು ಅತ್ಯಂತ ಸಂಕ್ಷಿಪ್ತವಾದ ಹಂಗಾಮಿ ಬಜೆಟ್ ಮಂಡಿಸಿದ್ದರು. ಅವರ ಬಜೆಟ್ ಕೇವಲ 800 ಪದಗಳನ್ನು ಹೊಂದಿತ್ತು.

ಸ್ವಾತಂತ್ರ್ಯಾನಂತರ ಬಜೆಟ್ ಮಂಡಿಸುವ ಸಮಯದಲ್ಲೂ ಬದಲಾವಣೆ ಆಗಿದೆ. ಸ್ವಾತಂತ್ರ ದೊರೆತ ಸಂದರ್ಭದಲ್ಲಿ ಫೆಬ್ರವರಿ ಕೊನೆಯ ದಿನದಂದು ಸಂಜೆ 5 ಗಂಟೆಗೆ ಬಜೆಟ್ ಮಂಡಿಸಲಾಗುತ್ತಿತ್ತು. ವಸಾಹತು ಕಾಲದಿಂದಲೂ ಇದೇ ಪದ್ಧತಿ ಮುಂದುವರೆದಿತ್ತು.

ಬ್ರಿಟನ್ ಹಾಗೂ ಭಾರತದಲ್ಲಿ ಏಕಕಾಲಕ್ಕೆ ಬಜೆಟ್ ಮಂಡನೆಯಾಗಬೇಕು ಎಂಬ ಉದ್ದೇಶದಿಂದ ಸಂಜೆ ಬಜೆಟ್ ಮಂಡಿಸಲಾಗುತ್ತಿತ್ತು. 1999ರಲ್ಲಿ ಹಣಕಾಸು ಸಚಿವರಾಗಿದ್ದ ಯಶವಂತ್ ಸಿನ್ಹಾ ಅವರು ಬೆಳಗ್ಗೆ 11 ಗಂಟೆಗೆ ಬಜೆಟ್ ಮಂಡಿಸುವ ಮೂಲಕ ಹಳೆಯ ಪದ್ಧತಿ ಬದಲಿಸಿದ್ದರು. ನಂತರದಿಂದ ಬೆಳಗ್ಗೆ 11 ಗಂಟೆಗೆ ಬಜೆಟ್ ಮಂಡಿಸಲಾಗುತ್ತಿದೆ.

2017ರಲ್ಲಿ ಫೆಬ್ರವರಿ ಮೊದಲ ದಿನ ಬಜೆಟ್ ಮಂಡಿಸುವ ಪದ್ಧತಿ ಆರಂಭಿಸಲಾಗಿತ್ತು. ಫೆಬ್ರವರಿ ಆರಂಭದಲ್ಲಿ ಬಜೆಟ್ ಮಂಡಿಸಿದರೆ ಮಾರ್ಚ್ ಅಂತ್ಯದ ವೇಳೆಗೆ ಅನುಮತಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಏಪ್ರಿಲ್ ಒಂದರಂದು ಹೊಸ ಆರ್ಥಿಕ ವರ್ಷ ಆರಂಭವಾಗುವ ಸಮಯದಲ್ಲಿ ಬಜೆಟ್ ಜಾರಿಗೆ ತರಬಹುದು ಎಂದು ಈ ಬದಲಾವಣೆ ಮಾಡಲಾಗಿತ್ತು.

ಇದಕ್ಕೂ ಮುಂಚೆ ಫೆಬ್ರವರಿ ಕೊನೆಯ ದಿನದಂದು ಬಜೆಟ್ ಮಂಡಿಸಲಾಗುತ್ತಿತ್ತು. ಇದರಿಂದಾಗಿ ಮೇ ಇಲ್ಲವೇ ಜೂನ್ ನಂತರವೇ ಬಜೆಟ್ ಜಾರಿಗೆ ತರುವುದು ಸಾಧ್ಯವಾಗುತ್ತಿತ್ತು.

# ಬೇಂದ್ರೆ... ನಾ ಕಂಡಂತೆ

ಅಂಬಿಕಾತನಯದತ್ತ ಅಂದರೆ ದ.ರಾ ಬೇಂದ್ರೆ ಅವರ ಬಗೆಗೆ ನನಗೆ ಗೊತ್ತಾಗಿದ್ದು ನಾನು ಬಹಳ ಸಣ್ಣವನಿದ್ದಾಗಲೇ. ಬಹುಶಃ ನನಗೆ ಏಳು ಎಂಟು ವರ್ಷಗಳಿರಬೇಕು. ಅವರ ಹೆಸರನ್ನು ನಾನಾಗಲೇ ಕೇಳಿದ್ದೆ. ನಮ್ಮ ಎರಡನೇ ಹಿರಿಯ ಅಣ್ಣ ರಂಗಣ್ಣ (ಡಾ. ಆರ್.ಕೆ. ಕುಲಕರ್ಣಿ)ನಿಗೆ ಬೇಂದ್ರೆ, ಕುಮಾರವ್ಯಾಸರೆಂದರೆ ಅಚ್ಚುಮೆಚ್ಚು. ಅದೊಂದು ಹುಚ್ಚು. ರಜೆಗೆ ಮನಗೂಳಿಗೆ ಬಂದಾಗೆಲ್ಲ ಅವರ ಬಗ್ಗೆ ಇವನು ಮಾತನಾಡೋದು ಸಾಮಾನ್ಯವಾಗಿತ್ತು. ಬೇಂದ್ರೆ ಅನ್ನುವವರು ಒಬ್ಬ ದೊಡ್ಡ ಕವಿ ಇದ್ದಾರೆ, ಧಾರವಾಡದಲ್ಲಿ ಇದ್ದಾರೆ ಎನ್ನುವ ಅರಿವು ನನಗೆ ಆಗಲೇ ಉಂಟಾಗಿತ್ತು .

ಕನ್ನಡ ಪ್ರಾಥಮಿಕ ಶಾಲೆಯ ಆರು ಅಥವಾ ಏಳನೇ ಕ್ಲಾಸಿನಲ್ಲಿ ನಾವು ಕಲಿಯುವಾಗ ಅವರ 'ಏಳು ಶೂರ ರಾಣಿ' ಮತ್ತು 'ನಾನು' ಎನ್ನುವ ಪದ್ಯಗಳು ಪಠ್ಯದಲ್ಲಿದ್ದವು. ನಮ್ಮ ಗುರುಗಳು ಚೆನ್ನಾಗಿಯೇ ಕಲಿಸಿದರೆನ್ನಿ.

ನಾನು ಎಂಬ ಕವನದಲ್ಲಿ ಐದು ಜನ ತಾಯಂದಿರ ಹೆಸರನ್ನು ಸೂಚಿಸುತ್ತಾರೆ ಬೇಂದ್ರೆ. ಜನ್ಮನೀಡಿದ ತಾಯಿ, ಕನ್ನಡ ತಾಯಿ , ಭರತ ಮಾತೆ, ಭೂಮಾತೆ ಮತ್ತು ವಿಶ್ವ ಮಾತೆ... ಹೀಗೆ ಐದು ಐದೆಯರ ಸಂಬಂಧ ತಿಳಿಸುತ್ತಾರೆ. ತಾಯಿ ಗರ್ಭದಲ್ಲಿ ಒಂದು ಅಣುವಾಗಿ ಬೆಳೆಯುತ್ತಾ ಕೊನೆಗೆ ವಿಶ್ವದ ನುಡಿಯಾಗುವ ನಡೆ ಅದ್ಭುತವಾಗಿ ಕಂಡುಬರುತ್ತದೆ.

ನಂತರ 1966-67 ರಲ್ಲಿ ನಮ್ಮ ಪಿಡಿಜೆ ಹೈಸ್ಕೂಲ್ ಗ್ಯಾದರಿಂಗ್‌ಗೆ ಮೂರು ಜನ ಖ್ಯಾತ ಸಾಹಿತಿಗಳು ಅತಿಥಿಯಾಗಿ ಬಂದರು. ಅವರು ದ.ರಾ.ಬೇಂದ್ರೆ, ವಿಕೃ ಗೋಕಾಕ್ ಮತ್ತು ರಂ. ಶ್ರೀ ಮುಗಳಿ.

ಅಂದಿನ ಕಾಲದಲ್ಲಿ ಬಿಡಿಜೆ ಹೈಸ್ಕೂಲ್‌ನ ವಾರ್ಷಿಕೋತ್ಸವ ಎಂದರೆ ಇಡೀ ಬಿಜಾಪುರಕ್ಕೆ ಹಬ್ಬ. ಮೂರು ದಿನಗಳ ಕಾಲ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮ. ಸಾಯಂಕಾಲವಾಯಿತು ಎಂದರೆ ಊರಿನ ಎಲ್ಲರ ದಾರಿಗಳೂ ಹೈಸ್ಕೂಲ್‌ನತ್ತ ಎನ್ನುವ ವಾತಾವರಣ. ಆದರ ವೈಭವವೇ ಬೇರೆ. ವಿಜಯಪುರದ ಸಾಹಿತ್ಯ, ಸಂಗೀತದ ಆಸಕ್ತರಿಗೆಲ್ಲ ರಸದೌತಣ. ಅತಿಥಿಗಳ ಭಾಷಣವಾದ ಮೇಲೆ ಸಾಂಸ್ಕೃತಿಕ ಕಾರ್ಯಕ್ರಮ ಇತ್ಯಾದಿ .

ಈ ತ್ರಿಮೂರ್ತಿಗಳಲ್ಲಿ ಒಬ್ಬರೇ ಬಂದಿದ್ದಾರೆ ಎಂದರೆ ಸಂತೋಷ ಪಡುವ ಜನರಿಗೆ ಮೂರು ಜನರು ಒಮ್ಮೆಲೇ ಬಂದಿದ್ದಾರೆ ಎಂದರೆ ಅದೊಂದು ಸಡಗರದ ಪ್ರಸಂಗ. ಸಡಗರಕ್ಕೆ ಉಕ್ಕೇರಿದ ಹಾಗೆ.

ನನಗೆ ಬೇಂದ್ರೆಯವರನ್ನು ಹತ್ತಿರದಿಂದ ಕಾಣಬೇಕು, ಅವರನ್ನು ಮುಟ್ಟಬೇಕು, ನಮಸ್ಕರಿಸಬೇಕು ಎನ್ನುವ ಹಂಬಲ. ಆದರೆ ಇದು ಯಾವುದಕ್ಕೂ ಅವಕಾಶವೇ ಇರಲಿಲ್ಲ.

ಮೂರು ಜನರು ವೇದಿಕೆಗೆ ಬಂದರು. ಕಿವಿ ಗಡಚಿಕ್ಕುವ ಚಪ್ಪಾಳೆ ಸದ್ದು. ಬೇಂದ್ರೆಯವರು ಮೈಕ್ ಮುಂದೆ ಬಂದು ನಿಂತರು. ಚಪ್ಪಾಳೆ ನಿಶ್ಯಬ್ಧ. ತುಂಬಿ ಬರುವ ನದಿ ಅಲ್ಲಲ್ಲಿ ಅಬ್ಬರಿಸಿ ಮತ್ತೆ ಪ್ರಶಾಂತವಾಗುವ ಹಾಗೆ ನಿರ್ಗಳವಾದ ಭಾಷಣ. ಬಿಳಿಯ ಧೋತರ, ಕರಿಯ ಕೋಟು, ಹಣೆಯಲ್ಲಿ ಕುಂಕುಮ ಧರಿಸಿದ ವಾಮನ ತ್ರಿವಿಕ್ರಮನಾದಂತೆ ಅನಿಸುತ್ತಿತ್ತು. ಮಾತನಾಡುತ್ತಾ ಕನ್ನಡ ತಾಯಿಯ ಒಂದು ಜೋಗುಳ ಪದ ಹೇಳಿದರು ಬೇಂದ್ರೆ.

**ಚಂದಪ್ಪ ಚಂದಪ್ಪ ಚಾರಿಕಾಯಿ**
**ಬಟ್ಟಲ ತುಂಬಾ ಚಾರಿಕಾಯಿ......**

ಎಂದು ತಾಯಿ ಮಗುವನ್ನು ಮಲಗಿಸುವಾಗ ಹಾಡುತ್ತಾಳೆ. 'ನನಗೆ ಬಾರಿ ಕಾಯಿ ಗೊತ್ತು, ಬಟ್ಟಲಾನು ಗೊತ್ತು. ಆದರೆ ಚಾರಿಕಾಯಿ ಅಂದ್ರೆ ಏನು ಗೊತ್ತಿಲ್ಲ .ಯಾರಾದ್ರೂ ಈ ಸಭೆಯಲ್ಲಿ ಅದರ ಅರ್ಥ ಹೇಳುತ್ತೀರಾ.'.... ಎಂದು ಸವಾಲು ಹಾಕಿ ನಿಂತರು. ಯಾರಿಂದಲೂ ಉತ್ತರ ಬರಲಿಲ್ಲ. ಆಗ ಮತ್ತೆ ಅವರೇ ಹೇಳಿದರು 'ಚಾರಿಕಾಯಿ ಅನ್ನುವುದು ಇಲ್ಲವೇ ಇಲ್ಲ. ನಮ್ಮಲ್ಲಿ ಚೌಳಿ ಕಾಯದ, ಬೆಂಡೆಕಾಯಿ ಅದ. ಆದ್ರೆ ಚಾರಿ ಕಾಯಿ ಇಲ್ಲ. ಅದು ಸಂಸ್ಕೃತದ 'ಚಾರುಕಾಯ' ಅಂದರೆ ಸುಂದರ ದೇಹದವನೇ ಎಂದು ಅರ್ಥ. ತಾಯಿ ತನ್ನ ಮಗುವನ್ನು ಹೊಗಳುತ್ತಾ ಹೊಗಳುತ್ತಾ ಚಾರುಕಾಯ ಹೋಗಿ ಚಾರಿಕಾಯಿ ಆಗಿದೆ ಎಂದು ತಿಳಿಸಿದರು. ಕನ್ನಡ ತಾಯಿಯ ಜಾಣತನವನ್ನು ವಿವರಿಸಿದರು.

ಮುಂದೆ ಎರಡು, ಮೂರು ದಿನ ಬಿಜಾಪುರದಲ್ಲಿ ಅಲ್ಲಲ್ಲಿ ಅವರ ಉಪನ್ಯಾಸಗಳನ್ನು ಏರ್ಪಡಿಸಿದ್ದರು. ಅವರ ಒಂದು ಉಪನ್ಯಾಸ ಸಿದ್ದೇಶ್ವರ ದೇವಾಲಯದ ಒಳಭಾಗದಲ್ಲಿರುವ ಶಿವಾನುಭವ ಮಂಟಪದಲ್ಲಿ ಏರ್ಪಡಿಸಲಾಗಿತ್ತು. ಬೇಂದ್ರೆ ಎಲ್ಲಿ ಹೋಗುತ್ತಾರೋ ಅವರ ಬೆನ್ನ ಹತ್ತಿ ನಾವು ಹೋಗುತ್ತಿದ್ದೆವು. ನಮಗೆ ಅವರೊಬ್ಬ ಬೊಮ್ಮನಹಳ್ಳಿಯ ಕಿನ್ನರ ಜೋಗಿಯಾಗಿದ್ದರು.

ಸಭೆ ಪ್ರಾರಂಭವಾಯಿತು. ಬೇಂದ್ರೆಯವರು ರಸವತ್ತಾಗಿ ಮಾತನಾಡುತ್ತಿದ್ದರು. ನಾವೆಲ್ಲ ಕಿವಿಗೊಟ್ಟು ಆಲಿಸುತ್ತಿದ್ದೆವು. ವೇದಿಕೆ ಹಿಂದೆ ಕುಳಿತ ಶ್ರೀ ಗೋಕಾಕರ ಹತ್ತಿರ ಒಬ್ಬರು ಸ್ಥಳೀಯ ಹೆಡ್ ಮಾಸ್ಟರ್ ಬಂದು ಮಾತನಾಡುತ್ತಿದ್ದರು. ಅದು ಬೇಂದ್ರೆ ಅವರ ಮಾತಿಗೆ ತೊಂದರೆ ನೀಡುತ್ತಿತ್ತು. ಸಟ್ಟನೆ ಆ ಕಡೆಗೆ ಹೊರಳಿ 'ಗೋಕಾಕರ ನಾನಾರೆ ಮಾತನಾಡುತ್ತೇನೆ ಇಲ್ಲ ಅವರಿಗೆ ಮಾತನಾಡಲು ಹೇಳಿ' ಎಂದರು. ಗಾಬರಿಯಿಂದ ಆ ಸ್ಥಳೀಯ ಹೆಡ್ ಮಾಸ್ಟರ್ ಓಡಿ ಹೋದವರು ತಿರುಗಿ ಸಭೆಗೆ ಬರಲೇ ಇಲ್ಲ . ಹೀಗೆ ಬಾಲ್ಯದಲ್ಲಿ ಬೇಂದ್ರೆ ಅವರ ದರ್ಶನ ವಾಯಿತು ನನಗೆ. ದೊಡ್ಡವನಾದಂತೆ ಅವರ ಅಭಿಮಾನಿ ಆದೆ, ಆರಾಧಕನಾದೆ,ಅವರ ಪ್ರಭಾವಕ್ಕೆ ಒಳಗಾದೆ

ಕಾಲೇಜಿಗೆ ಕಲಿಯಲು ಬಂದಾಗ ಅಲ್ಲಿ ಕಾಳಿದಾಸನ ಮೇಘದೂತ ನಮಗೆ ಪಠ್ಯವಾಗಿತ್ತು. ಅದನ್ನು ಅರ್ಥ ಮಾಡಿಕೊಳ್ಳಲು ಬೇಂದ್ರೆಯವರ ಅನುವಾದಿತ ಮೇಘದೂತವನ್ನು ಓದಿದೆ. ಅದು ಅನುವಾದ ಅನ್ನುವಂತೆ ಇರಲಿಲ್ಲ. ಮೂಲ ಕನ್ನಡದ ಕೃತಿ ಎನ್ನುವಂತಿತ್ತು.

ಮುಂದೆ ದೊಡ್ಡವನಾದಂತೆ ಅವರ ಹಲವಾರು ಕವನ ಸಂಕಲನಗಳನ್ನು ಓದಿದೆ. ಬರು ಬರುತ್ತಾ ಬೇಂದ್ರೆ. ನನ್ನ ಭಾವಕೋಶದ ಭಾಗವೇ ಆದರು ಬೇಂದ್ರೆ, ಶಬ್ಧ ಗಾರುಡಿಗ ಬೇಂದ್ರೆ ಭುವನದ ಭಾಗ್ಯ.



31.02.2025 ಶಬ್ದ ಗಾರುಡಿಗ ಜ್ಞಾನಪೀಠ ಪ್ರಶಸ್ತಿ ವಿಜೇತ ಬೇಂದ್ರೆ ಅವರ ಜನ್ಮ ದಿನ



**- ಜಿ.ಕೆ. ಕುಲಕರ್ಣಿ,**
ದಾವಣಗೆರೆ.
94482 50456

# ಮಕ್ಕಳ ಕಲಿಕೆ ಬಗ್ಗೆ ಪೋಷಕರು ನಿಗಾ ವಹಿಸಿದರೆ ಮಾತ್ರ ಉತ್ತಮ ಫಲಿತಾಂಶ ಸಾಧ್ಯ

## ಎಸ್ಸೆಸ್ಸೆಲ್ಸಿ ಮಕ್ಕಳ ಪೋಷಕರ ಸಭೆಯಲ್ಲಿ ಶಾರದೇಶಾನಂದ ಸ್ವಾಮೀಜಿ ಅಭಿಮತ



ಮಲೇಬೆನ್ನೂರು, ಜ. 30- ಎಸ್ಸೆಸ್ಸೆಲ್ಸಿ ಪರೀಕ್ಷೆಗೆ 50 ದಿನ ಬಾಕಿ ಇದ್ದು, ತಮ್ಮ ಮಕ್ಕಳ ಕಲಿಕೆ ಬಗ್ಗೆ ಪೋಷಕರಾದ ತಾವು ನಿತ್ಯ ನಿಗಾ ವಹಿಸಿ, ಅವರನ್ನು ಪ್ರೋತ್ಸಾಹಿಸಿ ಎಂದು ಹರಿಹರದ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಶಾರದೇಶಾನಂದ ಮಹಾರಾಜ್ ಹೇಳಿದರು.

ಅವರು ಗುರುವಾರ ಪಟ್ಟಣದ ಸುನ್ನಿ ಶಾದಿ ಮಹಲ್‌ನಲ್ಲಿ ಶಿಕ್ಷಣ ಇಲಾಖೆ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಮಕ್ಕಳ ಪೋಷಕರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಸಾಧ್ಯವಾದದ್ದು ಯಾವುದೂ ಇಲ್ಲ ಎಂಬುದನ್ನು ಪೋಷಕರು ಮಕ್ಕಳಿಗೆ ಅರ್ಥೈಸಬೇಕು. ಎಸ್ಸೆಸ್ಸೆಲ್ಸಿ ಪರೀಕ್ಷೆ ಬಗ್ಗೆ ಮಕ್ಕಳಲ್ಲಿರುವ ಭಯವನ್ನು ಹೋಗಲಾಡಿಸಿ, ಹಬ್ಬ ಆಚರಣೆಯ ಸಂಭ್ರಮದ ವಾತಾವರಣವನ್ನು ಮಕ್ಕಳಿಗಾಗಿ ಪೋಷಕರು ಮತ್ತು ಶಿಕ್ಷಕರು ಸೇರಿ ಸೃಷ್ಟಿಸಬೇಕೆಂದು ಸ್ವಾಮೀಜಿ ತಿಳಿಸಿದರು.

ಶಿವಮೊಗ್ಗ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ ಅಧ್ಯಕ್ಷರ ಹಾಗೂ ನ್ಯಾಯಾಧೀಶರೂ ಆದ ತಾಜ್ ಉದ್ದೀನ್ ಮಾತನಾಡಿ, ಮಕ್ಕಳ ಹಕ್ಕುಗಳ ಕುರಿತು ಪೋಷಕರಿಗೆ ಹಾಗೂ ಶಿಕ್ಷಕರಿಗೆ ತಿಳಿಸಿದರು.

ಪ್ರಭಾರ ಬಿಇಓ ಕೃಷ್ಣಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳನ್ನು ಶಾಲೆಗೆ ಸೇರಿಸಿದ ಮಾತ್ರಕ್ಕೆ ಪೋಷಕರ ಪಾತ್ರ ಮುಗಿಯುವುದಿಲ್ಲ. ಮಕ್ಕಳ ಬಗ್ಗೆ ಪ್ರತಿದಿನವೂ ಕಾಳಜಿ ವಹಿಸಬೇಕು. ಅವರು ಸರಿಯಾಗಿ ಶಾಲೆಗೆ ಹೋಗುತ್ತಾರೋ ಇಲ್ಲವೋ ಮತ್ತು ಕಲಿಕೆ ಬಗ್ಗೆ ಶಾಲೆಗೆ ಹೋಗಿ ಶಿಕ್ಷಕರಿಂದ ಮಾಹಿತಿ ಪಡೆದುಕೊಳ್ಳಬೇಕೆಂದು ಪೋಷಕರಿಗೆ ಹೇಳಿದರು.

ಸ.ಪ.ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಎಸ್‌ಡಿಎಂಸಿ ಅಧ್ಯಕ್ಷ ಮುಸ್ತಾಕ್ ಅಹ್ಮದ್ ಸರ್ಕಾರಿ ಉರ್ದು ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸೈಯದ್ ಸಾಬೀರ್ ಅಲಿ, ಪುರಸಭೆ ಸದಸ್ಯ ಎ. ಆರೀಫ್ ಅಲಿ, ಪ್ರೌಢಶಾಲೆಗಳ ಮುಖ್ಯ ಶಿಕ್ಷಕರಾದ ಜಗದೀಶ್ ಉಜ್ಜಮ್ಮನವರ್, ಎಂ. ಮಲ್ಲಿಕಾರ್ಜುನ್, ಸಿ. ಜಯಣ್ಣ, ಮಹ್ಮದ್ ಇಲಿಯಾಸ್, ಮಂಜಪ್ಪ, ನಂದಿತಾವರೆ ಉಮೇಶ್, ಶಿಕ್ಷಕರಾದ ರೇವಣಸಿದ್ದಪ್ಪ ಅಂಗಡಿ, ಸುರೇಶ್ ಮೂಲಿಮನಿ, ರಾಮಪ್ಪ ಸೋಮಣ್ಣೇರ, ಆರೀಫ್ ಉಲ್ಲಾ, ಸೈಯದ್ ಕೌಸರ್, ಮಮತಾ, ಲತಾ ಮತ್ತಿತರರು ಭಾಗವಹಿಸಿದ್ದರು.

ಮಲೇಬೆನ್ನೂರು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳ 11 ಪ್ರೌಢಶಾಲೆಗಳ ಎಸ್ಸೆಸ್ಸೆಲ್ಸಿ ಮಕ್ಕಳು ಪೋಷಕರು ಸಭೆಯಲ್ಲಿದ್ದರು.

# ಶ್ರೀ ಮಾತಾ ವಿದ್ಯಾಸಂಸ್ಥೆಯಲ್ಲಿ ಪ್ರತಿಭಾ ಪುರಸ್ಕಾರ, ಪೋಷಕರ ವಾರ್ಷಿಕ ಸಾಂಸ್ಕೃತಿಕ ಕಲರವ




ದಾವಣಗೆರೆ, ಜ. 30- ನಗರದ ಶ್ರೀ ಮಾತಾ ವಿದ್ಯಾ ಸಂಸ್ಥೆ ನಂದಗೋಕುಲ ಆಂಗ್ಲ ಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಪೋಷಕರ ವಾರ್ಷಿಕ ಸಾಂಸ್ಕೃತಿಕ ಕಲರವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂಸ್ಥೆಯ ಅಧ್ಯಕ್ಷ ವೈ.ಬಿ. ಸತೀಶ್ ಉಪಸ್ಥಿತಿಯಲ್ಲಿ, ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ ಡೈಮಂಡ್ ಜ್ಯುಬ್ಲಿ ವಿದ್ಯಾಪೀಠದ ಉಪಾಧ್ಯಕ್ಷ ಆರ್. ಎಲ್. ಪ್ರಭಾಕರ್ ಕಾರ್ಯಕ್ರಮ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಆರ್. ಶೇರ್ ಅಲಿ ಹಾಗೂ ಎಜು ಏಷ್ಯಾ ಶಾಲೆಯ ಕಾರ್ಯದರ್ಶಿ ಎಂ.ಎನ್. ಸಂತೋಷ್ ಕುಮಾರ್, ಬಿಜೆಎಂ ಸ್ಕೂಲ್ ನ ಕಾರ್ಯದರ್ಶಿ ಕೆ.ಎಸ್. ಮಂಜುನಾಥ ಅಗಡಿ, ಮತ್ತೋರ್ವ ಅತಿಥಿಗಳಾದ ಸಹನಾ ರವಿ ಇಂಟರ್ನ್ಯಾಷನಲ್ ಸ್ಕೂಲ್ ನ ಕಾರ್ಯದರ್ಶಿ ಶ್ರೀಮತಿ ಸಹನಾ ರವಿ ಮತ್ತು ಶಿಕ್ಷಣ ಸಂಯೋಜಕರಾದ ಶ್ರೀಮತಿ ಅಖಿಲ ಬಾನು ಹಾಗೂ ಶಾಲೆಯ ಕಾರ್ಯದರ್ಶಿ ಶ್ರೀಮತಿ ಅನಸೂಯ, ಸಂಸ್ಥೆಯ ನಿರ್ದೇಶಕರುಗಳಾದ ಚಂದ್ರಶೇಖರ್ ಮತ್ತು ಶ್ರೀ ಲಕ್ಷ್ಮಿ ಹಾಗೂ ಮುಖ್ಯ ಶಿಕ್ಷಕರುಗಳಾದ ಶ್ರೀಮತಿ ರೆಹನಾ ಬಾನು ನಾಸಿಕ ಹಾಗೂ ಮಲ್ಲಿಕಾರ್ಜುನ್ ಡಿ.ಕೆ. ಉಪಸ್ಥಿತರಿದ್ದರು.

# ಉಗ್ರವಾದ ಆರೋಪ : ದಕ್ಷಿಣ ಆಫ್ರಿಕಾ ಮಾಜಿ ಅಧ್ಯಕ್ಷ ನಝುಮಾ ಪುತ್ರಿ ಬಂಧನ

ಜೊಹಾನ್ಸ್‌ಬರ್ಗ್, ಜ. 30 - ಉಗ್ರವಾದದ ಆರೋಪದ ಮೇಲೆ ದಕ್ಷಿಣ ಆಫ್ರಿಕಾ ಮಾಜಿ ಅಧ್ಯಕ್ಷ ಜಕೋಬ್ ಝುಮಾ ಅವರ ಪುತ್ರಿಯನ್ನು ಬಂಧಿಸಲಾಗಿದೆ. ದಕ್ಷಿಣ ಆಫ್ರಿಕಾದ ಶಾಸನ ಸಭೆಯ ಸದಸ್ಯೆಯೂ ಆಗಿರುವ ದುಡುಜೈಲ್ ಝುಮಾ - ಸಂಬುಡ್ಲ ಅವರ ವಿರುದ್ಧ ಜುಲೈ 2021 ರಲ್ಲಿ ಹಿಂಸೆಗೆ ಪ್ರಚೋದನೆ ನೀಡಿದ ಆರೋಪವಿದೆ.

ಈ ಹಿಂಸಾಚಾರಗಳಲ್ಲಿ 350ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದರು. ಅವರ ವಿರುದ್ಧ ಉಗ್ರವಾದದ ಆರೋಪದ ಮೇಲೆ ಪ್ರಕರಣ ದಾಖಲಾದ ನಂತರ ಝುಮಾ- ಸಂಬುಡ್ಲ ಅವರು ತಾವೇ ಪೊಲೀಸರ ಎದುರು ಶರಣಾಗಿದ್ದಾರೆ.

ಜಕೋಬ್ ಝುಮಾ ಅವರನ್ನು ಬಂಧಿಸಿದ ನಂತರ ದೇಶದಲ್ಲಿ ಅಶಾಂತಿ ಉಂಟಾಗಿತ್ತು. ಈ ಸಂದರ್ಭದಲ್ಲಿ ಗರಿಷ್ಠ ಹಾನಿ ಮಾಡುವಂತೆ ಝುಮಾ - ಸಂಬುಡ್ಲಾ ಅವರು ತಮ್ಮ ಬೆಂಬಲಿಗರಿಗೆ ಟ್ವಿಟರ್ ಮೂಲಕ ಕರೆ ನೀಡಿದ್ದರು.

ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಅಧ್ಯಕ್ಷ ಝುಮಾ ಅವರನ್ನು ಬಂಧಿಸಿ ಜೈಲಿಗೆ ಕರೆದೊಯ್ಯಲಾಗಿತ್ತು. ನಂತರ ಕುಪಿತಗೊಂಡ ಜನರು ವ್ಯಾಪಕ ಹಿಂಸಾಚಾರ ನಡೆಸಿದ್ದರು. ನಂತರ 5 ಸಾವಿರಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿತ್ತು. ಸುಮಾರು ಒಂದು ವಾರ ಕಾಲ ಹಿಂಸಾಚಾರ ನಡೆದಿತ್ತು.

# ಅಥಣಿ ಕಾಲೇಜಿನಲ್ಲಿ ಇಂದು

ದಾವಣಗೆರೆ ಎಸ್.ಎಸ್.ಬಡಾವಣೆಯಲ್ಲಿರುವ ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ 2024-25ನೇ ಸಾಲಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವು ಇಂದು ಬೆಳಿಗ್ಗೆ 10.30ಕ್ಕೆ ಕಾಲೇಜಿನ ಸಭಾಂಗಣದಲ್ಲಿ ನೆರವೇರಲಿದೆ.

ಅಧ್ಯಕ್ಷತೆ : ಅಥಣಿ ವೀರಣ್ಣ, ಉದ್ಘಾಟನೆ : ಎಸ್.ಜಿ. ಕರಿಸಿದ್ದಪ್ಪ. ಮುಖ್ಯ ಅತಿಥಿಗಳು : ಶಿವಾನಂದ್ ಸುತಗಟ್ಟಿ, ಬಿ.ಸಿ. ಉಮಾಪತಿ, ಎನ್.ಎ. ಮುರುಗೇಶ್, ಅಥಣಿ ಪ್ರಶಾಂತ್.

# ಅಯೋಧ್ಯೆಯ ರಾಮ ಪ್ರತಿಷ್ಠಾಪನೆ ವರ್ಷದ ಹರ್ಷ : ಪ್ರಸಾದ ವಿತರಣೆ



ದಾವಣಗೆರೆ, ಜ.30- ನಗರದ ಆರ್.ಟಿ.ಓ ಆಫೀಸ್ ಹತ್ತಿರದ ವಿಜಯನಗರ ಬಡಾವಣೆ ರಿಂಗ್ ರಸ್ತೆಯಲ್ಲಿ ಗೆಳೆಯರ ಬಳಗದ ವತಿಯಿಂದ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ವರ್ಷದ ಪ್ರಯುಕ್ತ ಶ್ರೀರಾಮಚಂದ್ರ ಪ್ರಭುಗೆ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಿ, ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದ ನೇತೃತ್ವವನ್ನು ಮುಖಂಡರಾದ ಪ್ರಭಣ್ಣ, ಮಲ್ಲೇಶಪ್ಪ, ರಾಜಾಚಾರಿ ಹೆಚ್.ಎಂ., ಶಿವಾಚಾರಿ ಎಂ., ರಂಗಸ್ವಾಮಿ, ಅಶೋಕ್ ಹೆಚ್.ಕೆ., ಮಲ್ಲೇಶ್ ಜಿ.ಎನ್., ಪರಮೇಶ್ವರಪ್ಪ, ನಬೀಸಾಬ್, ಶಫಿ ಸಾಬ್, ರಫೀಕ್, ಬುಡೇನ್ ಸಾಬ್, ಷಣ್ಮುಖ, ಚಂದ್ರಣ್ಣ, ಸತೀಶ್, ಪ್ರವೀಣ, ಮಂಜುನಾಥ್, ಅಜ್ಜಪ್ಪ, ಬಸವರಾಜ್ ಕೆ.ಆರ್. ಮತ್ತಿತರರು ಭಾಗವಹಿಸಿದ್ದರು.

# ಕುಂಭಮೇಳದಲ್ಲಿ ಭಕ್ತರ ಸುರಕ್ಷತೆಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್

ನವದೆಹಲಿ, ಜ.30 - ಮಹಾ ಕುಂಭಮೇಳದಲ್ಲಿ ಭಕ್ತರ ಸುರಕ್ಷತೆಗಾಗಿ ಮಾರ್ಗಸೂಚಿ ಹಾಗೂ ನಿಯಂತ್ರಣಗಳನ್ನು ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ ನಿನ್ನೆ ಪ್ರಯಾಗ್‌ರಾಜ್‌ನಲ್ಲಿರುವ ಸಂಗಮದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 30 ಜನ ಸಾವನಪ್ಪಿದ್ದರು.

ವಕೀಲ ವಿಶಾಲ್ ತಿವಾರಿ ಎಂಬುವವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದು, ಕಾಲ್ತುಳಿತ ತಡೆಯಲು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶನ ನೀಡಬೇಕು ಎಂದು ತಿವಾರಿ ಕೋರಿದ್ದಾರೆ.

# ಇತ್ತೀಚೆಗೆ ಪತ್ತೆ ಮಾಡಲಾದ ಕ್ಷುದ್ರಗ್ರಹ 2032 ರಲ್ಲಿ ಭೂಮಿಗೆ ಬಡಿಯುವ ಅತಿ ಸಣ್ಣ ಸಾಧ್ಯತೆ

ವಾಷಿಂಗ್ಟನ್ ಜ. 30 - ಇತ್ತೀಚೆಗೆ ಪತ್ತೆ ಮಾಡಲಾದ ಸಣ್ಣ ಕ್ಷುದ್ರಗ್ರಹವೊಂದು 2032 ರಲ್ಲಿ ಭೂಮಿಗೆ ಬಡಿಯುವ ಸಣ್ಣ ಸಾಧ್ಯತೆ ಇದೆ ಎಂದು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾದ ವಿಜ್ಞಾನಿಗಳು ಹೇಳಿದ್ದಾರೆ.

ಈ ಕ್ಷುದ್ರಗ್ರಹ ಭೂಮಿಗೆ ಬಡಿಯುವ ಸಾಧ್ಯತೆ ಶೇ. 1ಕ್ಕಿಂತ ಸ್ವಲ್ಪ ಹೆಚ್ಚಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ನಾವು ಈ ಬಗ್ಗೆ ಯಾವುದೇ ಕಳವಳ ಹೊಂದಿಲ್ಲ. ಏಕೆಂದರೆ ಕ್ಷುದ್ರಗ್ರಹ ಭೂಮಿಗೆ ಬಡಿಯದೆ ಹಾದು ಹೋಗುವ ಶೇಕಡ 99 ರಷ್ಟು ಸಾಧ್ಯತೆ ಇದೆ. ಆದರೆ ಈ ಬಗ್ಗೆ ನಾವು ನಿರಂತರ ನಿಗಾ ವಹಿಸಿದ್ದೇವೆ ಎಂದು ನಾಸಾದ ಸೆಂಟರ್ ಫಾರ್ ನಿಯರ್ ಅರ್ಥ್ ಸ್ಟಡೀಸ್ ನಿರ್ದೇಶಕ ಪೌಲ್ ಚೌಡಾಸ್ ಹೇಳಿದ್ದಾರೆ.

ಕಳೆದ ತಿಂಗಳು ಚಿಲಿ ದೇಶದಲ್ಲಿರುವ ದೂರದರ್ಶಕದ ಮೂಲಕ ಈ ಕ್ಷುದ್ರಗ್ರಹವನ್ನು ಮೊದಲು ಗುರುತಿಸಲಾಗಿತ್ತು. ಇದು ಸುಮಾರು 130 ರಿಂದ 330 ಅಡಿಗಳಷ್ಟು ಗಾತ್ರ ಹೊಂದಿದೆ ಎಂದು ಗುರುತಿಸಲಾಗಿದೆ.

ವಿಜ್ಞಾನಿಗಳು ಈ ಬಾಹ್ಯಾಕಾಶ ಶಿಲೆಯ ಮೇಲೆ ಕಣ್ಣಿರಿಸಿದ್ದಾರೆ. ಇದು ಪ್ರಸಕ್ತ ಭೂಮಿಗೆ ದೂರವಾಗಿ ಹಾದು ಹೋಗುತ್ತಿದೆ. ಈ ಕ್ಷುದ್ರಗ್ರಹ ಸೂರ್ಯನಿಗೆ ಹತ್ತಿರವಾಗುತ್ತಾ ಹೋದಂತೆ ಅದರ ಮಾರ್ಗ ಸ್ಪಷ್ಟವಾಗಲಿದೆ. ಈ ಕ್ಷುದ್ರ ಗ್ರಹದಿಂದ ಭೂಮಿಗೆ ಆಗುವ ಅಪಾಯ ಶೂನ್ಯಕ್ಕೆ ಇಳಿಯಬಹುದು ಎಂದು ಚೌಡಾಸ್ ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಈ ಕ್ಷುದ್ರಗ್ರಹ ನಮ್ಮಿಂದ ದೂರವಾಗಲಿದೆ ಎಂದು ನಾಸಾ ಹಾಗೂ ಯುರೋಪ್ ಬಾಹ್ಯಾಕಾಶ ಸಂಸ್ಥೆಗಳು ತಿಳಿಸಿವೆ.

ಅಲ್ಲಿಯವರೆಗೂ ವಿಶ್ವದ ಅತ್ಯಂತ ಶಕ್ತಿಶಾಲಿ ದೂರದರ್ಶಕಗಳು ಈ ಕ್ಷುದ್ರಗ್ರಹದ ಮೇಲೆ ಕಣ್ಣಿರಿಸಲಿವೆ.

ಒಮ್ಮೆ ಈ ಕ್ಷುದ್ರಗ್ರಹ ಭೂಮಿಯಿಂದ ದಾಟಿಹೋದ ನಂತರ 2038 ರಲ್ಲಿ ಮತ್ತೆ ಕಂಡು ಬರಲಿದೆ ಎಂದು ಅಂದಾಜಿಸಲಾಗಿದೆ.

ಈ ಕ್ಷುದ್ರ ಗ್ರಹ ಭೂಮಿಗೆ ಅತ್ಯಂತ ಸಮೀಪ ಎಂದರೆ 8 ಲಕ್ಷ ಕಿಲೋಮೀಟರಗೆ ಬರಬಹುದು ಎಂದು ಹೇಳಲಾಗುತ್ತಿದೆ ಇದು ಚಂದ್ರನಿಗಿಂತ ಎರಡು ಪಟ್ಟು ದೂರವಾಗಿದೆ

ಭೂಮಿಗೆ ಹತ್ತಿರವಾಗಿ ಹಾದು ಹೋಗುವ ಕ್ಷುದ್ರ ಗ್ರಹಗಳ ಮೇಲೆ 2016 ರಿಂದಲೂ ನಿಗಾ ವಹಿಸಲಾಗುತ್ತಿದೆ ಎಂದು ಚೌಡಾಸ್ ಹೇಳಿದ್ದಾರೆ.

ಈ ಕ್ಷುದ್ರಗ್ರಹವು ಭೂಮಿಗೆ ಅಪ್ಪಳಿಸುವ ಸಾಧ್ಯತೆ ಡಿಸೆಂಬರ್ 2032 ರಲ್ಲಿ ಬರಲಿದೆ. ಈ ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸಲಿದೆಯೇ ಎಂಬುದನ್ನು ಈಗಲೇ ಹೇಳುವುದು ಅವಸರವಾಗುತ್ತದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಇಲ್ಲಿಯವರೆಗೂ ಕಂಡುಬಂದಿರುವ ಬೃಹತ್ ಕ್ಷುದ್ರಗ್ರಹಗಳು ಭೂಮಿಗೆ ಅಪ್ಪಳಿಸುವ ಸಾಧ್ಯತೆ ಶೇ. 1ಕ್ಕಿಂತ ಕಡಿಮೆ ಇದೆ ಎಂಬುದು ಸಮಾಧಾನಕರ ವಿಷಯ ಎಂದು ನಾಸಾ ವಿಜ್ಞಾನಿಗಳು ಹೇಳಿದ್ದಾರೆ.

# ಹಲಗೇರಿಯಲ್ಲಿ ಇಂದು ವಿದ್ಯುತ್ ಸ್ಥಗಿತ

ರಾಣೇಬೆನ್ನೂರು ತಾಲ್ಲೂಕಿನ ಹಲಗೇರಿಯಲ್ಲಿ ರಸ್ತೆ ಅಗಲೀಕರಣ ಕಾರ್ಯದ ನಿಮಿತ್ತ ಇಂದು ಮಧ್ಯಾಹ್ನ 1ರಿಂದ ಸಂಜೆ 5ರ ವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ
30X40 ಸೌತ್ 34 ಲಕ್ಷ
40x60 ಸೌತ್ 70 ಲಕ್ಷ
40x60 ಸೌತ್ 63 ಲಕ್ಷ
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ಕೇವಲ 1/2 % ಅರ್ಧ ಪರ್ಸೆಂಟ್ ಕಮೀಷನ್ ನನ್ನದು)

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ
ಸುತ್ತ-ಮುತ್ತ 30x50 ಪಶ್ಚಿಮ
ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ,
30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**URGENT REQUIRED**
For Tele Callers (Female Only)
Salary -8000/- To 10000/-
Huge Incentive
Qualification : Any Degree
8884164651
Interview Time : 11am

**ಓಲ್ಡ್ ಏಜ್ ಕೇರ್ ಸೆಂಟರ್**
ಶಿಫ್ಟ್ ಲೆಕ್ಕದಲ್ಲಿ ಕೆಲಸ ಮಾಡಲು
ಪುರುಷ / ಮಹಿಳಾ ಕೆಲಸಗಾರರು
ಬೇಕಾಗಿದ್ದಾರೆ.
89711 92936

**SHOP BUILDING AVAILABLE FOR RENT IN HARIHAR**
Commercial Shop building facing towards North, Measuring 18X80, Ground Floor, 1st Floor & Second Floor, 1440X3=4340 sqfts., having lift facility in heart of the Harihar city, in main commercial street in Temple Road, Opp. to Prabhakar Textiles is available for rent. Please Contact :
98442 94446, 98443 24441

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ESI-PF ಸೌಲಭ್ಯವಿರುತ್ತದೆ.
ವೇತನ 9000/- ರಿಂದ 12,000
86603 98210, 96062 50026

**WANTED**
MARKETING EXECUTIVES
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್
Contact :
S S INDUSTRY
Industrial Area, Lokikere Road, Davangere.
Ph : 96865 51303, 96865 51301

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99868 02097

**ತಕ್ಷಣ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು Day & Night Shift ನಲ್ಲಿ ಅನುಭವವುಳ್ಳವರು ಮತ್ತು ಹೊಸದಾಗಿ ಸೇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 91648 98621

**RENT & LEASE**
Anand Book Depot
Mandipet 20x20 1st floor godown for rent 2nd floor 20x20 old house for rent
Ph : +91 98450 29032

**RENT & LEASE**
2nd floor 1 BHK New House for Lease Or Rent north face with solar and bore water 10x10 -2 Complex for rent Ashok Nagar main road, 18th Cross
81234 55538

**ಮನೆ ಬೇಕಾಗಿದೆ ಅಥವಾ ಸೈಟ್ ಬೇಕಾಗಿದೆ**
Size 20×30 ಅಥವಾ 20×40
ಸ್ಥಳ : ಶಕ್ತಿನಗರ, ಜಯ ನಗರ, ಡಿಸಿಎಂ ಟೌನ್‌ಶಿಪ್, ರಾಜೇಂದ್ರ ಬಡಾವಣೆ
ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ
87229 45295, 97314 54916

**WANTED**
Male candidates
any degree with computer knowledge is must.
Accomondation & food will be provided
Monthly Salary : 8000/-
Whats app : 99887 72291
P.B. Road, Davanagere

**ಡ್ರೈವರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಬಾಡಿಗೆಗೆ ದೊರೆಯುತ್ತದೆ
ಮಾರುತಿ ಸ್ಲೀಪರ್ ಕ್ಯಾರಿ ಮತ್ತು ಅಶೋಕ್ ಲೇಲ್ಯಾಂಡ್ ಕಂಟೈನರ್ ಗಾಡಿಗಳೂ ದಿನದ, ವಾರ, ತಿಂಗಳ ಲೆಕ್ಕದಲ್ಲಿ ಬಾಡಿಗೆಗೆ ದೊರೆಯುತ್ತವೆ.
87927 45071

**ಸೈಟುಗಳು ಮಾರಾಟಕ್ಕಿವೆ**
ಪುಟಗನಾಳ ಗ್ರಾಮದಲ್ಲಿ ಪಂಚಾಯಿತಿ ಡೋರ್ ನಂ. ಫೈನಲ್ ಅಪ್ರೂವಲ್ ಮತ್ತು ದೂಡಾ ಅಪ್ರೂವಲ್, ಹೊಸ ಔಟರ್ ರಿಂಗ್ ರೋಡ್ ಇಂದ ಕೇವಲ 1.5 ಕಿ.ಮೀ. ದೂರದಲ್ಲಿರುವ ಸೈಟ್‌ಗಳು ಮಾರಾಟಕ್ಕಿವೆ. 1 ಅಡಿಗೆ 1100 ರೂ.ಗಳು ಮಾತ್ರ.
86183 43463, 86187 28546

**ಮನೆ ಲೀಸ್‌ಗಿದೆ**
2 BHK 2ನೇ ಮಹಡಿ ಮನೆ, ಲೀಸ್ ಮೊತ್ತ 5 ಲಕ್ಷ, ದೇವರಾಜ್ ಅರಸ್ ಬಡಾವಣೆ, ಎ ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ದಾವಣಗೆರೆ. ಬೋರ್/ಕಾರ್ಪೊರೇಷನ್ ನೀರಿನ ವ್ಯವಸ್ಥೆ ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ.
7349397287, 9741746205

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ) ದಾವಣಗೆರೆ.
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
www.hindusmatrimony.com
15-01-2025 ರಿಂದ 31-01-2025
ಎಲ್ಲಾ ಹಿಂದೂ ವಧುಗಳಿಗೆ
* (Free Registration)
80509 52637, 9380213677

**WANTED**
Nursery Teachers
B.A/B.Sc.,/B.Com
Spoken English Must
S.R.P. Convent
Anjaneya Badavane, 17th Cross, Davangere.
95903 99449 / 91136 31266

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse)
ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಸಿ.ಜಿ. ಆಸ್ಪತ್ರೆ ಹಿಂಭಾಗ
ಪೆವಿಲಿಯನ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.
98450 35710, 77607 39990

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಪಶ್ಚಿಮ ದಿಕ್ಕಿನ ಎರಡು ಕಮರ್ಷಿಯಲ್ ಸೈಟ್, ಜಯನಗರ, ಯೋಗಿ ರೆಡ್ಡಿ ಬಿಲ್ಡಿಂಗ್ ಹತ್ತಿರ, ಮಾರಾಟಕ್ಕಿದೆ.
9342224449, 9738827452

**ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ.
ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 99001 42052

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

## ಬಿ.ಆರ್. ಪಾಟೀಲ್ ಅವರಿಗೆ ವಿಶ್ವ ಕನ್ನಡ ಸಮ್ಮೇಳನಕ್ಕೆ ಮನವಿ ಅರ್ಪಣೆ



ದಾವಣಗೆರೆ, ಜ. 30- ಇಂದು ದಾವಣಗೆರೆ ನಗರದ ಕುವೆಂಪು ಕನ್ನಡ ಭವನದಲ್ಲಿ ಜರುಗಿದ ಹುತಾತ್ಮರ ದಿನಾಚರಣೆಗೆ ಉದ್ಘಾಟಕರಾಗಿ ಆಗಮಿಸಿದ್ದ ರಾಜ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಬಿ.ಆರ್. ಪಾಟೀಲ್ ಅವರಿಗೆ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನೇತೃತ್ವದಲ್ಲಿ ಮೂರನೇ ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಮನವಿ ಪತ್ರ ಅರ್ಪಿಸಲಾಯಿತು.

ಮಾರ್ಚ್‌ನಲ್ಲಿ ಮಂಡಿಸಲಿರುವ ರಾಜ್ಯ ಆಯವ್ಯಯ ಪತ್ರದಲ್ಲಿ ಕನಿಷ್ಠ 50 ಕೋಟಿ ಹಣವನ್ನು ಮೀಸಲಿರಿಸುವಂತೆ ಹಾಗೂ 2025ರಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸುವ ದಿನಾಂಕವನ್ನು ಘೋಷಿಸುವಂತೆ ಮನವಿ ಪತ್ರದಲ್ಲಿ ವಿನಂತಿಸಲಾಗಿದೆ.

ಈ ಸಂಧರ್ಭದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಗೌರವ ಸಲಹೆಗಾರ ಬಿ.ಎನ್. ಮಲ್ಲೇಶ್ ಇನ್ನು ಮುಂತಾದವರು ಉಪಸ್ಥಿತರಿದ್ದರು. ಮನವಿ ಪತ್ರ ಸ್ವೀಕರಿಸಿ ಸಕಾರಾತ್ಮಕವಾಗಿ ಉತ್ತರಿಸಿದ ಬಿ.ಆರ್. ಪಾಟೀಲ್, ಮುಖ್ಯಮಂತ್ರಿಗಳ ಗಮನ ಸೆಳೆಯುವುದಾಗಿ ತಿಳಿಸಿದರು.

## ಫೆ. 2 ರಂದು ಕ್ಯಾನ್ಸರ್ ಜಾಗೃತಿ ಕಾಲ್ನಡಿಗೆ ಜಾಥಾ

ದಾವಣಗೆರೆ, ಜ. 30- ಕ್ಯಾನ್ಸರ್ ಕಾಯಿಲೆ ಕುರಿತು ಜನ ಜಾಗೃತಿ ಮೂಡಿಸುವ ಹಿನ್ನೆಲೆಯಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ, ಎಸ್.ಎಸ್.ಕೇರ್ ಟ್ರಸ್ಟ್ ಮತ್ತು ಬಾಪೂಜಿ ಎಜುಕೇಶನಲ್ ಅಸೋಸಿಯೇಷನ್ ಸಹಯೋಗದಲ್ಲಿ ಫೆ. 2 ರಂದು ಬೆಳಿಗ್ಗೆ 8.30 ಕ್ಕೆ ನಗರದ ಗುಂಡಿ ವೃತ್ತದಿಂದ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ಸರ್ಜಿಕಲ್ ಅಂಕಾಲಜಿಸ್ಟ್ ಡಾ. ಅಜಯ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯು 2009 ರಲ್ಲಿ ಪ್ರಾರಂಭವಾಗಿದ್ದು, ಸಾರ್ವಜನಿಕರಿಗೆ ಕ್ಯಾನ್ಸರ್ ಚಿಕಿತ್ಸೆ ನೀಡಲಾಗುತ್ತಿದೆ. ಸ್ತನ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ಗುದದ್ವಾರ ಕ್ಯಾನ್ಸರ್, ಅನ್ನನಾಳ ಕ್ಯಾನ್ಸರ್, ಬಾಯಿ, ಕುತ್ತಿಗೆ ಮತ್ತು ಗಂಟಲು ಕ್ಯಾನ್ಸರ್ ಸೇರಿದಂತೆ ಸರ್ಜರಿ, ಕಿಮೋಥೆರಪಿ, ಅತ್ಯಾಧುನಿಕ ರೆಡಿಯೇಷನ್ ಸೌಲಭ್ಯವಿದೆ ಎಂದು ತಿಳಿಸಿದರು.

ಈ ಆಸ್ಪತ್ರೆಯಲ್ಲಿ ಎಪಿಎಲ್, ಬಿಪಿಎಲ್, ಯಶಸ್ವಿನಿ ಯೋಜನೆ, ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಇನ್ಸೂರೆನ್ಸ್ ಯೋಜನೆಯ ಸೌಲಭ್ಯಗಳು ದೊರಕಲಿವೆ. ಹೆಚ್ಚಿನ ಮಾಹಿತಿಗಾಗಿ 9632377719 ಗೆ ಸಂಪರ್ಕಿಸಲು ಕೋರಿದರು.

ಎಸ್.ಎಸ್. ಕೇರ್ ಟ್ರಸ್ಟ್ ಕೋರ್ ಕಮಿಟಿ ಸದಸ್ಯ ಡಾ.ಮೂಗನಗೌಡ ಮಾತನಾಡಿ, 2019 ರಿಂದ ಸ್ಪಂದನದ ಮೂಲಕ ಸ್ತನ ಕ್ಯಾನ್ಸರ್, ಸರ್ವೈಕಲ್ ಕ್ಯಾನ್ಸರ್ ತಪಾಸಣೆ ನಡೆಸಿಕೊಂಡು ಬರಲಾಗುತ್ತಿದ್ದು, ಬೇತೂರು ರಸ್ತೆಯಲ್ಲಿರುವ ಎಸ್.ಎಸ್. ಆಸ್ಪತ್ರೆಯಲ್ಲಿ ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಸ್ತನ ಕ್ಯಾನ್ಸರ್ ಗುರುತಿಸಿ ಉಚಿತ ಸ್ಕ್ರೀನಿಂಗ್ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಕಾಲ್ನಡಿಗೆ ಜಾಥಾ ಗುಂಡಿ ವೃತ್ತದಿಂದ ವಿದ್ಯಾರ್ಥಿ ಭವನ, ಅಂಬೇಡ್ಕರ್ ವೃತ್ತ, ಜಯದೇವ ವೃತ್ತ, ಗಾಂಧಿ ವೃತ್ತದ ಮೂಲಕ ಹೈಸ್ಕೂಲ್ ಮೈದಾನದಲ್ಲಿ ಕೊನೆಗೊಳ್ಳಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಾ. ಧನ್ಯಕುಮಾರ್, ಡಾ. ಮಾಲತೇಶ್ ಉಪಸ್ಥಿತರಿದ್ದರು.

## ನಗರದ ಪಂಚ ದೇವಸ್ಥಾನಗಳ ಮಹಾಕ್ಷೇತ್ರದ ವಾರ್ಷಿಕೋತ್ಸವ ಇಂದು

ಪಿ.ಬಿ. ರಸ್ತೆ ಕರೂರು ಕ್ರಾಸ್ ಬಳಿ ಇರುವ ಪಂಚದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ವಾರ್ಷಿಕೋತ್ಸವದ ಪ್ರಯುಕ್ತ ಪ್ರತಿ ದಿನ ಬೆಳಿಗ್ಗೆ ಪಂಚದೇವರುಗಳಿಗೆ ಹಾಗೂ ಕಾಶಿ ಮಹಾ ಲಿಂಗೇಶ್ವರ ಸ್ವಾಮಿಗೆ ಪಂಚಾಮೃತ, ತೈಲಾಭಿಷೇಕ ಮಾಡಲಾಗುವುದು. ಇಂದು ಬೆಳಿಗ್ಗೆ 9 ಕ್ಕೆ ಚಂಡಿ ಹೋಮದ ನಂತರ ಮುತ್ತೈದೆಯರಿಗೆ ಬಾಗಿನ ಅರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗವಿರುತ್ತದೆ.

## ಹರಪನಹಳ್ಳಿ : ಬ್ಲಾಕ್ ಮಟ್ಟದ ಕ್ರೀಡಾಕೂಟ



ಹರಪನಹಳ್ಳಿ,ಜ.30- ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ನೆಹರು ಯುವ ಕೇಂದ್ರ ಬಳ್ಳಾರಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಸ್ವ-ಸಹಾಯ ಸಂಘ ಹರಪನಹಳ್ಳಿ ಇವರ ಸಹಯೋಗದಲ್ಲಿ 2024-25ನೇ ಸಾಲಿನ ಬ್ಲಾಕ್ ಮಟ್ಟದ ಕ್ರೀಡಾಕೂಟ ಜರುಗಿತು.

ಕ್ರೀಡಾಕೂಟಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಸ್ವ-ಸಹಾಯ ಸಂಘದ ಕಾರ್ಯದರ್ಶಿ ಶ್ವೇತಾ ಚಾಲನೆ ನೀಡಿ ಮಾತನಾಡಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಕ್ರೀಡೆಗಳು ಬಹುಮುಖ್ಯ, ಕಲಿಕೆಯ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದರಿಂದ ಮಕ್ಕಳಲ್ಲಿ ಹೊಸ ಚೈತನ್ಯ ಮೂಡುತ್ತದೆ ಎಂದು ತಿಳಿಸಿದರು.

ಕ್ರೀಡೆಯಲ್ಲಿ ವಿಜೇತರಾದ ಮಕ್ಕಳಿಗೆ ಸ್ಪೋರ್ಟ್ಸ್ ಕಿಟ್, ಬಹುಮಾನ, ಪ್ರಶಸ್ತಿ ಪ್ರದಾನ ಮಾಡಲಾಯಿತು. ನೆಹರು ಯುವ ಕೇಂದ್ರದ ಅಂಬರೀಶ್, ದೈಹಿಕ ಶಿಕ್ಷಕ ಆನಂದ್, ಯಾಸೀರ್ ಮತ್ತಿತರರು ಇದ್ದರು.

### ಓದುಗರ ಪತ್ರ

## ಕಸ ಶೇಖರಣೆ ಮಾಡುವ ವಾಹನಗಳಲ್ಲಿ ಶರಣರ ವಚನ ಪ್ರಚಾರ ಮಾಡಿ

**ಮಾನ್ಯರೇ,**

ಶ್ರಮಿಕ ವರ್ಗದಲ್ಲಿ ಹುಟ್ಟಿದ ಎಲ್ಲಾ ಜಾತಿಯ ಶರಣರು ತಮ್ಮ ಅನುಭಾವದ ಮೂಲಕ ಮೌಢ್ಯ ಆಚರಣೆಗಳ ವಿರುದ್ಧ ಜಾಗೃತಿ ಮೂಡಿಸಿದ ವಚನಗಳು ಜನಗಳನ್ನ ವೈಜ್ಞಾನಿಕ, ವೈಚಾರಿಕ ಚಿಂತನೆಗೆ ಹಚ್ಚಬಲ್ಲವು ಎಂದುಕೊಂಡಿದ್ದೇನೆ. ಹಾಗಾಗಿ ಪೌರ ಆಡಳಿತದ ಸಚಿವರು, ಪಂಚಾಯತ್, ಪುರಸಭೆ, ನಗರಸಭೆ, ಪಾಲಿಕೆಗಳ, ಸದಸ್ಯರು ಅಧಿಕಾರಿಗಳು ಮತ್ತು ನೌಕರರಲ್ಲಿ ನನ್ನ ಕೋರಿಕೆ ಏನೆಂದರೆ ತಮ್ಮಗಳ ಆಡಳಿತದ ಅವಧಿ ಐತಿಹಾಸಿಕವಾಗಿ ಉಳಿಯಲು ನನ್ನದೊಂದು ಸಲಹೆ ಏನೆಂದರೆ ಬೆಳಿಗ್ಗೆ ಕಸ ಶೇಖರಣೆ ಮಾಡುವ ವಾಹನಗಳಲ್ಲಿ ಸಿನೆಮಾ ಗೀತೆ, ಭಕ್ತಿ ಗೀತೆ ಮತ್ತು ಭಾವ ಗೀತೆಗಳ ಜೊತೆ ಜನತೆಗೆ ಶರಣರ ವಚನಗಳನ್ನು ಕೇಳಿಸಿ ಜಾಗೃತಿ ಮೂಡಿಸಲು ಮನವಿ.

**- ಕೊಟ್ರೇಶ್ ಪಿ ಐರಣಿ**, ದಾವಣಗೆರೆ. 9141305832.

# ಅಹಿಂಸೆಯ ಪ್ರತೀಕ ಮಹಾತ್ಮ ಗಾಂಧೀಜೀ : ದಿನೇಶ್ ಕೆ. ಶೆಟ್ಟಿ

ದಾವಣಗೆರೆ, ಜ. 30 - ಅಹಿಂಸೆಯ ಪ್ರತೀಕ ಮಹಾತ್ಮಗಾಂಧಿ ಅವರು ವಿಶ್ವಕ್ಕೆ ಮಾದರಿಯಾಗಿದ್ದು, ಇಂದು ಅವರನ್ನು ಹತ್ಯೆ ಮಾಡಿದವರನ್ನು ಬಿಜೆಪಿ ಪೂಜಿಸುತ್ತಿರುವುದು ದುರದೃಷ್ಟಕರ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ಅವರಿಂದು ದಾವಣಗೆರೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿಯವರ 76ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಅಹಿಂಸೆಯಿಂದ ಏನಾದರೂ ಸಾಧಿಸಬಹುದು ಎಂಬುದಕ್ಕೆ ಮಹಾತ್ಮಗಾಂಧಿ ಅವರು ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವೇ ಸಾಕ್ಷಿ ಎಂದರು.

ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕ ಮುದೇಗೌಡ್ರು ಗಿರೀಶ್ ಮಾತನಾಡಿ, ಇಂದು ದೇಶ ಓರ್ವ ಮಹಾತ್ಮರನ್ನು ಕಳೆದುಕೊಂಡಿರುವ ದಿನವಾದರೆ, ಇನ್ನೊಂದು ಅವರನ್ನು ಕೊಂದವರ ಪರವಾಗಿರುವವರು ಇಂದು ದೇಶವನ್ನು ಆಳುತ್ತಿದ್ದು, ಇಂದಿನ ಯುವಕರು ಕೊಂದವರನ್ನು ಪೂಜಿಸದೇ, ಮಹಾತ್ಮರನ್ನು ಪೂಜಿಸುವಂತಾಗಬೇಕು ಎಂದು ಕರೆ ನೀಡಿದರು.

ಮಹಾನಗರ ಪಾಲಿಕೆ ಸದಸ್ಯರಾದ ಎ. ನಾಗರಾಜ್ ಅವರು ಮಾತನಾಡಿ ಮಹಾತ್ಮಗಾಂಧಿ ಅವರ ಅಹಿಂಸೆಯ ಹೋರಾಟ ಕೇವಲ ಭಾರತವಲ್ಲದೇ ವಿಶ್ವಾದ್ಯಂತದ ನಾಗರಿಕ ಹಕ್ಕುಗಳ ಮತ್ತು ಸ್ವಾತಂತ್ರ್ಯ ಆಂದೋಲನಗಳಿಗೆ ಸ್ಫೂರ್ತಿ ನೀಡಿತು. ಇದರಿಂದ ಅನೇಕ ದೇಶಗಳು ಪರದೇಶಿಗರ ಆಳ್ವಿಕೆಯಿಂದ ಮುಕ್ತಿ ಪಡೆದವು ಎಂದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್ ಮಾತನಾಡಿ 1921ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕತ್ವ ವಹಿಸಿದ ಬಳಿಕ, ಬಡತನದ ನಿವಾರಣೆ, ಮಹಿಳಾ ಹಕ್ಕುಗಳ ವಿಸ್ತರಣೆ, ಧಾರ್ಮಿಕ ಮತ್ತು ಜನಾಂಗೀಯ ಸೌಹಾರ್ದ, ಅಸ್ಪೃಶ್ಯತೆಯ ಅಂತ್ಯ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಹೆಚ್ಚಿಸಲು ಹಮ್ಮಿಕೊಳ್ಳಲಾದ ರಾಷ್ಟ್ರವ್ಯಾಪಿ ಚಳುವಳಿಗಳ ನೇತೃತ್ವವನ್ನು ಗಾಂಧಿಯವರು ವಹಿಸಿಕೊಂಡರು ಎಂದರು.



### ಮಹಾತ್ಮ ಗಾಂಧೀಜಿಯವರ 76ನೇ ವರ್ಷದ ಪುಣ್ಯಸ್ಮರಣೆ

ಮಹಾನಗರ ಪಾಲಿಕೆ ನಾಮ ನಿರ್ದೇಶನ ಸದಸ್ಯರಾದ ಸಾಗರ್ ಎಂ.ಹೆಚ್. ಮಾತನಾಡಿ, ಸ್ವಾತಂತ್ರ ಭಾರತ ದೇಶದಲ್ಲಿ ದೇಶಕ್ಕಾಗಿ ಹೋರಾಟ ನಡೆಸಿದವರನ್ನು ಹತ್ಯೆ ಮಾಡುವ ಮೂಲಕ ದೇಶದಲ್ಲಿ ಮೊದಲ ಬಾರಿಗೆ ಭಯೋತ್ಪಾದನೆ ಹುಟ್ಟು ಹಾಕಿದ ದಿನ ಎಂದರು.

ಯುವ ಕಾಂಗ್ರೆಸ್‌ನ ರಾಕೇಶ್ ಮಾತನಾಡಿ ಬ್ರಿಟಿಷರು ಹೇರಿದ್ದ ಉಪ್ಪಿನ ತೆರಿಗೆಯನ್ನು ವಿರೋಧಿಸಲು ಹಮ್ಮಿಕೊಂಡಿದ್ದ ಅಸಹಕಾರ ಚಳವಳಿಯಲ್ಲಿ ತಮ್ಮ ಅನುಯಾಯಿಗಳ ಮುಂದಾಳತ್ವವನ್ನು ವಹಿಸಿದ್ದ ಗಾಂಧೀಜಿಯವರು 1930ರಲ್ಲಿ ದಂಡಿ ಉಪ್ಪಿನ ಯಾತ್ರೆಯನ್ನು ನಡೆಸಿ, ಆನಂತರ ಬ್ರಿಟಿಷರ ವಿರುದ್ಧ ಕ್ವಿಟ್ ಇಂಡಿಯಾ ಚಳುವಳಿಯನ್ನು ನಡೆಸಿದರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ನಾಮ ನಿರ್ದೇಶನ ಸದಸ್ಯರಾದ ಹನುಮಂತರಾಜ್, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಸುಭಾನ್ ಸಾಬ್, ಮಹಿಳಾ ಕಾಂಗ್ರೆಸ್‌ನ ಅಧ್ಯಕ್ಷೆ ಶ್ರೀಮತಿ ಮಂಜಮ್ಮ, ನಿಟುವಳ್ಳಿ ಪ್ರವೀಣ್, ದಸ್ತಗಿರಿ, ಅನಿಲ್ ಮತ್ತಿತರರಿದ್ದರು.

# ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದ 'ಮುದುಕನ ಮದುವೆ' ನಾಟಕ

ದಾವಣಗೆರೆ, ಜ. 28- ಪದ್ಮಶ್ರೀ ಚಿಂದೋಡಿಲೀಲಾ ಟ್ರಸ್ಟ್ ಹಾಗೂ ಶಿವಸಿಂಪಿ ಸಮಾಜ ಇವರ ಸಹಯೋಗದಲ್ಲಿ ಇದೇ 21ರಂದು ಪದ್ಮಶ್ರೀ ಚಿಂದೋಡಿ ಲೀಲಾ ಅವರ 15ನೇ ವರ್ಷದ ರಂಗ ಸ್ಮರಣೆ ಹಾಗೂ ರಂಗಭೂಮಿ ಕಲಾವಿದರ ಸಮ್ಮಿಲನ ಕಾರ್ಯಕ್ರಮದ ಅಂಗವಾಗಿ ನಗರದ ಎಂ.ಸಿ.ಸಿ. ಬಿ ಬ್ಲಾಕ್ ನಲ್ಲಿರುವ ಪದ್ಮಶ್ರೀ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಮುದುಕನ ಮದುವೆ ನಾಟಕ ಪ್ರದರ್ಶನಗೊಂಡು ಜನಮನ ಸೆಳೆಯಿತು.

ಸಮಾಜದ ಗೌರವಾಧ್ಯಕ್ಷರಾದ ಗುರುಬಸಪ್ಪ ಬೂಸನೂರು, ಹೇಮಣ್ಣ ಜವಳಿ, ಕಣಕುಪ್ಪಿ ಮುರುಗೇಶಪ್ಪ ಅವರ ಸಮ್ಮುಖದಲ್ಲಿ, ಸಮಾಜ ಬಾಂಧವರು, ಕಲಾಭಿಮಾನಿಗಳು ಕಿಕ್ಕಿರಿದು ತುಂಬಿದ್ದ ಕಲಾ ಕ್ಷೇತ್ರದಲ್ಲಿ ರಂಗ ಸಂಭ್ರಮ ಮೇಳೈಸಿತ್ತು. ಕೊಟ್ಟ ಸಾಲ ಹಿಂದಿರುಗಿಸಲಾಗದ ಬಡ ರಾಜೀವಪ್ಪನ ಅಸಹಾಯಕತೆಗೆ, ಮಗಳ ವಯಸ್ಸಿನ ಕಲ್ಯಾಣಿಯನ್ನು ಮದುವೆಯಾಗಲು ಹಾತೊರೆಯುವ ಸಾಹುಕಾರ ರಂಗಣ್ಣ, ಕಪ್ಪುವರ್ಣದ ಅಚ್ಚಮ್ಮ ಮದುವೆಯಾಗಲು ಗಂಡಿಗಾಗಿ ಹುಡುಕಾಟ, ನಾಟಕದ ಲಚ್ಚಿಯನ್ನು ಪ್ರೀತಿಸಿ ಮನೆಯವರ ವಿರೋಧದ ನಡುವೆಯೂ



ಮದುವೆಯಾಗಲು ಚಡಪಡಿಸುವ ಮಂದಾಕಿನಿ, ಮಲತಾಯಿಯ ಕಿರುಕುಳದಿಂದ ನಲುಗುತ್ತಿರುವ ಕಲ್ಯಾಣಿ, ಕಲ್ಯಾಣಿಯನ್ನು ಮೆಚ್ಚಿ ಮದುವೆಯಾಗಲು ಮುಂದಾದ ಶಾಮ, ಕೊನೆಗೆ ಶೇಷಣ್ಣನ ಜಾಣ್ಮೆಯ ನಿರ್ಧಾರದಿಂದ ಸರಿ ಜೋಡಿಗಳೊಂದಿಗೆ ಮದುವೆ ನೆರವೇರುತ್ತದೆ,

ಹೀಗೆ ನಾಟಕದ ಹಾಸ್ಯ ದೃಶ್ಯಗಳು ನಗೆಯ ಬುಗ್ಗೆ ಅರಳಿಸಿದರೆ, ಗಂಭೀರ ಸನ್ನಿವೇಶಗಳು ಮನಮಿಡಿಯುತ್ತ ಸಾಗಿ, ಹಿರಿಯ ಅನುಭವಿ ಕಲಾವಿದರ ಮನೋಜ್ಞ ಅಭಿನಯದಿಂದ ನಾಟಕ ಯಶಸ್ಸು ಕಂಡಿತು.

ಸಾಹುಕಾರ ರಂಗಣ್ಣನ ಹಾಸ್ಯ ಪಾತ್ರದಲ್ಲಿ ಚಿಂದೋಡಿ ಚಂದ್ರಧರ ಹಾಗೂ ಶೇಷಣ್ಣನ ಪಾತ್ರದಲ್ಲಿ ಚಿಂದೋಡಿ ಮಧುಕೇಶ ಆಕರ್ಷಕ ಜೋಡಿಯಾಗಿ ಪ್ರತಿ ಸನ್ನಿವೇಶದಲ್ಲೂ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು.

ಕಥಾನಾಯಕ ಶ್ಯಾಮ್ ಪಾತ್ರದಲ್ಲಿ ಕುಂದೂರು ಮಂಜುನಾಥ, ರಾಜೀವಪ್ಪನಾಗಿ ಮಹಾರುದ್ರಚಾರ್ ಹರಪನಹಳ್ಳಿ, ನಾಟಕದ ಲಕ್ಷ್ಮಣನಾಗಿ ಮಾರುತಿ ಬೆಂಗೇರಿ ಹಾಗೂ ಸ್ತ್ರೀ ಪಾತ್ರದಲ್ಲಿ ಕಾವೇರಿ-ಶೈಲಜಾ ಕುಂದಾಪುರ, ಮಂದಾಕಿನಿ- ಪ್ರೇಮ ತಾಳಿಕೋಟೆ, ಕಲ್ಯಾಣಿ- ಲಕ್ಷ್ಮಿ ಹೊಸಪೇಟೆ, ಅಚ್ಚಮ್ಮನಾಗಿ ಉಮಾರಾಣಿ ಇಳಕಲ್, ಇವರು ಪಾತ್ರಕ್ಕೆ ಮೆರಗು ತಂದುಕೊಂಡು ಸನ್ನಿವೇಶಗಳು ರಂಗೇರಿ, ರಂಗಾಸಕ್ತರನ್ನು ರಂಜಿಸುವಲ್ಲಿ ಸಫಲರಾದರು.

ಮಹಾಂತೇಶ್ ಬೆಳಗಲಿ ಅವರ ಕ್ಯಾಶಿಯೋ ಹಾಗೂ ಪರಮೇಶ್ ಪಾಲ್ ರ ಪ್ಯಾಡ್ ಸಂಗೀತ ಸಂಯೋಜನೆಯಲ್ಲಿ ನಾಟಕದ ಸನ್ನಿವೇಶಗಳು ಕಳೆ ಕಟ್ಟುವಂತಾದವು, ನಾಟಕದ ವ್ಯವಸ್ಥೆಯನ್ನು ಚಿಂದೋಡಿ ವೀರಶಂಕರ್ ನಿರ್ವಹಿಸಿದರು.

# ನಾಳೆ 11ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ



ದಾವಣಗೆರೆ, ಜ. 30- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಫೆ. 1 ರಂದು ನಗರದ ಕುವೆಂಪು ಕನ್ನಡ ಭವನದಲ್ಲಿ 11ನೇ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಅಧ್ಯಕ್ಷೆ ಸುಮತಿ ಜಯಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 8 ಗಂಟೆಗೆ ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ನಂತರ ಬೆಳಿಗ್ಗೆ 9 ಕ್ಕೆ ತಾಯಿ ಭುವನೇಶ್ವರಿ ಭಾವಚಿತ್ರ ಹಾಗೂ ಸಮ್ಮೇಳನಾಧ್ಯಕ್ಷರಾದ ಶಿವಾನಂದ ಗುರೂಜಿ ಅವರ ಮೆರವಣಿಗೆ ನಡೆಯಲಿದೆ ಎಂದರು.

ತಾ.ಪಂ. ಇಓ ರಾಮಭೋವಿ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಮೆರವಣಿಗೆಯಲ್ಲಿ ಬಸವ ಕಲಾ ಲೋಕದ ನಂದಿಕೋಲು, ದುರ್ಗಮ್ಮ ದೇವಿ ತಂಡದ ಕೋಲಾಟ, ನಾಸಿಕ್ ಡೋಲ್, ಸಹನಾ ಇಂಟರ್ ನ್ಯಾಷನಲ್ ಶಾಲೆ ಮಕ್ಕಳಿಂದ ವಿವಿಧ ವೇಷಭೂಷಣಗಳ ಪ್ರದರ್ಶನ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಳ್ಳಲಿವೆ ಎಂದು ಹೇಳಿದರು.

ಅಂದು ಬೆಳಿಗ್ಗೆ 10 ಗಂಟೆಗೆ ಸಮ್ಮೇಳನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದು, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಸಮ್ಮೇಳನಾಧ್ಯಕ್ಷರಾದ ಶಿವಾನಂದ ಗುರೂಜಿ ಉಪಸ್ಥಿತರಿರುವರು ಎಂದರು.

ಹಿರಿಯ ಸಾಹಿತಿ ಡಾ. ಲೋಕೇಶ್ ಅಗಸನಕಟ್ಟೆ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಎಸ್ಪಿ ಉಮಾ ಪ್ರಶಾಂತ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯರಾದ ಗೀತಾ ದಿಳ್ಳೆಪ್ಪ, ವೀಣಾ ನಂಜಪ್ಪ ಮತ್ತಿತರರು ಭಾಗವಹಿಸಲಿದ್ದಾರೆಂದು ಮಾಹಿತಿ ನೀಡಿದರು.

ಮಧ್ಯಾಹ್ನ 1.30 ಕ್ಕೆ ಸಾಹಿತ್ಯ ಚಿಂತನ-ಮಂಥನ ಗೋಷ್ಠಿ ನಡೆಯಲಿದ್ದು, ದಾವಣಗೆರೆ ತಾಲ್ಲೂಕಿನ ಸಾಹಿತ್ಯ ಕ್ಷೇತ್ರದ ಸಾಧಕರ ವಿಷಯ ಕುರಿತು ಸಾಹಿತಿ ಡಾ.ಎ.ಬಿ.ರಾಮಚಂದ್ರಪ್ಪ ಹಾಗೂ ಮಕ್ಕಳು,ಯುವಕರು, ಮಹಿಳೆಯರ ಮುಂದಿರುವ ಸವಾಲುಗಳ ಬಗ್ಗೆ ಡಾ. ಪಿ. ಎಂ.ಅನುರಾಧ, ಕನ್ನಡ ಕಟ್ಟುವಲ್ಲಿ ತಂತ್ರಜ್ಞಾನದ ಪಾತ್ರ ಕುರಿತು ವೆಂಕಪ್ಪನವರ ಬಸವರಾಜ ಮಾತನಾಡಲಿದ್ದಾರೆ. ಡಾ. ಶಶಿಕಲಾ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ನಂತರ 2.30ಕ್ಕೆ ಕವಿಗೋಷ್ಠಿ ನಡೆಯಲಿದ್ದು, ಸಂಜೆ 4 ಗಂಟೆಗೆ ದಾವಣಗೆರೆ ತಾಲ್ಲೂಕಿನಲ್ಲಿ ಕಂಡು ಬರುವ ಪ್ರಮುಖ ಶಾಸನಗಳ ಕುರಿತು ಡಾ.ಬುರುಡೇಕಟ್ಟೆ ಮಂಜಪ್ಪ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸಂಜೆ 4.30 ಕ್ಕೆ ಬಹಿರಂಗ ಅಧಿವೇಶನ ನಡೆಯಲಿದ್ದು, ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದೆ. ಇದೇ ವೇಳೆ ಸಾಧಕರಿಗೆ ಸನ್ಮಾನ ಸಹ ನಡೆಯಲಿದೆ. ಸಂಜೆ 6.30 ಕ್ಕೆ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಿದ್ದೇಶ್ ಕುರ್ಕಿ, ಶಿವಶಂಕರ್, ಲಿಂಗರಾಜ್ ಆನೆಕೊಂಡ, ಷಡಾಕ್ಷರಪ್ಪ ಬೇತೂರು ಉಪಸ್ಥಿತರಿದ್ದರು.

## ಸಮ್ಮೇಳನಕ್ಕೆ ಅನ್ಯ ಕಾರ್ಯ ನಿಮಿತ್ತ ರಜೆ ಸೌಲಭ್ಯ ಘೋಷಣೆ

ದಾವಣಗೆರೆ, ಜ.30- ನಗರದ ಕುವೆಂಪು ಕನ್ನಡ ಭವನದಲ್ಲಿ ಫೆ.1ರಂದು ನಡೆಯುವ 11ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ದಾವಣಗೆರೆ ಉತ್ತರ ಹಾಗೂ ದಕ್ಷಿಣ ವಲಯದ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಆಸಕ್ತ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗೂ ನೌಕರರಿಗೆ ಸಮ್ಮೇಳನದಂದು 'ಅನ್ಯ ಕಾರ್ಯ ನಿಮಿತ್ತ ರಜೆ ಸೌಲಭ್ಯ' ನೀಡಲಾಗಿದೆ. ಈ ಕುರಿತು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ.



ಪ್ರಯಾಗರಾಜ್‌ನ ಮಹಾಕುಂಭ ಮೇಳದಲ್ಲಿ ಮೌನಿ ಅಮಾವಾಸ್ಯೆ ದಿನವಾದ ಬುಧವಾರ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಭಗೀರಥ ಗುರುಪೀಠದ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ ಮತ್ತು ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ ಅವರು ಗಂಗಾ, ಯಮುನಾ, ಸರಸ್ವತಿಯ ತ್ರಿವೇಣಿ ಸಂಗಮದಲ್ಲಿ ಶಾಹಿಸ್ನಾನ ಮಾಡಿದರು.

# ಮನುಸ್ಮೃತಿ ಸಂವಿಧಾನ ಜಾರಿಗೆ ತರಲು ಮುಂದಾಗಿರುವುದನ್ನು ವಿರೋಧಿಸಿ ಪ್ರತಿಭಟನೆ

ದಾವಣಗೆರೆ, ಜ. 30- ಕೇಂದ್ರ ಸರ್ಕಾರ ಮನುಸ್ಮೃತಿ ಸಂವಿಧಾನ ಜಾರಿಗೆ ತರಲು ಮುಂದಾಗಿರುವುದನ್ನು ವಿರೋಧಿಸಿ, ಜಿಲ್ಲೆಯ ದಲಿತ ಪರ, ಬಸವ ಪರ, ಪ್ರಗತಿ ಪರ ಸಂಘಟನೆಗಳ ಸಹಯೋಗದಲ್ಲಿ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನವನ್ನು ಬದಲಿಸಿ, ಮನುಸ್ಮೃತಿ ಸಂವಿಧಾನವನ್ನು ಜಾರಿಗೆ ತರುವ ಬಗ್ಗೆ ಚಿಂತನೆ ನಡೆಸುತ್ತಿದ್ದು, ಮನುಸ್ಮೃತಿ ಸಂವಿಧಾನ ಜಾರಿಗೆ ತರಲು ಮುಂದಾದರೆ, ದೇಶಾದ್ಯಂತ ರಕ್ತಪಾತ ನಡೆಯಲಿದೆ ಎಂಬುದನ್ನು ಸರ್ಕಾರ ಮನಗಾಣಬೇಕಾಗಿದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಭಾರತದ ಸಂವಿಧಾನ ಜಗತ್ತಿನ ಅತ್ಯಂತ ಶ್ರೇಷ್ಠ ಸಂವಿಧಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಂವಿಧಾನವನ್ನು ರಚಿಸಿದ ಅಂಬೇಡ್ಕರ್ ಅವರನ್ನು ಇಡೀ ಜಗತ್ತೇ ಕೊಂಡಾಡುತ್ತಿದೆ. ಸಂವಿಧಾನ ಅನುಷ್ಠಾನಗೊಂಡ ಕಾರಣಕ್ಕಾಗಿ ಧರ್ಮ, ಜಾತಿ ಆಧಾರದ ತಾರತಮ್ಯ ನಿವಾರಣೆಯಾಗುತ್ತಿದೆ. ಪ್ರತಿಯೊಬ್ಬ ಪ್ರಜೆಯೂ ಗೌರವಯುತವಾಗಿ ಬಾಳುವ ಅವಕಾಶ ಸಿಕ್ಕಿದೆ. ಇಂತಹ ಶ್ರೇಷ್ಠ ಸಂವಿಧಾನದ ವಿರುದ್ಧ ಧ್ವನಿ ಎತ್ತುತ್ತಿದ್ದ ಶಕ್ತಿಗಳೇ ಪರ್ಯಾಯ ಸಂವಿಧಾನ ರಚನೆಗೆ ಮುಂದಾಗಿವೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.



ಭಾರತದ ಸಂವಿಧಾನ ಏಳು ದಶಕಗಳಲ್ಲಿ ತಂದ ಸರ್ವ ಸಮಾನತೆಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬದಲಾವಣೆಗಳನ್ನು ಸಹಿಸದ ಕೆಲವು ಮೂಲಭೂತವಾದಿ ಮನಸ್ಥಿತಿಗಳು ಅಸಮಾನತೆಯ ಕೂಪವಾಗಿದ್ದ ಮನುವಾದವನ್ನು ಮತ್ತೆ ಜಾರಿಗೆ ತರುವ ನೆಲೆಯಲ್ಲಿ ಸಂವಿಧಾನವನ್ನು ಬದಲಿಸುತ್ತೇವೆ ಎಂಬ ಹೇಳಿಕೆಯನ್ನು ಬಹಿರಂಗವಾಗಿ ನೀಡುತ್ತಾ ಬರುತ್ತಿದ್ದಾರೆ. ಸಂವಿಧಾನದ ಆಶಯ, ಏಕತೆಗೆ ಧಕ್ಕೆ ತರುವ ಪ್ರಯತ್ನದ ಭಾಗವಾಗಿ ಪರ್ಯಾಯ ಸಂವಿಧಾನದ ಕರಡು ಘೋಷಣೆಗೆ ಪ್ರಯಾಗ್ ರಾಜ್ ನ ಮಹಾಕುಂಭ ಮೇಳದಲ್ಲಿ ವೇದಿಕೆ ಸಿದ್ಧಪಡಿಸಲಾಗಿದೆ. ಈ ಕ್ರಮವು ಭಾರತದ ಸಂವಿಧಾನಕ್ಕೆ ಮಾಡುವ ಅಪಚಾರವಾಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಜಾಗೃತ ಭಾರತ ವಿಚಾರ ವೇದಿಕೆ ಸಂಚಾಲಕ ಡಾ.ಕೆ.ಎ. ಓಬಳೇಶ್, ಜಾಗತಿಕ ಲಿಂಗಾಯತ ಮಹಾಸಭಾ ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಅಗಡಿ, ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಗೋಪನಾಳು ರುದ್ರಗೌಡ, ವಿವಿಧ ಸಂಘಟನೆಗಳ ಪ್ರಮುಖರಾದ ವಿಶ್ವೇಶ್ವರಯ್ಯ ಹೆಮ್ಮನಬೇತೂರು, ಶಿವಮೂರ್ತಯ್ಯ ಹಿರೇಮೇಗಳಗೆರೆ, ಮರುಳಸಿದ್ಧಯ್ಯ ಬಸವನಹಾಳು, ಶಶಿಧರ ಬಸಾಪುರ, ಹನುಮಂತಪ್ಪ ಕರೂರು, ಕೊಟ್ರೇಶ್ ಐರಣಿ, ಗೋವರ್ಧನ್, ಲಕ್ಷ್ಮಣ್ ರಾಮಾವತ್, ಸಿದ್ಧಯ್ಯ, ಪ್ರೊ. ಹದಡಿ ಯಲ್ಲಪ್ಪ, ಬುಳಸಾಗರದ ಸಿದ್ರಾಮಣ್ಣ ಮತ್ತಿತರರು ಭಾಗವಹಿಸಿದ್ದರು.

ಶ್ರೀ ಆದಿತ್ಯಾ ದೇವತಾಭ್ಯೋ ಭವನ

**ಶ್ರೀ ಆದಿತ್ಯಾ ಟೂರಿಸ್ಟ್, ದಾವಣಗೆರೆ**

**ಮಹಾಕುಂಭ ಮೇಳ ವಿಶೇಷ ಪ್ಯಾಕೇಜ್ ಟೂರ್**

(ಊಟ, ತಿಂಡಿ, ಟೀ, ಕಾಫಿ ಸೇರಿ)

8 ದಿನಗಳ ಲಕ್ಸುರಿ ಪುಶ್ ಬ್ಯಾಕ್ ಸೀಟಿನ ಬಸ್ ಪ್ರವಾಸ

ಪ್ರೇಕ್ಷಣೀಯ ಸ್ಥಳ : ಉಜ್ಜಯಿನಿ, ಪ್ರಯಾಗ್‌ರಾಜ್, ಅಯೋಧ್ಯ, ವಾರಣಾಸಿ

ದಾವಣಗೆರೆಯಿಂದ ಹೊರಡುವ ದಿನಾಂಕ : 8-2-2025, ಬೆಳಿಗ್ಗೆ 8 ಗಂಟೆಗೆ

ಬುಕ್ಕಿಂಗ್ ಕೊನೆಯ ದಿನಾಂಕ : 3-2-2025

ಒಬ್ಬರಿಗೆ ರೂ. 15,000/- ಮಾತ್ರ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : **98447 07017, 73532 11207**

**ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ ದಾವಣಗೆರೆ**

ಭೂ ಸ.ನಿ. ಅಪೀಲು ನಂ. : 302.2024-25

ಅಪೀಲುದಾರರು : ಭೂ ದಾಖಲೆಗಳ ಸಹಾಯಕ ನಿರ್ದೇಶಕರು

ದಾವಣಗೆರೆ ತಾಲ್ಲೂಕು -ವಿರುದ್ಧ- ಎದುರುದಾರರು : ದುಗ್ಗಪ್ಪ ಮತ್ತು ಇತರರು

**ಸಾರ್ವಜನಿಕ ಪ್ರಕಟಣೆಗಾಗಿ**

ಮೇಲ್ಕಂಡ ಪ್ರಕರಣದಲ್ಲಿ ಮೇಲ್ಮನವಿದಾರರು ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಕೆರೆಯಾಗಳಹಳ್ಳಿ ಗ್ರಾಮದ ರಿ.ಸ.ನಂ. 181 ರಲ್ಲಿ ಮಾಡಿರುವಂತಹ ಹಿಸ್ಸಾ ಪೋಡುಗಳು ರದ್ದುಪಡಿಸಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಸೊ-ಮೋಟೋ ಆಪೀಲು ಸಲ್ಲಿಸಿದ್ದು, ಸದರಿ ಪ್ರಕರಣವು ದಿ: 06.02.2025 ರಂದು ಮಧ್ಯಾಹ್ನ 3.00 ಗಂಟೆಗೆ ನಿಗದಿಪಡಿಸಿದ್ದು, ಸದರಿ ಅಪೀಲಿನ ಎದುರುದಾರರಾದ ಕ್ರಮವಾಗಿ 1) ದುಗ್ಗಪ್ಪ ಬಿನ್ ಲೇ ಎ.ಕೆ. ಹನುಮಪ್ಪ 2) ಸಾಕಮ್ಮ ಕೋಂ ಲೇ. ಬಸವರಾಜಪ್ಪ 3) ಮಂಜುಳಾ ಕೋಂ ಸಂತೋಷ್ ಎಸ್. 4) ಸಂತೋಷ್ ಎಸ್.ಆರ್. ಬಿನ್ ಲೇ ರಾಮಚಂದ್ರಪ್ಪ 5) ಗಂಗಮ್ಮ ಕೋಂ ಬಸಪ್ಪ 6) ಕೆಂಚಪ್ಪ ಬಿನ್ ಕರಿಯಪ್ಪ 7) ಕೃಷ್ಣಪ್ಪ ಬಿನ್ ಹವಳಪ್ಪ 8) ದುರುಗಪ್ಪ ತಾಯಿ ಹಾಲಮ್ಮ 9) ಹನುಮಪ್ಪ ತಾಯಿ ಹಾಲಮ್ಮ 10) ಹಾಲಮ್ಮ ತಾಯಿ ಹಾಲಮ್ಮ 11) ಹಾಲೇಶ ಎಂ. ಬಿನ್ ಮಂಜಪ್ಪ 12) ಸಂತೋಷ ಎಸ್.ಆರ್. ಬಿನ್ ಲೇ ರಾಮಚಂದ್ರಪ್ಪ ಕೆರೆಯಾಗಳಹಳ್ಳಿ ಗ್ರಾಮದ ವಾಸಿಯಾದ ಇವರಾಗಲೀ, ಇವರ ಹಿತಾಸಕ್ತ ಪಕ್ಷಗಾರರು ಸದರಿ ದಿ: 6.2.2025 ರಂದು ಮಧ್ಯಾಹ್ನ 3.00 ಗಂಟೆಗೆ ನಿಗದಿಪಡಿಸಿದ್ದು, ಮಾನ್ಯ ನ್ಯಾಯಾಲಯಕ್ಕೆ ಸ್ವತಃ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಲು ತಿಳಿಸಿದೆ.

ತಪ್ಪಿದ್ದಲ್ಲಿ ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ಮಾನ್ಯ ನ್ಯಾಯಾಲಯವು ಪ್ರಕರಣವನ್ನು ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಮೊಹರಿನೊಂದಿಗೆ 5/12/2024 ರಂದು ಸದರಿ ನೋಟಿಸನ್ನು ಹೊರಡಿಸಲಾಗಿದೆ.

**ಸಹಿ/- ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದಾವಣಗೆರೆ ತಾಲ್ಲೂಕು**

**ಸಹಿ/- ಭೂ ದಾಖಲೆಗಳ ಉಪನಿರ್ದೇಶಕರು, ದಾವಣಗೆರೆ ಜಿಲ್ಲೆ**

# ನಗರದಲ್ಲಿ ಇಂದಿನಿಂದ ಶ್ರೀ ಅನ್ನಪೂರ್ಣೇಶ್ವರಿ ರಥೋತ್ಸವ



ಶ್ರೀ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿ ರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ದಲ್ಲಿ ಇಂದಿನಿಂದ ಫೆಬ್ರವರಿ 4ರವರೆಗೆ ಐದು ದಿನಗಳ ಕಾಲ ಶ್ರೀ ದೇವಿಯ ರಥೋತ್ಸವ ಕಾರ್ಯಕ್ರಮಗಳು ವಿಜೃಂಭಣೆ ಯಿಂದ ನಡೆಯಲಿವೆ ಎಂದು ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ಆರ್.ಜಿ.ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 7.30ಕ್ಕೆ ಅಭಿಷೇಕ, ದೀಪಾ ರಾಧನೆ, ಗಣಪತಿ ಹೋಮ, ಸಂಜೆ ಶ್ರೀಮತಿ ಶೀಲಾ ನಟರಾಜ್ ಮತ್ತು ಸಂಗಡಿಗ ರಿಂದ ಭಜನೆ ಜರುಗಲಿದೆ ಎಂದರು.

ನಂತರ ಸಂಜೆ 7 ಕ್ಕೆ ಧಾರ್ಮಿಕ ಮತ್ತು ಅಧ್ಯಾತ್ಮಿಕ ವಿಚಾರಗಳ ಕುರಿತಂತೆ ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಮತ್ತು ಅಂಕಣ ಕಾರ ಜಗನ್ನಾಥ್ ನಾಡಿಗೇರ್ ಅವ ರಿಂದ ಉಪನ್ಯಾಸ ಏರ್ಪಾಡಾಗಿದೆ.

ಫೆಬ್ರವರಿ 1ರ ಶನಿವಾರ ಬೆಳಿಗ್ಗೆ 6 ಕ್ಕೆ ಶ್ರೀ ದೇವಿಗೆ ಪುಷ್ಪಾರ್ಚನೆ, ಕುಂಕುಮಾರ್ಪಣೆ, ಪಾರಾಯಣ, ನವಗ್ರಹ ಶಾಂತಿ ಹೋಮ, ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 5 ಗಂಟೆಗೆ ತುಳಸಿ ಅರ್ಚನೆ, ಭಜನೆ, ಸಾಂಸ್ಕೃತಿಕ ಕಾರ್ಯ ಕ್ರಮ, ಸಂಜೆ 7ಕ್ಕೆ ತಪಸ್ಯ ವಾಸವಿ ನೃತ್ಯಾಲಯ ಮಕ್ಕಳಿಂದ ನೃತ್ಯ ಪ್ರದರ್ಶನ ಜರುಗಲಿದೆ.

ಫೆಬ್ರವರಿ 2ರ ಭಾನುವಾರ ಬೆಳಿಗ್ಗೆ 6 ಕ್ಕೆ ನವಚಂಡಿಕಾ ಯಾಗ, ಸಂಜೆ 6ಕ್ಕೆ ಶ್ರೀ ಸೀತಾರಾಮ ಕಲ್ಯಾಣೋತ್ಸವ ಏರ್ಪಾಡಾಗಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷರೂ ಆಗಿರುವ ಹಿರಿಯ ನ್ಯಾಯವಾದಿ ಪ್ರಕಾಶ್ ಪಾಟೀಲ್ ಹೇಳಿದರು.

ಫೆಬ್ರವರಿ 3ರ ಸೋಮವಾರ ಬೆಳಿಗ್ಗೆ ಸುದರ್ಶನ ಹೋಮ, ರುದ್ರ ಹೋಮ, ಸಂಜೆ 6.30ಕ್ಕೆ ಶ್ರೀ ವಾಸವಿ ಗಾನಾಮೃತ ತಂಡದಿಂದ ನೃತ್ಯ ಮತ್ತ ಸಂಗೀತ ಸೇವೆ ನಡೆಯಲಿದೆ.

ಫೆಬ್ರವರಿ 4ರ ಮಂಗಳವಾರ 8ಕ್ಕೆ ಅಭಿಷೇಕ, ಮಧ್ಯಾಹ್ನ 12.05ಕ್ಕೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ, ಸಂಜೆ 5ಕ್ಕೆ ಶ್ರೀ ವಾಸವಿ ಯುವತಿಯರ ಭಜನಾ ಮಂಡಳಿ ಯಿಂದ ಭಜನೆ ಜರುಗಲಿದೆ.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಪಾಲಿಕೆ ಮಹಾಪೌರರಾದ ಕೆ. ಚಮನ್ ಸಾಬ್, ಪಾಲಿಕೆ 15ನೇ ವಾರ್ಡಿನ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಅವರುಗಳು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

# ಸಣ್ಣ ಉದ್ಯಮಗಳ ಹೊಸ ಸಾಲ ಗ್ಯಾರಂಟಿ ಯೋಜನೆ ಹೂಡಿಕೆಗೆ ಸಹಕಾರಿ

ನವದೆಹಲಿ, ಜ. 30 - ಕೇಂದ್ರ ಸರ್ಕಾರ ಸಣ್ಣ ಉದ್ಯಮಗಳು 100 ಕೋಟಿ ರೂ.ಗಳ ವರೆಗೆ ಸಾಲ ಪಡೆಯಲು ಹೊಸ ಸಾಲ ಗ್ಯಾರಂಟಿ ಯೋಜನೆ ರೂಪಿಸಿ ರುವುದು ಹೂಡಿಕೆ ಆಕರ್ಷಿಸಲಿದೆ ಹಾಗೂ ಉತ್ಪಾದನೆಗೆ ಉತ್ತೇಜನ ನೀಡಲಿದೆ ಎಂದು ಪರಿಣಿತರು ಹೇಳಿದ್ದಾರೆ.

ರಫ್ತು ವಲಯದಲ್ಲಿರುವ ಸಣ್ಣ ಉದ್ಯಮಗಳು ದೀರ್ಘಕಾಲದಿಂದ ಬಂಡವಾಳ ಕೊರತೆಯ ಸಮಸ್ಯೆ ಎದುರಿಸುತ್ತಿದ್ದವು. ಇದರಿಂದಾಗಿ ಈ ಕಂಪನಿಗಳು ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆ ನಡೆಸಲು ಸಮಸ್ಯೆ ಆಗುತ್ತಿತ್ತು ಎಂದು ಪರಿಣಿತರು ಹೇಳಿದ್ದಾರೆ.

ಸರ್ಕಾರ ಈಗ ಮ್ಯೂಚುಯಲ್ ಕ್ರೆಡಿಟ್ ಗ್ಯಾರಂಟಿ ಸ್ಕೀಮ್ ಜಾರಿಗೆ ತಂದಿದೆ. ಈ ಯೋಜನೆ ಮೂಲಕ ನ್ಯಾಷನಲ್ ಕ್ರೆಡಿಟ್ ಗ್ಯಾರಂಟಿ ಟ್ರಸ್ಟಿ ಕಂಪನಿಯಿಂದ ಶೇಕಡ 60ರಷ್ಟು ಸಾಲಕ್ಕೆ ಗ್ಯಾರಂಟಿ ನೀಡಲಾಗುವುದು. ಈ ಯೋಜನೆಯ ಮೂಲಕ ಸಣ್ಣ ಉದ್ಯಮಗಳು 100 ಕೋಟಿ ರೂಪಾಯಿವರೆಗೆ ಸಾಲ ಪಡೆಯಲು ಅವಕಾಶ ಇರಲಿದೆ. ಉದ್ಯಮ್ ನೋಂದಣಿ ಸಂಖ್ಯೆ ಹೊಂದಿರಬೇಕು ಎಂಬುದು ಸೇರಿದಂತೆ ಹಲವು ಷರತ್ತುಗಳಿಗೆ ಒಳಪಟ್ಟು ಈ ಸಾಲ ನೀಡಲಾಗುವುದು.

ಈ ಸಾಲದಿಂದ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಉದ್ಯಮಗಳು ಉತ್ಪಾದನಾ ವಲಯದಲ್ಲಿ ಹಾಗೂ ರಫ್ತಿನಲ್ಲಿ ತೊಡಗಿಕೊಳ್ಳಲು ಸಾಕಷ್ಟು ನೆರವಾಗಲಿದೆ ಎಂದು ರಫ್ತು ಸಂಘಟನೆಗಳ ಒಕ್ಕೂಟವಾದ ಎಫ್‌ಐಇಓ ಪ್ರಧಾನ ನಿರ್ದೇಶಕ ಅಜಯ್ ಸಹಲ್ ಹೇಳಿದ್ದಾರೆ.

ಸರ್ಕಾರದ ಈ ಯೋಜನೆಯು ಭಾರತದ ಉದ್ಯಮಗಳು ಜಾಗತಿಕ ಮೌಲ್ಯವರ್ಧನೆ ಸರಣಿಯಲ್ಲಿ ಸ್ಪರ್ಧೆಯಾಗಲು ದೊಡ್ಡ ಪ್ರಮಾಣದಲ್ಲಿ ನೆರವಾಗಲಿದೆ ಎಂದು ಅಂತರರಾಷ್ಟ್ರೀಯ ವ್ಯಾಪಾರದ ಪರಿಣಿತ ಹಾಗೂ ಹೈಟೆಕ್ ಗೇರ್ಸ್ ಅಧ್ಯಕ್ಷ ದೀಪಕ್ ಕಪೂರಿಯ ಹೇಳಿದ್ದಾರೆ. ಉತ್ಪಾದನಾ ಘಟಕಗಳನ್ನು ಭಾರತಕ್ಕೆ ವರ್ಗಾಯಿಸುವ ದಿಸೆಯಲ್ಲೂ ಈ ಯೋಜನೆ ನೆರವಾಗಲಿದೆ. ಸಣ್ಣ ಉದ್ಯಮಗಳು ರಫ್ತು ವಲಯದಲ್ಲಿ ಹೆಚ್ಚಿನ ಕೊಡುಗೆ ನೀಡುತ್ತವೆ ಎಂದವರು ಹೇಳಿದ್ದಾರೆ.

ದೇಶದ ಉತ್ಪಾದನಾ ಸಾಮರ್ಥ್ಯ ಪೂರ್ಣವಾಗಿ ಬಳಕೆ ಮಾಡಿಕೊಳ್ಳುವಲ್ಲಿ ಈ ಯೋಜನೆ ನೆರವಾಗಲಿದೆ. ಇದರಿಂದ ಭಾರತದ ಜಿಡಿಪಿ ಹೆಚ್ಚಿಸಲು ಸಹ ನೆರವಾಗ ಲಿದೆ ಎಂದು ಜವಳಿ ರಫ್ತು ಉತ್ತೇಜನ ಮಂಡಳಿಯ ಪ್ರಧಾನ ಕಾರ್ಯದರ್ಶಿ ಮಿಥಿಲೇಶ್ವರ ಠಾಕೂರ್ ಹೇಳಿದ್ದಾರೆ.

ಸಣ್ಣ ಉದ್ಯಮಗಳಲ್ಲಿ ಜವಳಿ ವಲಯದ ಪಾಲು ಹೆಚ್ಚಾಗಿದೆ. ಹೀಗಾಗಿ ಜವಳಿ ವಲಯಕ್ಕೆ ಈ ಯೋಜನೆ ಹೆಚ್ಚು ಲಾಭ ತರಲಿದೆ ಹಾಗೂ ಉದ್ಯೋಗ ಸೃಷ್ಟಿಗೆ ನೆರವಾಗಲಿದೆ ಎಂದವರು ತಿಳಿಸಿದ್ದಾರೆ.

## ಕುಂಭಮೇಳ ದುರಂತದ ಬಗ್ಗೆ ಸಂಸತ್ತಿನಲ್ಲಿ ಚರ್ಚಿಸಲು ವಿಪಕ್ಷಗಳ ಒತ್ತಾಯ

ನವದೆಹಲಿ, ಜ. 30 - ಕುಂಭಮೇಳದಲ್ಲಿ ನಡೆದ ಕಾಲ್ತುಳಿತ ದುರಂತದ ಬಗ್ಗೆ ಸಂಸತ್ತಿನಲ್ಲಿ ಚರ್ಚಿಸಬೇಕು ಎಂದು ಸರ್ವ ಪಕ್ಷಗಳ ಸಭೆಯಲ್ಲಿ ಪ್ರತಿಪಕ್ಷಗಳು ಒತ್ತಾಯಿಸಿವೆ. ಕಲಾಪಗಳ ಸಲಹಾ ಸಮಿತಿಯು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ನಾಳೆ ಶುಕ್ರವಾರದಿಂದ ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಸರ್ವ ಪಕ್ಷಗಳ ಸಭೆ ನಡೆಯಿತು.

ಸಭೆ ರಚನಾತ್ಮಕವಾಗಿ ನೆರವೇರಿತು. ಸರ್ಕಾರ ಪ್ರತಿಪಕ್ಷಗಳಿಂದ ಅಧಿವೇಶನಕ್ಕೆ ಸಹಕಾರ ಕೋರಿದೆ ಎಂದು ರಿಜಿಜು ಹೇಳಿದ್ದಾರೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 30-1-2025ರಂದು ನಿಧನರಾದ ಜೈನ ಸಮಾಜದ

**ವೀರ ಸೈನಿಕ ಧರ್ಮೇಶ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಡಾ. ಶಾಮನೂರು ಶಿವಶಂಕರಪ್ಪನವರು, ಶಾಸಕರು
- ಎಸ್. ಎಸ್. ಮಲ್ಲಿಕಾರ್ಜುನ್‌ರವರು, ಸಚಿವರು
- ಡಾ. ಪ್ರಭಾ ಮಲ್ಲಿಕಾರ್ಜುನ್, ಸಂಸದರು
- ದಿನೇಶ್ ಕೆ. ಶೆಟ್ಟಿ, ಅಧ್ಯಕ್ಷರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ

ಜೈನ್ ಸಮಾಜದ ಮುಖಂಡರಾದ :

- ಪೂನಮ್ ಚಂದ್ ✦ ಕುಂದನ್ ಮಲ್
- ಮಹೇಂದ್ರ ಕುಮಾರ್ ಜೈನ್ ✦ ಜಯಂತಿಲಾಲ್
- ವಿಜಯ್ ಕುಮಾರ್ ಜೈನ್ ✦ ಬೋಟಾ ಕಿಶೋರ್
- ಮಹೇಂದ್ರ ಜೈನ್ ✦ ನರೇಂದ್ರ ಕುಮಾರ್
- ರಿದ್ಧಿ ಸಿದ್ಧಿ ಫೌಂಡೇಶನ್ ಅಧ್ಯಕ್ಷರಾದ ರಾಜು ಭಂಡಾರಿ
- ಶ್ರೀಕಾಂತ್ ಬಗರೆ



## ಹತ್ತನೇ ವರ್ಷದ ಪುಣ್ಯ ಸ್ಮರಣೆ



**ಹಳ್ಳಿಕೇರಿ ಬಸವರಾಜಪ್ಪ**

ಜನನ : 12-05-1952 ನಿಧನ : 31-01-2015

* ಹಳ್ಳಿಕೇರಿ ಸೇಲ್ಸ್ ಕಾರ್ಪೋರೇಷನ್, ಪಿ. ಬಿ. ರಸ್ತೆ, ದಾವಣಗೆರೆ * ಹಳ್ಳಿಕೇರಿ ಇಂಡಸ್ಟ್ರೀಸ್, ಪೀಣ್ಯ ಕೈಗಾರಿಕಾ ಪ್ರದೇಶ, 2ನೇ ಹಂತ, ಬೆಂಗಳೂರು

* ಹಳ್ಳಿಕೇರಿ ಇಂಡಸ್ಟ್ರೀಸ್, ಕರೂರು ಕೈಗಾರಿಕಾ ಪ್ರದೇಶ, ದಾವಣಗೆರೆ * ಹಳ್ಳಿಕೇರಿ ಫ್ಯೂಯಲ್ ಸ್ಟೇಷನ್, ಹರಿಹರ ದಾವಣಗೆರೆ ರಸ್ತೆ, ದೊಡ್ಡಬಾತಿ

ಶ್ರೀಮತಿ ನೀಲಾಂಬಿಕ ಹಳ್ಳಿಕೇರಿ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಹಳ್ಳಿಕೇರಿ ವಂಶಸ್ಥರು ಮತ್ತು ಬಂಧು ಮಿತ್ರರು



ನೋಂದಣಿ ಸಂಖ್ಯೆ : ಎ.ಆರ್.ಸಿ./53/ದಿನಾಂಕ : 23.09.1943

## ಹರಿಹರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಭಾರತ್ ಆಯಿಲ್ ಮಿಲ್ ಕಾಂಪೌಂಡ್, ಹರಿಹರ - 577601 ದಾವಣಗೆರೆ ಜಿಲ್ಲೆ.

ಕ್ರ. ಸಂಖ್ಯೆ : 01/2024-25 ದಿನಾಂಕ : 28.01.2025

### ಪ್ರಕಟಣೆ ಕೃಪೆಗಾಗಿ

ಹರಿಹರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಭಾರತ್ ಆಯಿಲ್ ಮಿಲ್ ಕಾಂಪೌಂಡ್, ಹರಿಹರ. ಇದರ ಮುಂದಿನ 05 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆಯನ್ನು ದಿನಾಂಕ : 14.02.2015 ರಂದು ಸಂಘದ ಕಛೇರಿ ಆವರಣದಲ್ಲಿ ನಡೆಸಲಾಗುವುದು, ಈ ಸಂಬಂಧ ದಿನಾಂಕ : 28.01.2025 ರಂದು ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿದ್ದು, ಅದನ್ನು ಸಂಘದ ಪ್ರತಿಯೊಬ್ಬ ಅರ್ಹ ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಿ ಸಂಘದ ಕಛೇರಿ ನಾಮಫಲಕದಲ್ಲಿ ಪ್ರಕಟಿಸಲಾಗಿರುತ್ತದೆ. ಆದಾಗಿಯೂ ಅಂಚೆ ತಲುಪದ ಹಾಗೂ ಎಲ್ಲಾ ಸದಸ್ಯರ ತಿಳುವಳಿಕೆಗಾಗಿ ಈ ಪ್ರಕಟಣೆಯನ್ನು ನೀಡಲಾಗಿರುತ್ತದೆ.

1. ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ : 06.02.2025
2. ನಾಮಪತ್ರ ಪರಿಶೀಲನೆ ದಿನಾಂಕ : 07.02.2025
3. ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನಾಂಕ : 08.02.2025
4. ಅವಶ್ಯವಿದ್ದಲ್ಲಿ ಚುನಾವಣೆ ದಿನಾಂಕ : 14.02.2025 ರಂದು ಸಂಘದ ಕಚೇರಿ ಆವರಣದಲ್ಲಿ ನಡೆಸಲಾಗುವುದು.

ಸಹಿ /-
(ಹೆಚ್. ಸುನೀತ)
ರಿಟರ್ನಿಂಗ್ ಅಧಿಕಾರಿ,
ಹರಿಹರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಹರಿಹರ ತಾಲ್ಲೂಕು, ಹರಿಹರ.

ದಿನಾಂಕ : 28.01.2025
ಸ್ಥಳ : ಹರಿಹರ


## ಮಂಡಿಪೇಟೆ ಜ್ಯುವೆಲರಿ ಶಾಪ್‌ನಲ್ಲಿ ಕಳ್ಳತನ



ದಾವಣಗೆರೆ, ಜ.30- ನಗರ ಪ್ರಮುಖ ವ್ಯಾಪಾರಿ ಸ್ಥಳವಾದ ಮಂಡಿಪೇಟೆ ಎನ್.ಆರ್. ರಸ್ತೆಯ ಜ್ಯುವೆಲರಿ ಶಾಪ್ ನಲ್ಲಿ ಬುಧವಾರ ರಾತ್ರಿ ಕಳ್ಳತನ ನಡೆದಿದೆ. ಎಚ್.ಕೆ.ಎ. ಜುವೆಲರ್ಸ್ ಅಂಗಡಿಯ ಶಟರ್ ಮುರಿದು, ಒಳನುಗ್ಗಿರುವ ಕಳ್ಳರು ಅಂಗಡಿಯಲ್ಲಿದ್ದ ಚಿನ್ನಾಭರಣಗಳನ್ನು ದೋಚಿ ಪರಾರಿಯಾಗಿದ್ದಾರೆ.

ಬೆಳಿಗ್ಗೆ ವಿಷಯ ತಿಳಿಯುತ್ತಿದ್ದಂತೆ ಮಾಲಿಕರು ಸ್ಥಳಕ್ಕೆ ದೌಡಾಯಿಸಿ ಬಸವ ನಗರ ಠಾಣೆಗೆ ದೂರು ನೀಡಿದ್ದು ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

## ಮಹಾಕುಂಭದಲ್ಲಿ 15 ಟೆಂಟ್‌ಗೆ ಬೆಂಕಿ

ಮಹಾಕುಂಭ ನಗರ, ಜ. 30 - ಇಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಸೆಕ್ಟರ್ 22 ವಲಯದ ಹೊರಗೆ 15 ಟೆಂಟ್‌ಗಳು ಬೆಂಕಿಗೆ ಆಹುತಿಯಾಗಿವೆ. ಈ ಅವಘಡದಲ್ಲಿ ಯಾರಿಗೂ ಹಾನಿಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ ಗುರುವಾರ ಮಧ್ಯಾಹ್ನ ಬೆಂಕಿ ಕಾಣಿ ಸಿಕೊಂಡಿದೆ. ಅದನ್ನು ತಕ್ಷಣವೇ ನಂದಿಸ ಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ನಗರದಲ್ಲಿ ಮೆಡಿಕಾನ್ ಓವರ್‌ಸೀಸ್ ಉದ್ಘಾಟನೆ

ಎಂಸಿಸಿ 'ಬಿ' ಬ್ಲಾಕ್ ಪ್ರಗತಿ ಗ್ರಾಮೀಣ ಬ್ಯಾಂಕ್ ಎದುರುಗಡೆ ಮೆಡಿಕಾನ್ ಓವರ್‌ಸೀಸ್ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಮೇಯರ್ ಕೆ.ಚಮನ್ ಸಾಬ್ ಅವರು ಉದ್ಘಾಟಿಸುವರು. ಮುಖ್ಯ ಅತಿಥಿ : ಜಿ.ಎಸ್. ಮಂಜುನಾಥ್ ಗಡಿಗುಡಾಳ್.









## ನ್ಯೂ ಎಂ.ಜಿ.ಎಸ್ ಜ್ಯೂಯಲರ್ಸ್

ಬೆಳ್ಳಿ-ಬಂಗಾರದ ಅಂಗಡಿ

ನಂ.635/2, ಆನಂದ್ ಬುಕ್ ಡಿಪೋ ಎದುರು, ಮಂಡಿಪೇಟೆ ರಸ್ತೆ, ದಾವಣಗೆರೆ. ಮೊ: 9110621233

EXCLUSIVE SHOWROOM FOR 91.6% HALLMARK JEWELLERY



ನಮ್ಮ ನ್ಯೂ ಎಂ.ಜಿ.ಎಸ್.ಜ್ಯೂಯಲರ್ಸ್ 5ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ನಮ್ಮೆಲ್ಲಾ ಗ್ರಾಹಕರಿಗೆ ನಮ್ಮ ಅಂಗಡಿಯ ವತಿಯಿಂದ

**3 ದಿನದ ವಿಶೇಷ ಕೊಡುಗೆ (31 Jan 1, 2 Feb)**

ಯಾವುದೇ ತರಹದ 916 ಹಾಲ್‌ಮಾರ್ಕ್‌ನ ಆಭರಣಗಳ ಮೇಲೆ 9% ಮತ್ತು ಬೆಳ್ಳಿ ಆಭರಣಗಳ ಮೇಲೆ ವೇಸ್ಟೇಜ್ ಮಜೂರಿ ಇರುವುದಿಲ್ಲ

### ಶ್ರೀ ಇಡಗುಂಜಿ ಮಹಾಗಣಪತಿ ಸುವರ್ಣ ಉಳಿತಾಯ ಯೋಜನೆ

ಈಗ ಮಾಸಿಕ ರೂ 2000/- 20,000/- ರೂ ಗಳವರೆಗೆ 18 ತಿಂಗಳು ಪಾವತಿಸಿ ನೀವು ಪಾವತಿಸುವ ದಿನದ ದರದಂತೆ ಜಮಾ ಆಗಿರುವ ಬಂಗಾರದ ತೂಕಕ್ಕೆ ವೇಸ್ಟೇಜ್, ಮಜೂರಿ ಇಲ್ಲದೆ ಆಭರಣಗಳನ್ನು ಕೊಡಲಾಗುವುದು

**ಉದಾಹರಣೆ**

| ನಂ | ದಿನಾಂಕ | ಮೊಬಲಗು | ಬಂಗಾರದ ಬೆಲೆ | ತೂಕ |
|---|---|---|---|---|
| 01 | 01-01-2025 | 2000/- | 75000/- | 0.266 GM |
| 02 | 01-01-2025 | 3000/- | 75000/- | 0.400 GM |
| 03 | 01-01-2025 | 5000/- | 75000/- | 0.666 GM |
| 04 | 01-01-2025 | 10000/- | 75000/- | 1.333 GM |

* Terms & Condition Apply

ಈ ರೀತಿ ಜಮಾ ಮಾಡಿದ ಬಂಗಾರಕ್ಕೆ ಯಾವುದೇ ರೀತಿ ವೇಸ್ಟೇಜ್, ಮಜೂರಿ ಇರುವುದಿಲ್ಲ. ಸರ್ಕಾರದ ಅನ್ವಯ 91.6 HUID ಚಿಹ್ನೆಯುಳ್ಳ ಆಭರಣಗಳನ್ನೆ ಕೊಡಲಾಗುವುದು ನಮ್ಮಲ್ಲಿ ಸುಂದರವಾದ 91.6 ಆ್ಯಂಟಿಕ್ ಬಹುಸುಂದರ ವಿನ್ಯಾಸದ ಬಂಗಾರದ ಆಭರಣಗಳು ಲಭ್ಯವಿದೆ ಇದೀಗ ಹೊಸದಾಗಿ ಲಕ್ಕಿ ಡ್ರಾ ಸ್ಕೀಮ್ ಪ್ರಾರಂಭವಾಗಿರುತ್ತದೆ ಸದಸ್ಯರಾಗಲು ಬಯಸುವವರು ಹೆಸರನ್ನು ನೋಂದಾಯಿಸತಕ್ಕದ್ದು


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas